# ನೇಸರು

ತಿಂಗಳೋಲೆ

₹ 5/-

PAGES 24

NOVEMBER 2018 | Nesaru Tingalole | Vol. XXXVI - 11



## ನಮ್ಮೆಲ್ಲರ ಅಚ್ಚುಮೆಚ್ಚಿನ ಚಂಪಕನಾಥ್

ಮೈಸೂರು ಅಸೋಸಿಯೇಷನ್ ಮುಂಬೈ

**THE MYSORE ASSOCIATION, BOMBAY**

393, Bhau Daji Road, Matunga, Mumbai - 400 019. । Tel.: 2402 4647, 2403 7065

Email : mysoreassociation.mumbai@gmail.com

# ಮದುವೆ ಇಂದಿನ ಸಮಾಜ ವ್ಯವಸ್ಥೆಗೆ ಅಗತ್ಯವೇ?

ಈ ಚರ್ಚೆಯಲ್ಲಿ ಸುಮಾರು 40 ಮಂದಿ ಭಾಗವಹಿಸಿದ್ದರು. ಡಾ. ಮಂಜುನಾಥರು ಈ ವಿಷಯವನ್ನು ಮುಂದಿಡುತ್ತಾ, ಈಗ ಕೋರ್ಟುಗಳು ಮದುವೆಯ ವಿಷಯದಲ್ಲಿ ಬಹಳ ಮಾರ್ಪಾಡಾಗುವ ತೀರ್ಮಾನಗಳನ್ನು ನೀಡಿರುವುದರಿಂದ, ಸಮಾಜ ಇದರ ಬಗ್ಗೆ ಮತ್ತೆ ವಿಚಾರ ಮಾಡಬೇಕಾದುದು ಅಗತ್ಯ.



ಶಶಿಕಾಂತ ಜೋಷಿಯವರು ಮಾತನಾಡಿ, ಮದುವೆಯ ವ್ಯವಸ್ಥೆ ಸಮಾಜದ ಬೆಳವಣಿಗೆಗೆ ಅಗತ್ಯ. ಸಂತಾನವನ್ನು ಕಾಪಾಡುವುದು ಅಂತೆಯೇ ಅವರ ನಡೆವಳಿಕೆಗಳನ್ನು ತಿದ್ದುವುದಕ್ಕೆ ತಂದೆ ತಾಯಿ ಒಂದೇ ಕುಟುಂಬವನ್ನು ಸ್ಥಾಪಿಸುವುದು ಅಗತ್ಯ ಎಂದರು. ಈ ವ್ಯವಸ್ಥೆ ಇಲ್ಲದಿದ್ದರೆ, ಸಮಾಜದಲ್ಲಿ ಬಿಗಿಯೇ ತಪ್ಪಿ ಹೋಗುತ್ತದೆ. ಮಕ್ಕಳು ಯಾರಿಗೂ ಸೇರಿಲ್ಲದವರಂತೆ ಆಗುತ್ತಾರೆ, ಎಂದರು.

ಕೆ. ಮಂಜುನಾಥಯ್ಯನವರು ಮಾನವ ಜನಾಂಗ ಮೊದಲಿಗೆ ಮದುವೆಯ ವ್ಯವಸ್ಥೆಯನ್ನು ಹೊಂದಿರಲಿಲ್ಲ ಇದರಿಂದ ಸಾಕಷ್ಟು ಹೊಡೆದಾಟವಾಗುತ್ತಿದ್ದುದೇ ಇಲ್ಲ, ಹೆಂಗಳೆಯರಿಗೆ ರಕ್ಷಣೆಯೇ ತಪ್ಪಿಹೋಗುತ್ತಿತ್ತು. ಆದರೆ ಮದುವೆ ಎಂಬ ವ್ಯವಸ್ಥೆ ಬಂದ ಮೇಲೆ, ಗಂಡು ಹೆಣ್ಣಿನ ಸಂಬಂಧಕ್ಕೆ ಒಂದು ಮರ್ಯಾದೆ – ಗೌರವ ಮೂಡಿ ಬಂತು. ಮಕ್ಕಳ ಹಾಗೆಯೇ ಆಸ್ತಿಯ ಹಕ್ಕಿಗೆ ಒಂದು ವ್ಯವಸ್ಥೆಯಾಯಿತು. ಆದರೆ ಈ ವ್ಯವಸ್ಥೆಯೇ, ಹೆಣ್ಣು – ಗಂಡಿಗೆ ಬೇರೆ ಬೇರೆ ಪಾತ್ರಗಳನ್ನು ವಿಧಿಸಿ, ಹೆಣ್ಣನ್ನು ಮನೆಯಾಳು ಆಗಿ ಮಾಡುವುದಕ್ಕೂ ನೆರವಾಯಿತು. ಹೀಗಾಗಿ, ಹೆಣ್ಣಿಗೆ ತನ್ನದೇ ಸ್ವಾತಂತ್ರವೇ ಸ್ವತಂತ್ರವಾಗಿರುವಾಗ ಆಕೆ, ಮದುವೆಗೆ ಈಗ ಹೊಸ ಅರ್ಥವನ್ನು ಕಲ್ಪಿಸುವುದು ಸಹಜ ಎಂದರು.

ಕು. ಕಮಲಾ ಅವರು ಮಾತನಾಡಿ, ನಮ್ಮ ಸಮಾಜದಲ್ಲಿ ಮದುವೆ ಎರಡು ಮನೆತನಗಳ ಸಂಬಂಧ. ಕೇವಲ ಎರಡು ವ್ಯಕ್ತಿಗಳ ಸಂಬಂಧ ಅಲ್ಲ. ಈ ಮನೆತನಗಳ ಸಂಬಂಧ, ಸಮಾಜದ ಸಂಬಂಧವೂ ಆಗುತ್ತದೆ. ಹಿಂದೆ ರಾಜಮನೆತನಗಳು ಮದುವೆಯ ಸಂಬಂಧದಿಂದ ಒಂದಾಗಿ ಯುದ್ಧ ನಿವಾರಣೆ ಆಗುತ್ತಿತ್ತು. ಮದುವೆಯಾದ ನಂತರ ಎರಡು ವ್ಯಕ್ತಿಗಳು, ಇರುವ ಮನೆತನವನ್ನು ಮುಂದುವರೆಸಿಕೊಂಡು ಹೋಗುತ್ತಾರೆಯೇ ಹೊರತು, ಬೇರೆ ಸಂಸ್ಕೃತಿಗಳಂತೆ ತಮ್ಮದೇ ಸಂಸಾರ ಮೊದಲು ಮಾಡುವುದಿಲ್ಲ ಎಂದರು.

ಶ್ರೀಜಿತ್ ಮಾತನಾಡಿ, ಮದುವೆ ಮನುಷ್ಯನ ಜೀವನದಲ್ಲಿ ಮುಖ್ಯವಾದ ಅಂಗ, ಅದರಿಂದ ನಡವಳಿಕೆ, ಹೊಣೆಗಾರಿಕೆ ಎಲ್ಲವೂ ಮಾರ್ಪಾಡಾಗುತ್ತದೆ. ನಾನು, ನನ್ನ ಅಪ್ಪ–ಅಮ್ಮನನ್ನು ನೋಡಿದ್ದೇನೆ. ಅವರ ಪಾರ್ಟನರ್‌ಶಿಫ್ ಅನ್ನುವುದು ಮಾದರಿಯಾಗಿದೆ ಎಂದ.

ಪ್ರಜ್ಞಾ ಕಶ್ಯಪ್, ಸಮಾಜ, ಕಿರಿಯರ ಮೇಲೆ ಒತ್ತಡ ಹೇರುತ್ತದೆ. ನೀನು ಇಷ್ಟು ವಯಸ್ಸಿಗೆ ಮದುವೆಯಾಗಲೇ ಬೇಕು. ಇಷ್ಟು ಮಕ್ಕಳಾಗಲೇ ಬೇಕು ಎಂದು. ಆದರೆ ಮದುವೆ ನನ್ನಿಷ್ಟ. ಯಾರ ಜೊತೆ, ನಾನು ನನ್ನ ಬಾಳನ್ನು ಕಳೆಯಬೇಕು ಎಂಬುದು ನನ್ನ ತೀರ್ಮಾನ. ನಾನು 40 ರ ಮೇಲೆಯೇ ಮದುವೆಯಾಗಬಹುದು. ಇದರಲ್ಲಿ ನಾನು ಯಾವ ಸಮಾಜದ ಒತ್ತಡವನ್ನೂ ಒಪ್ಪುವುದಿಲ್ಲ ಎಂದಳು.

ಆದಿತ್ಯ ಪುಟ್ಟು ಮಾತನಾಡಿ, ಮದುವೆ ಬೇಕು ಎಂದೇನೂ ಇಲ್ಲ ನನ್ನ ಜೀವನ ಸುಗಮವಾಗಿ ಸಾಗಬೇಕೆಂಬುದು ನನ್ನ ಇಚ್ಛೆ. ನನಗೆ ಬೇಡದಿದ್ದು, ಅಂತೆಯೇ ನಾನು ಆರಾಮವಾಗಿರುವುದು ನನ್ನ ಸ್ವಾತಂತ್ರ್ಯ. ಇಂದು ಮದುವೆಗೆ ಗಂಡು ಹೆಣ್ಣುಗಳೇ ಬೇಕೆಂದು ಹೊರಟು ಹೋಗಿದೆ. ಎಷ್ಟೋ ಗಂಡು –ಗಂಡುಗಳು, ಹೆಣ್ಣು–ಹೆಣ್ಣುಗಳು ಜೊತೆಯಲ್ಲಿ ಬಾಳು ಸಾಗಿಸುತ್ತಾರೆ. ಎಷ್ಟೋ ಗಂಡು ಹೆಣ್ಣಿನ ಮದುವೆ ಬೇಗನೆ ಮುರಿದು ಹೋಗುತ್ತವೆ. ಇದರಿಂದ ಮದುವೆ ಅಷ್ಟೇನೂ ಅಗತ್ಯದ ವ್ಯವಸ್ಥೆ ಆಲ್ಲ ಎಂದ.

ಡಾ. ಶಂಕರಲಿಂಗ್ ಅವರು ಈ ವಿಷಯವನ್ನು ಚರ್ಚೆಗೆ ತೆಗೆದುಕೊಂಡಿದ್ದೇ ಸರಿಯಿಲ್ಲ. ಎಷ್ಟೋ ಮಂದಿ ಹೆಂಗಸರಿಗೆ ಇದರಿಂದ ಮುಜುಗರವಾಗಿರಬಹುದು ಎಂದರು.

ಡಾ. ಮಂಜುನಾಥ್ ಅದನ್ನು ಎದಿರಿಸುತ್ತ, ಯಾವ ವಿಷಯಕ್ಕೂ, “ಮುಸುಕು” ಹಾಕಿಡುವ ನಮ್ಮ ಸಮಾಜದ ಬಗೆಯಿಂದಲೇ, ನಮಗೆ ಬಿಚ್ಚು ಮನಸ್ಸಿನಿಂದ ಯಾವುದನ್ನೂ ಚರ್ಚೆ ಮಾಡುವ, ಎದಿರಿಸುವ ಅಂತೆಯೇ ಕಿರಿಯರಿಗೆ ದಾರಿ ತೋರುವ ಹಕ್ಕನ್ನು ಕಳೆದುಕೊಂಡಿದ್ದೇವೆ. ಈಗ ತಾನೇ ಮಾತನಾಡಿದ ಕಿರಿಯರು, ಬಿಚ್ಚುಮಾತಿನಿಂದ ಇಂತಹ ಮುಸುಕನ್ನು ಹರಿದಿದ್ದಾರೆ, ಎಂದರು.ಶ್ಯಾಮಲಾ ರಾಧೇಶ್ ಮಾತನಾಡಿ, ಮದುವೆಯ ವ್ಯವಸ್ಥೆ ಸಮಾಜಕ್ಕೆ ಅತ್ಯಗತ್ಯ ಎಂದರು.

ಶ್ರೀಕೇಶ್ ನಮ್ಮ ಸಂಸ್ಕೃತಿಯಲ್ಲಿ ಮದುವೆ, ಮುಂಜಿ, ಶ್ರಾದ್ಧ, ಎಲ್ಲದಕ್ಕೂ ಒಂದು ಅರ್ಥವಿದೆ ಇದನ್ನು ನಾವೆಲ್ಲರೂ ಕಾಪಾಡಿ, ಬೆಳೆಸಿಕೊಂಡು ಬರಬೇಕೆಂದರು.

ಡಾ. ಮಂಜುನಾಥರು, ಮದುವೆ ಸಂಸಾರವೇ ಸ್ವಾರ್ಥದ ಮೊದಲ ಹೆಜ್ಜೆ ಎಂದರು. ಈ ಮದುವೆ, ತಾನು ತನ್ನದು ಎಂಬ ಬಗೆಯನ್ನು ಬೆಳೆಸಿ, ಇತರ ಮಂದಿಯನ್ನು ಶೋಷಣೆ ಮಾಡುವ ಒಂದು ಬಗೆಯಾಗಿದೆ. ಇಂದು ನಮ್ಮ ನಾಡಿನಲ್ಲಿ, ಕಾಶ್ಮೀರದಿಂದ, ಕನ್ಯಾಕುಮಾರಿಯವರೆಗೂ, ಕೇವಲ ಪರಿವಾರಗಳೇ ರಾಜ್ಯಭಾರ ಮಾಡುತ್ತಿದ್ದು, ತಂದೆಯಿಂದ – ಮಗನಿಗೆ, ಮಗನಿಂದ – ಮೊಮ್ಮಗನಿಗೆ ಪಟ್ಟವಾಗುತ್ತಿದ್ದು ಪ್ರಜಾಪ್ರಭುತ್ವವೇ ಇಲ್ಲದಂತಾಗಿದೆ. ಮದುವೆ ಇಲ್ಲದಿದ್ದರೆ, ಈ ಪರಿವಾರಗಳು ಇರುತ್ತಿರಲಿಲ್ಲ. ರಾಜ ರಾಜರೂ ಇರುತ್ತಿರಲಿಲ್ಲ, ಯುದ್ಧ, ದಂಗೆಗಳೂ ಕಡಿಮೆಯಾಗುತ್ತಿದ್ದವು ಎಂದರು.

ಅಂತೂ ಈ ಚರ್ಚೆ, ಬಿಚ್ಚು ಮನಸ್ಸಿನಿಂದ ಎಲ್ಲರೂ ಸೇರಿ ನಡೆದಿದ್ದುದು, ಒಂದು ಮೈಲಿಗಲ್ಲಾಯಿತು.

**ಮುಂದಿನ ಚರ್ಚೆ:**
ಶನಿವಾರ ಜನವರಿ 19, 2019 ಸಂಜೆ 6.00ಕ್ಕೆ
**ನಂಬಿಕೆ – ಕಾನೂನು**

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್

393, ಭಾವು ದಾಜಿ ರಸ್ತೆ,

ಮಾಟುಂಗ,

ಮುಂಬಯಿ-400 019.

✆ 24024647 / 2403 7065

Email :
mysoreassociation.mumbai@gmail.com

Website :
www.mysoreassociation.in

## *ಸಂಪಾದಕೀಯ*

# ನೇಸರು
## ತಿಂಗಳೋಲೆ

**ಸಂಪುಟ 24** **ಡಿಸೆಂಬರ್ 2018** **ಸಂಚಿಕೆ 12**

ಡಿವಿಜಿ ಎಂಬ ಹೆಸರಿನಿಂದ ಪ್ರಸಿದ್ಧರಾದ ಡಾ. ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪನವರು ಕರ್ನಾಟಕದ ಪ್ರಸಿದ್ಧ ಸಾಹಿತಿ, ಪತ್ರಕರ್ತರು. ಡಾ. ಆರ್. ಗಣೇಶ್ ಅವರು ಡಿವಿಜಿಯವರ ಜೀವನದ ನೂರಾರು ರಸಪ್ರಸಂಗಗಳನ್ನು ಕುರಿತು ಬರೆದ, 'ಬ್ರಹ್ಮಪುರಿಯ ಭಿಕ್ಷುಕ' ಎಂಬ ಕೃತಿಯನ್ನು ಓದುವ ಭಾಗ್ಯ ಸಿಕ್ಕಿತು. ಪುಸ್ತಕವನ್ನು ಓದುತ್ತಾ ಹೋದಂತೆ, ಅಕ್ಕಪಕ್ಕದ ಪರಿವೇ ಇರುವುದಿಲ್ಲ. ಈ ಕೃತಿಯಲ್ಲಿ ಡಿವಿಜಿಯವರ ವ್ಯಕ್ತಿತ್ವ ದರ್ಶನವನ್ನೂ ಬಹುಚೆನ್ನಾಗಿ ಮಾಡಿದ್ದಾರೆ. ಅವರ ಸುದೀರ್ಘವಾದ ಜೀವನ ನಮಗೆಲ್ಲರಿಗೂ ಆದರ್ಶಮಯವಾದುದು. ಅವರು ತಮ್ಮನ್ನು ಒಬ್ಬ ಸಾಹಿತಿ ಅನ್ನಿಸಿಕೊಳ್ಳುವುದಕ್ಕಿಂತ ತಾನೊಬ್ಬ ಪತ್ರಕರ್ತನಾಗಿ ಗುರುತಿಸಿಕೊಳ್ಳುದಕ್ಕೆ ಹೆಚ್ಚು ಹೆಮ್ಮೆಪಟ್ಟುಕೊಳ್ಳುತ್ತಿದ್ದರು.

"ಒಮ್ಮೆ ಡಿವಿಜಿಯವರನ್ನು ಅವರ ಸರೀಕಕರೊಬ್ಬರು ತಮ್ಮ ಮಿತ್ರರಿಗೆ ಪರಿಚಯಿಸುತ್ತಾ ಇವರು ಗುಂಡಪ್ಪ ದೊಡ್ಡ ಸಾಹಿತಿ ಎಂದಾಗ ಮಧ್ಯೆಯೇ ತಡೆದ ಡಿವಿಜಿ ಕ್ಷಮಿಸಿ ನಾನು ಮೊದಲು ಪತ್ರಕರ್ತ. ಜನಕ್ಕೆ ಯಾವುದೋ ಸಂಗತಿಗಳನ್ನು ವಿಷದವಾಗಿ ತಿಳಿಸಬೇಕೆಂಬ ಮಾನಸಿಕ ಒತ್ತಡ ಉಂಟಾದಾಗ ಪದ್ಯಗಳೋ, ಪ್ರಬಂಧಗಳೋ ಹುಟ್ಟಿಕೊಂಡಿದೆ ಅಷ್ಟೇ. ನಾನು ಸಾಹಿತ್ಯ ಕ್ಷೇತ್ರಕ್ಕೆ ಒಬ್ಬ ಆಗಂತುಕ" ಎಂದು ವಿನಂಮ್ರತೆಯಿಂದ ಹೇಳಿದರಂತೆ. ಈ ಸಂದರ್ಭದಲ್ಲಿ ಡಾ. ಶಿವರಾಮ ಕಾರಂತರ ನೆನಪಾಗುತ್ತದೆ. ಅವರೂ ಕೂಡ ತಮ್ಮ ಪತ್ರಿಕೆಯ ಪುಟಗಳನ್ನು ತುಂಬಿಸಲು, ಸ್ವತಃ ಲೇಖನ ಬರೆಯಲು ಶುರುಮಾಡಿದರು. ಅದಕ್ಕಾಗಿ ಪುಸ್ತಕಗಳನ್ನು ಓದಬೇಕಾಯಿತು. ಹೀಗೆ ನಾನು ಲೇಖಕನಾಗಿ ಬೆಳೆದೆ ಎಂದು ಅವರೇ ಸ್ಮತಿಪಟಲದಲ್ಲಿ ಹೇಳಿಕೊಂಡಿರುವುದನ್ನು ಗಮನಿಸಬಹುದು.

ಕಡುಬಡತನದಲ್ಲಿದ್ದರೂ ಯಾವತ್ತೂ ತಮ್ಮ ಪ್ರಾಮಾಣಿಕತೆಯನ್ನು ಬಿಟ್ಟುಕೊಟ್ಟಿಲ್ಲ. ತಮ್ಮ ವೃತ್ತಿಯಲ್ಲೂ ಅಷ್ಟೇ ಶ್ರದ್ಧೆ, ಪ್ರಾಮಾಣಿಕತೆಯನ್ನು ಜೀವನದ ಕೊನೆಯವರೆಗೂ ತದೇಕನಿಷ್ಠೆಯಿಂದ ಪಾಲಿಸಿದರು. ಮೈಸೂರಿನ ನಾಡಹಬ್ಬದ ಗುಣದೋಷಗಳ ಬಗ್ಗೆ ಅರ್ಥಪೂರ್ಣ ಲೇಖನವನ್ನು ಬರೆದ ಪತ್ರಕರ್ತರೆಲ್ಲರಿಗೂ ದಿವಾನರಾದ ಸರ್. ಎಂ. ವಿಶ್ವೇಶ್ವರಯ್ಯನವರು ಇನ್ನೂರೈವತ್ತು ರೂಪಾಯಿಗಳ ಚೆಕ್‌ನ್ನು ಗೌರವಧನವಾಗಿ ನೀಡಿದರು. ಆದರೆ ಡಿವಿಜಿಯವರು ಮಾತ್ರ ಇದನ್ನು ಸ್ವೀಕರಿಸಲಿಲ್ಲ. ಅವರು ದಿವಾನರಿಗೆ 'ಯಾವುದೇ ಪತ್ರಿಕೆಯಾಗಲಿ, ಪತ್ರಕರ್ತನಾಗಲಿ ಇಂತಹ ಸರಕಾರಿ ಸಂಭಾವನೆಗಳನ್ನು ಸ್ವೀಕರಿಸಬಾರದು. ಇದು ಪತ್ರಕರ್ತರು ಪ್ರಭುತ್ವದ ಹಂಗಿಗೊಳಗಾದಂತೆ; ಸ್ವತಂತ್ರವಾದ ವರದಿಗಳನ್ನು ಮಾಡದೆ, ಆಳುವವರ ಮೂಗಿನ ನೇರಕ್ಕೆ ವಾರ್ತೆಯನ್ನು ತಿದ್ದುವಂತೆ ದುಷ್ಪರಿಣಾಮಕಾರಿ. ಅಲ್ಲದೆ ಪ್ರತಿಯೊಬ್ಬ ಪತ್ರಕರ್ತನೂ ತನ್ನ ಕೆಲಸಕ್ಕೆ ಅವಶ್ಯಕವಾದಷ್ಟು ಖರ್ಚು-ವೆಚ್ಚಗಳನ್ನು ತಾನೇ ತೂಗಿಸಿಕೊಳ್ಳಬೇಕು" ಎಂದು ಮಾರುತ್ತರವಿತ್ತರಂತೆ. ಎಲ್ಲ ಪತ್ರಕರ್ತರೂ ಈ ಸಂಭಾವನೆಯನ್ನು ಸ್ವೀಕರಿಸಿದ್ದಾರೆ ಎಂದು ದಿವಾನರು ಸಮಜಾಯಿಷಿ ನೀಡಲು ಹೊರಟಾಗಲೂ ಡಿವಿಜಿಯವರು ವಿರೋಧಿಸುತ್ತಾ, "ಬೇರೆಯವರ ಮಾತು ಬೇಡ. ಅವರವರ ಧರ್ಮ ಅವರವರಿಗೆ. ನನಗೆ ಈ ಹಣ ಬೇಡ. ಕಡೆಗೂ ದಿವಾನರು ಮಣಿಯಬೇಕಾಯಿತು. ನಿಸ್ಪ್ರಹರಲ್ಲಿ ಅಗ್ರಗಣ್ಯರಾದ ವಿಶ್ವೇಶ್ವರಯ್ಯನವರೇ ಗುಂಡಪ್ಪನವರ ಅರ್ಥಶೌಚಕ್ಕೆ ತಲೆಬಾಗಿದ್ದರು. ಬಡತನದಲ್ಲಿದ್ದರೂ ತಮ್ಮ ಅಪರಿಗ್ರಹವ್ರತವನ್ನು ತಮ್ಮ ಜೀವನದ ಅವಿಭಾಜ್ಯ ಅಂಗವನ್ನಾಗಿಸಿಕೊಂಡಿದ್ದರು ಡಿವಿಜಿಯವರು. 'ಸೇವೆಗೆ ಪ್ರತಿಫಲವಿಲ್ಲ; ಪ್ರತ್ಯಾಶೆಯಂತೂ ಸರ್ವಥಾ ಹೇಯ' ಇದು ಡಿವಿಜಿಯವರ ನಿಲುವಾಗಿತ್ತು.

ಎಂಥ ಸಂದರ್ಭದಲ್ಲಿಯೂ ಹೃದ್ಯವಾದ ಹಾಸ್ಯಚಟಾಕಿಯನ್ನು ಹಾರಿಸಿ ವಾತಾವರಣವನ್ನು ತಿಳಿಯಾಗಿಸುವ ಜಾಣ್ಮೆ ಡಿವಿಜಿಯವರಲ್ಲಿತ್ತು. ಡಿವಿಜಿಯವರು ಒಮ್ಮೆ ವ್ಯಾಕರಣ ಕಲಿಯಲು ಗರಣಿಕೃಷ್ಣಾಚಾರ್ಯರಲ್ಲಿ ಹೋದಾಗ ಅವರಿಗೆ ಶಬ್ದಶಾಸ್ತ್ರ ಒಲಿಯದೆ ಸೂಪಶಾಸ್ತ್ರದಲ್ಲಿ ಪರಿಣತಿ ಪಡೆದುದಾಗಿ ಒಂದು ಹಾಸ್ಯಭರಿತ ಸಂಸ್ಕೃತ ಶ್ಲೋಕದಲ್ಲಿ ಹೇಳಿರುವುದನ್ನು ಇಲ್ಲಿ ಗಮನಿಸಬಹುದು.

"ನ ವೇದಾಂತೇ ಗಾಢಾ ನಚ ಪರಿಚಿತಂ ಶಬ್ದಶಾಸ್ತ್ರಂ।
ನ ವಾ ತರ್ಕೇ ವೇದೇ ನ ಚ ಸರಸತಾ ಕಾವ್ಯನಿಹವೇ।
ವಯಂ ಶ್ರೀಮದ್ಭ್ಯಾಳೀಹುಳಿ ಪಳದ್ಯ ಕೊಸುಂಬ್ರಿತೊವ್ವೀ।
ಹಯಗ್ರೀವಾಂಬೋಡೀ ಕರಿಗಡಬು ದಧ್ಯನ್ನ ರಸಿಕಾ॥"

ಅಂದರೆ, ನಾವು ವೇದಾಂತದಲ್ಲಿ ನುರಿತವರಲ್ಲ, ವ್ಯಾಕರಣವನ್ನೂ ಅರಿತವರಲ್ಲ, ತರ್ಕವೇದಗಳನ್ನೂ ತಿಳಿದವರಲ್ಲ, ಸಾಹಿತ್ಯದಲ್ಲಿ ಸರಸತೆ ಇಲ್ಲ, ಆದರೆ ಕೇವಲ ಶ್ರೀಮದ್ ಬೇಳೇಹುಳಿ, ಪಳದ್ಯ, ಕೋಸಂಬರಿ, ತೊವ್ವೆ, ಹಯಗ್ರೀವ, ಅಂಬೊಡೆ, ಕರಿಗಡಬು ಮತ್ತು ಮೊಸರನ್ನದಲ್ಲಿ ರಸಿಕರು. ಹೀಗೆ ಜೀವನದ ಪ್ರತಿಯೊಂದು ಕ್ಷಣವನ್ನು ಜೀವನೋತ್ಸಾಹದಿಂದ ಬಾಳಿದವರು ಡಿವಿಜಿ

ಕನ್ನಡ ಸಾಹಿತ್ಯ ಹುಲುಸಾಗಿ ಬೆಳೆಯಲು ಡಿವಿಜಿಯವರ ಕೊಡುಗೆ ಅಪಾರವಾದುದು. ಕನ್ನಡ ಸಾಹಿತ್ಯ ಒಳ್ಳೆಯದಾಗಿರಬೇಕು, ಅಷ್ಟೇ ಅಲ್ಲ ಶ್ರೇಷ್ಠವಾಗಿರಬೇಕೆಂಬುದು ಅವರ ಅಭೀಪ್ಸೆಯಾಗಿತ್ತು. ಅದಕ್ಕಾಗಿ ಅವರು ಶಕ್ತಿಮೀರಿ ದುಡಿದರು. ಅವರ ಬರವಣಿಗೆಯಲ್ಲಿ ಅವರ ಕಾಲದ ಅಭಿಲಾಷೆಗಳಿವೆ, ತುಡಿತಗಳಿವೆ, ಆತಂಕಗಳೂ ಇವೆ. ಅವರ ಪತ್ರಿಕೋದ್ಯಮದ ಅನುಭವಗಳನ್ನು ಕಲೆಹಾಕಿದರೆ ಪತ್ರಿಕೋದ್ಯಮಕ್ಕೆ ಪ್ರವೇಶಿಸುವವರಿಗೆ ಕೈಪಿಡಿ ಇದ್ದ ಹಾಗೆ. 'ಮಂಕುತಿಮ್ಮನ ಕಗ್ಗ' ಮತ್ತು ಜ್ಞಾಪಕ ಚಿತ್ರ ಶಾಲೆಯ ಮೂಲಕ ಕನ್ನಡ ಸಹೃದಯರ ಮನದಲ್ಲಿ ಜನಜನಿತರಾದರು. ಇದರಲ್ಲಿ ಅವರ ನೂರಾರು ಅನುಭವಗಳ ರಸಪಾಕವಿದೆ.

**– ಡಾ. ಜ್ಯೋತಿ ಸತೀಶ್**



✍ ಉಮಾ ರಾವ್

### ಇನ್ನು ಎಲ್ಲಿಗೋಟ– ಪ್ರವಾಸ ಟಿಪ್ಪಣಿಗಳು

# ಓಟ

"…it is not yet too late to engage in the creation of the new utopia of life, where no one will be able to decide for others how they die?" - *Gabriel Garcia Marquez*

ಜಿಂಕೆಯಂಥಾ ಕಣ್ಣುಗಳು. ನೀಳ ಕಾಯ. ಹೊಳೆಯುವ ಬಂಗಾರದ ಮೈ ಬಣ್ಣ. ಕಪ್ಪು ಕಣ್ಣುಗಳ ತುಂಬಾ ಮುಗ್ಧ ಪ್ರೀತಿ. ಇವತ್ತಿಂದ ಇವನೂ ನಮ್ಮ ಕುಟುಂಬದಲ್ಲಿ ಒಬ್ಬ. ಇವನೊಬ್ಬ ನಿವೃತ್ತ ಓಟಗಾರ. ಹಾಗೆಂದು ವೃದ್ಧನಲ್ಲ. ಇವನಿಗೆ ಕೇವಲ ಎರಡೂವರೆ ವರ್ಷ. ಅವರ ಲೆಕ್ಕದ ಪ್ರಕಾರ ಇಪ್ಪತ್ತರ ಆಸುಪಾಸು. ಇವನ ಹೆಸರು ಫಝಿ ವೈಟ್ ವಾಶ್.ಅವನಿಗೆ ಮನೆಯ ಪರಿಚಯವಿರಲಿಲ್ಲ. ಇಡೀ ಬದುಕಿನಲ್ಲಿ ಅವನು ಕಂಡದ್ದು ಪಂಜರ ಮಾತ್ರ. ಜನರ ಜೊತೆ ಬೆರೆತು, ಮಕ್ಕಳೊಂದಿಗೆ ಆಟವಾಡಿ ಅಭ್ಯಾಸವಿರಲಿಲ್ಲ. ಟಿವಿ ಶಬ್ದಗಳು, ಕುಕ್ಕರ್ ಸೀಟಿ, ಫೋನಿನ ಗಂಟೆ ಎಲ್ಲವೂ ಅವನನ್ನು ಬೆಚ್ಚಿ ಬೀಳಿಸುತ್ತಿತ್ತು. ಗಾಜನ್ನು ಕಂಡೇ ಇರದ ಅವನು ಗಾಜಿನ ಬಾಗಿಲಿಂದ ಸೀದ ಹೊರಗೆ ಹೋಗಲು ಹೋಗಿ ಪೆಟ್ಟು ತಿನ್ನುತ್ತಿದ್ದ. ಹೊರಗಡೆ ಹೋದಾಗಲಂತೂ ಅಪ್ಪಿತಪ್ಪಿ ಏನಾದರೂ ಅರ್ಧ ಮೈಲು ದೂರದಲ್ಲಿ ಒಂದು ತುಪ್ಪಟದ ಪುಟ್ಟ ಪ್ರಾಣಿ ಕಂಡರೆ ಆಯಿತು. ಲೀಷ್ ಜೋರಾಗಿ ಹಿಡಿಯದಿದ್ದರೆ ಕಿತ್ತು ಓಡುತ್ತಿದ್ದ. ಅಷ್ಟರ ಮಟ್ಟಿಗೆ ಅವನ ಸಹಜ ಸ್ವಭಾವ ಇನ್ನೂ ಬದಲಾಗಿರಲಿಲ್ಲ. ಟ್ರಾಫಿಕ್ ಪರಿವೆಯೇ ಇಲ್ಲದ ಅವನು ಅಂತಹ ಸಮಯದಲ್ಲಿ ಕಾರು, ಬಸ್ಸುಗಳಡಿ ಬರುವ ಅಪಾಯವಂತೂ ತುಂಬಾ. ಅವನು ಅಸಾಧ್ಯ ಸಂಘಜೀವಿ. ಹುಟ್ಟಿದಾಗಿನಿಂದ ಸುತ್ತಲಿನ ಪಂಜರಗಳಲ್ಲಿನ ಜೊತೆಗಾರರೊಂದಿಗೆ 24 ಗಂಟೆಗಳೂ ಇದ್ದು ಅಭ್ಯಾಸ. ಹಾಗಾಗಿ ನಾವೆಲ್ಲಾ ಮಹಡಿ ಮೇಲಿನ ಮಲಗುವ ಕೋಣೆಗೆ ಹೋದಾಗ ತಾನು ಜೊತೆಗೆ ಬರುತ್ತೇನೆಂದು ಅಳುತ್ತಿದ್ದ! ಆದರೆ ಅವನಿಗೆ ಮಹಡಿ ಮೆಟ್ಟಿಲು ಹತ್ತಲು ಗೊತ್ತಿರಲಿಲ್ಲ. ಹೇಳಿಕೊಟ್ಟಾಗ ಸಹನೆಯಿಂದ ಕಲಿತು ಕುಣಿದಾಡಿದ! ರೇಸಿನಲ್ಲಿ ಆಗಿದ್ದ ಇನ್ನೂ ಮಾಯದ ಗಾಯ ಎಲ್ಲರಿಗೂ ತೋರಿಸಿ ಮುದ್ದು ಮಾಡಿಸಿಕೊಂಡ. ಮಕ್ಕಳೊಡನೆ ಮಗುವಾದ. ಅಷ್ಟು ವರ್ಷ ಅಷ್ಟೊಂದು ದೈಹಿಕ, ಮಾನಸಿಕ ಶೋಷಣೆ ಅನುಭವಿಸಿದ್ದರೂ ಅವನೊಳಗೆ ಕೊಂಚವೂ ಕಹಿ ಇಲ್ಲ. ದ್ವೇಷವಿಲ್ಲ, ರೋಷವಿಲ್ಲ, ಸೇಡಿನ ತವಕವಿಲ್ಲ, ಆಕ್ರಮಣಕಾರೀ ಪ್ರವೃತ್ತಿಯಿಲ್ಲ. ಅವನು ಬೊಗಳಿದ್ದೇ ನಾವು ಕೇಳಿಲ್ಲ. ಹಲ್ಲುಗಳಿರುವುದು ಕಚ್ಚಲು ಎಂದು ಸಹ ಅವನಿಗೆ ಬಹುಶಃ ತಿಳಿದಿಲ್ಲ. ಆದ್ದರಿಂದ ಅವನು ಮನೆಗೆ ಬರುವವರ ಮೇಲೆ ಕಣ್ಣಿಡಬಲ್ಲನೇ ಹೊರತು ಮನೆ ಕಾಯಲಾರ. ಅವನು ವಾಚ್ ಡಾಗ್ ಅಲ್ಲ. ಅವನೊಬ್ಬ ನಿರಂತರ ವರ್ತಮಾನದಲ್ಲೇ ಬದುಕುವ ಸಂತ.

ಇವನಿಗೆ ಓಡುವುದು ಗೊತ್ತೇ ವಿನಹ ಗೆಲ್ಲುವುದು ಗೊತ್ತಿಲ್ಲ. ಇಂದಿನ ಜಗತ್ತಿನಲ್ಲಿ ಸೋತವರಿಗೆ ಸ್ಥಳವಿಲ್ಲ. ಪ್ರಕೃತಿ ಅವನನ್ನು ಸೃಷ್ಟಿಸಿರುವುದೇ ಓಡಲೆಂದು. ಸೂಕ್ಷ್ಮ ದೃಷ್ಟಿ, ದೇಹದ ರಚನೆ, ಸ್ನಾಯುಗಳ ಶಕ್ತಿ, ಉದ್ದುದ್ದ ಕಾಲುಗಳು, ಚೂಪು ಮೂತಿ ಎಲ್ಲವೂ ಅವನಿಗೆ ಮಿಂಚಿನ ಓಟವನ್ನು ಸಹಜ ಕ್ರಿಯೆಯಾಗಿಸಿವೆ. ಇವನಿಗೆ ವಾಸನೆಗಿಂತಾ ದೃಷ್ಟಿ ಸೂಕ್ಷ್ಮ. ಅರ್ಧ ಮೈಲು ದೂರವಿರುವ ವಸ್ತುವನ್ನೂ ಗುರುತಿಸಬಲ್ಲ ಚಾಕಚಕ್ಯತೆ ಇವನಿಗಿದೆ. ಜಿಗಿದನೆಂದರೆ, ನಾಲ್ಕೂ ಕಾಲುಗಳು ನೆಲ ಬಿಟ್ಟು, ಬಾಣದಂತೆ ದೇಹವನ್ನು ಗುರಿ ಮಾಡಿ, ಕಣ್ಣುಗಳನ್ನು ಗುರಿಯತ್ತ ಅಲ್ಲಾಡದೆ ನೆಟ್ಟು ಓಡುತ್ತಾನೆ. ತನ್ನನ್ನೂ ಮರೆತು ಬರೀ ವೇಗವಾಗುತ್ತಾನೆ. ನೋಡುವವರನ್ನು ಬೆರಗುಗೊಳಿಸುತ್ತಾನೆ. ಅವನ ಶಕ್ತಿಯೆಂದರೆ ಅವನ ವೇಗ. ಜಿಗಿದ ಕೆಲವೇ ಸೆಕೆಂಡುಗಳಲ್ಲಿ ಗಂಟೆಗೆ 40 ರಿಂದ 45 ಮೈಲುಗಳ ವೇಗ ತಲುಪುವ ಸಾಮರ್ಥ್ಯ. ಇದೇ ಅವನ ಬೆಲೆಯನ್ನು ಉತ್ತುಂಗಕ್ಕೇರಿಸಿದ ಗುಣ. ಇದೇ ಇವನ ದುರಂತ ಕೂಡ. ಇಂದಿನ ಜಗತ್ತಿನಲ್ಲಿ ಅವನು ತರಬಹುದಾದ ಹಣಕ್ಕಾಗಿ, ಪ್ರತಿಷ್ಠೆಗಾಗಿ, ಪ್ರಭಾವಕ್ಕಾಗಿ ಬಳಕೆಯಾಗುವ ವ್ಯಾಪಾರೀ ಸರಕು ಮಾತ್ರ.

ಇವನಿಗೆ ಅಗಾಧ ಇತಿಹಾಸವಿದೆ. ಸುಮಾರು 6000 ವರ್ಷಗಳು ಹಿಂದಿನದೆನ್ನಲಾದ ಈಜಿಪ್ಟಿನ ಗೋರಿಯೊಂದರ ಮೇಲೆ ಇವನ ಕೆತ್ತನೆಯಿದೆ. ಈಜಿಪ್ಟಿನ ಫೇರೋಗಳು ಗ್ರೇಹೌಂಡ್‌ಗಳನ್ನು ಅವುಗಳ ಮುಗ್ಧ ಚೆಲುವಿಗಾಗಿ, ಸೌಮ್ಯ ಸ್ವಭಾವಕ್ಕಾಗಿ, ರಾಜಗಾಂಭೀರ್ಯಕ್ಕಾಗಿ ತುಂಬಾ ಇಷ್ಟಪಡುತ್ತಿದ್ದರು. ಅವುಗಳ ವೇಗದ ಬಗ್ಗೆ ಹೆಮ್ಮೆಪಡುತ್ತಿದ್ದರು. ಅರಬೀ ದೇಶದ ರಾಜರು ಮಗ ಹುಟ್ಟಿದಾಗ ಪಡುವಷ್ಟೇ ಸಂಭ್ರಮ, ತಮ್ಮ ಗ್ರೇಹೌಂಡ್ ನಾಯಿ ಮರಿ ಹಾಕಿದಾಗ ಪಡುತ್ತಿದ್ದರು. ಅವುಗಳಿಗೆ ಮಾತ್ರ ತಮ್ಮ ಟೆಂಟುಗಳಲ್ಲಿ ವಾಸಿಸಲು, ತಮ್ಮ ಒಂಟೆಗಳ ಮೇಲೆ ಸವಾರಿ ಮಾಡಲು ಅನುಮತಿ ಕೊಡುತ್ತಿದ್ದರು. ಬೇರೆ ರಾಜರಿಗೆ ಕೊಡಲೂ ಒಂದು ಅತ್ಯಂತ ಅಮೂಲ್ಯ ಉಡುಗೊರೆ ಎಂದು ಪರಿಗಣಿಸುತ್ತಿದ್ದರು. ಪರಲೋಕದಲ್ಲಿ ಮನುಷ್ಯರ ಬಗ್ಗೆ ಸಾಕ್ಷಿ ಹೇಳಲು ದೇವರು ಈ ಗ್ರೇಹೌಂಡ್‌ಗಳಿಗೆ ಮಾತ್ರ ಅನುಮತಿ ಕೊಟ್ಟಿದ್ದಾನೆ ಎಂಬುದು ಪರ್ಷಿಯನ್ನರ ನಂಬಿಕೆ.

ಹಾಗಾಗಿ ಈ ನಾಯಿಗಳು ಕೇವಲ ರಾಜ ಮನೆತನದ ಸ್ವತ್ತಾಗಿದ್ದವು. ಅವರು ಅದರ ವೇಗ ತಮ್ಮ ಸ್ವತ್ತೆಂದುಕೊಂಡಿದ್ದರು. ಸಾಧಾರಣ ಪ್ರಜೆಗಳು ಇವುಗಳನ್ನು ಸಾಕುವಂತಿರಲಿಲ್ಲ. ಹಾಗೇನಾದರೂ ಈ ನಾಯಿಗಳು ಅವರ ಹತ್ತಿರ ಕಂಡು ಬಂದಲ್ಲಿ, ಅವರ ತಲೆಹಾರಿಸಲಾಗುತ್ತಿತ್ತು. ಎಷ್ಟೋ ವರ್ಷಗಳ ನಂತರ ಸಾಮಾನ್ಯರಿಗೆ ರಾಜರು ಇವುಗಳನ್ನು ಕೊಡಲು ಪ್ರಾರಂಭಿಸಿದ ಮೇಲೂ, ಅದಕ್ಕೆ ಮೊದಲು, ಅವು ವೇಗವಾಗಿ ಓಡದಂತೆ ಅವುಗಳ ಕಾಲು ಬೆರಳುಗಳನ್ನು ಮುರಿಯಲಾಗುತ್ತಿತ್ತು. ಇವನ ಮೈಯ್ಯಲ್ಲಿ ಹರಿಯುತ್ತಿರುವುದು ಸಾಧಾರಣ ರಕ್ತವಲ್ಲ, ರಾಯಲ್ ಬ್ಲಡ್ ಎಂಬಪ್ರತೀತಿ ಇತ್ತು. (ಇದು ಮೂಢನಂಬಿಕೆಯೇನಲ್ಲ. ಗ್ರೇಹೌಂಡ್ ರಕ್ತದಲ್ಲಿ ಬೇರೆ ನಾಯಿಗಳಿಗಿಂತ ಹೆಚ್ಚು ಕೆಂಪು ರಕ್ತ ಕಣಗಳಿರುವುದರಿಂದ ಹೆಚ್ಚುಆಮ್ಲಜನಕ

ಸ್ನಾಯುಗಳಿಗೆ ಹೋಗುವುದು ಸಾಧ್ಯವಾಗುತ್ತದೆ., ಜೊತೆಗೆ ಇವನ ಬೆನ್ನೆಲುಬಿನ ರಚನೆಯೂ ವಿಶಿಷ್ಟವಾಗಿದೆ. ಹಾಗಾಗಿ ಇವುಗಳಷ್ಟು ವೇಗವಾಗಿ ಓಡುವ ನಾಯಿಗಳು ಪ್ರಪಂಚದಲ್ಲೇ ಇಲ್ಲ ಎಂದು ಇತ್ತೀಚೆಗೆ ವಿಜ್ಞಾನ ಸಾಬೀತುಪಡಿಸಿದೆ.)

5–6ನೇ ಶತಮಾನದಲ್ಲಿ ಇಂಗ್ಲೆಂಡ್ ಭೂಭಾಗದ ಪ್ರದೇಶಕ್ಕೆ ಗ್ರೇಹೌಂಡ್‌ಗಳ ಆಗಮನವಾಯಿತು. ಒಂದು ಕಾಲದಲ್ಲಿ ವೇಲ್ಸ್ ದೊರೆ ಹೊವೆಲ್ ಗ್ರೇಹೌಂಡ್‌ಗಳನ್ನು ಕೊಂದರೆ ಮನುಷ್ಯರನ್ನು ಕೊಂದವರಿಗೆ ವಿಧಿಸುವ ಶಿಕ್ಷೆಯನ್ನೇ ವಿಧಿಸುತ್ತಿದ್ದ. 16ನೇ ಶತಮಾನದಲ್ಲಿ ಎಲಿಝಬೆತ್ ರಾಣಿ ಗ್ರೇಹೌಂಡ್‌ಗಳ ವ್ಯವಸ್ಥಿತ ಓಟಾಟದ ಸ್ಪರ್ಧೆ ಪ್ರಾರಂಭಿಸಿದಳು. ನಿಧಾನವಾಗಿ ಅದು ಬೇರೆಡೆಯೂ ಹರಡಿ, 1900ರ ಶುರುವಿನಲ್ಲಿ ಅಮೆರಿಕಾದಲ್ಲಿ ಕಾಲಿಟ್ಟಿತು.

ಅವನ ಸಹಜ ಶಕ್ತಿಯೇ ಅವನನ್ನು ಇಂಥಾ ಕ್ರೀಡೆಯ ಸೃಷ್ಟಿಕರ್ತನನ್ನಾಗಿ ಮಾಡಿದ್ದರೂ, ಅವನ ಬದುಕಿನಲ್ಲಿ ಯಾವುದೂ ಸಹಜ ರೀತಿಯಲ್ಲಿ ಆಗುವುದಿಲ್ಲ. ಅವನ ಹುಟ್ಟು ಕೂಡ ನಿರ್ಧಾರಿತ. ಅವನ ಅಪ್ಪ, ಅಮ್ಮ ನಿರ್ಧಾರಿತ. ಹುಟ್ಟಿನಲ್ಲೇ ಅವನೇನಾದರೂ ಒಳ್ಳೆ ಓಟಗಾರನಾಗಲೂ ಶಕ್ತನಲ್ಲವೆಂದು ಕಂಡುಬಂದರೆ, ಕಣ್ಣು ತೆರೆಯುತ್ತಲೇ ಅವನ ಸಾವು ಖಚಿತ, ಹೀಗೆ ಪ್ರತಿವರ್ಷ ಬಲಿಯಾಗುವ ಮರಿಗಳು ಸುಮಾರು ಹತ್ತು ಸಾವಿರ. ಉಳಿದವುಗಳನ್ನು ಇನ್ನೂ ತಾಯಿ ಹಾಲು ಕುಡಿಯುವ ಹಂತದಲ್ಲಿರುವಾಗಲೇ ಅವಳಿಂದ ಬೇರೆ ಮಾಡಿ ಬೇರೆ ಬೇರೆ ಪಂಜರಗಳಲ್ಲಿ ತಳ್ಳಲಾಗುತ್ತದೆ. ಅವನಿಗೆ ವ್ಯವಸ್ಥಿತವಾಗಿ

ಬೇರೆಯೇ ಆಹಾರ ಕೊಡಲಾಗುತ್ತದೆ. ತರಬೇತಿ ಕೂಡ ಅವನಿಗೆ ವರ್ಷ ತುಂಬುವ ಮೊದಲೇ ಶುರುವಾಗುತ್ತದೆ. ಹುಟ್ಟಿದಂದಿನಿಂದ ವಾಸ ಮಾಡಲು ಪಂಜರ. ಕೆಳಗಡೆ ಪೇಪರ್ ಚೂರುಗಳ ಮೆತ್ತೆ. ಇವನಿಗೆ ಸಂಗೀತ ಇಷ್ಟವೆನ್ನುವ ನೆಪದಲ್ಲಿ, ದಿನವೆಲ್ಲಾ ಕಿವಿಗಡಚಿಕ್ಕುವ ರಾಕ್ ಸಂಗೀತದ. ತಿನ್ನಲು ಇದ್ದಿಲಲ್ಲಿ ಹೊರಳಿಸಿದ ಮಾಂಸ (ಮನುಷ್ಯರು ಇವರಿಗೆ ಸರಬರಾಜಾದ ಮಾಂಸ ಕದಿಯದಿರಲೆಂದು). ಒಂದೊಂದು ಸಲ ಸ್ಟೀರಾಯ್ಡ್‌ಗಳ ಆರೈಕೆ. ಸ್ವಭಾವಕ್ಕೆ ತಕ್ಕಂತೆ ಅವನೆಂದೂ ಹುಲ್ಲುಹಾಸಿನ ಮೇಲೆ ಜಿಗಿದು, ಕಾಡು ಮೇಡುಗಳಲ್ಲಿ ಕುಣಿದು ಭೇಟೆಯಾಡಿ ಖುಷಿಯಾಗಿಲ್ಲ. ಹೆಣ್ಣಿನ ಸಹಜ ಸಂಗದ ಸುಖ ಕಂಡಿಲ್ಲ. ತನ್ನ ಟ್ರೇನರ್ ಬಿಟ್ಟರೆ ಬೇರೆಯವರ ಪರಿಚಯವಿಲ್ಲ. ಇವನು ತುಂಬಾ ವೇಗವಾಗಿ ಓಡುವ ಮಕ್ಕಳಿಗೆ ಜನ್ಮ ಕೊಡಬಲ್ಲನು ಅನ್ನಿಸಿದರೆ ಅವನಿಗೆ ತಂದೆಯಾಗುವ ಮನ್ನಣೆ. ಇಲ್ಲವೇ ಸಂತಾನಹರಣ. ತನ್ನ ಪಂಜರ ಇಲ್ಲವೇ ರೇಸ್ ಟ್ರ್ಯಾಕ್ ಬಿಟ್ಟರೆ ಇವನ ಮುಗ್ಧ ಕಣ್ಣುಗಳು ಈ ವಿಶಾಲ ಪ್ರಪಂಚದಲ್ಲಿ ಏನನ್ನೂ ನೋಡಿಲ್ಲ. ಇವನ ಬದುಕೇ ರೇಸಿಂಗ್‌ಕೇಂದ್ರಿತ.

ಗ್ರೇಹೌಂಡ್‌ಗೆ ಸಹಜವಾಗಿ ಪುಟ್ಟ ಮೊಲಗಳು, ಅಳಿಲುಗಳನ್ನು ಭೇಟೆಯಾಡಲು ಪ್ರಾಣ. ರೇಸಿಂಗ್ ತರಬೇತಿಯ ಸಮಯದಲ್ಲಿ ಇವನ ವೇಗ ಹೆಚ್ಚು ಮಾಡಲು ಆಕರ್ಷಣೆಯಾಗಿ (ಲ್ಯೂರ್) ಈ ಪ್ರಾಣಿಗಳನ್ನು ಒಡ್ಡಲಾಗುತ್ತದೆ. ಅವುಗಳನ್ನು ಎಳೆದು, ಇನ್ನಷ್ಟು ಮತ್ತಷ್ಟು ವೇಗವಾಗಿ ತಿರುಗಿಸಿ, ಕೈ ಕಾಲು ಮುರಿದು ಕೆಟ್ಟದಾಗಿ ಚೀರಿಸಿ ಈ ಗ್ರೇಹೌಂಡ್‌ಗಳನ್ನು ಉದ್ರೇಕಿತರನ್ನಾಗಿ ಮಾಡಲಾಗುತ್ತದೆ.

ಇವನ ಓಟಾಟದ ಕೌಶಲ್ಯ ಹೆಚ್ಚಿಸಲಾಗುತ್ತದೆ. ಹೀಗೆ ಚಿತ್ರಹಿಂಸೆಗೆ ಗುರಿಯಾಗಿ ರೇಸ್ ಟ್ರ್ಯಾಕ್‌ನಲ್ಲಿ ನರಳಿ ಸಾಯುವ ಪುಟ್ಟ ಪ್ರಾಣಿಗಳ ಸಂಖ್ಯೆ ವರ್ಷಕ್ಕೆ ಸುಮಾರು ಒಂದು ಲಕ್ಷ. ಈಗ ಕೆಲವು ವರ್ಷಗಳಿಂದ, ಪ್ರಾಣಿ ದಯಾಸಂಘಗಳ ನಿರಂತರ ಹೋರಾಟದ ಫಲವಾಗಿ, ಜೀವಂತವಾಗಿಯೇ ಕಾಣುವ, ಆದರೆ ಕೃತಕ ಅಂದರೆ, ಪ್ಲಾಸ್ಟಿಕ್‌ನ ಪ್ರಾಣಿಗಳನ್ನು ಲ್ಯೂರ್ ಆಗಿ ಬಳಸಲಾಗುತ್ತಿದೆ. ಇವು ಅಲ್ಲಿ ಕೆಟ್ಟದಾಗಿ ಚೀರುತ್ತಾ ನಿರಂತರವಾಗಿ ಸುತ್ತುತ್ತವೆ. ಆದರೂ ಕದ್ದು ನಿಜವಾದ ಪ್ರಾಣಿಗಳನ್ನು ಬಳಸುವ ಟ್ರೇನಿಂಗ್ ಟ್ರ್ಯಾಂಕ್‌ಗಳೂ ಸಾಕಷ್ಟು ಇವೆ ಎಂಬುದು ತಿಳಿದು ಬಂದಿರುವ ಸತ್ಯ.

ಗ್ರೇಹೌಂಡಿನ ರೇಸಿಂಗ್ ಬದುಕು ಶುರುವಾಗುವುದು ಅವನಿಗೆ ಒಂದೂವರೆ ವರ್ಷವಾದಾಗ. ಅಮೇರಿಕಾದ ಹಲವಾರು ರಾಜ್ಯಗಳಲ್ಲಿ ಗ್ರೇಹೌಂಡ್ ರೇಸಿಂಗ್ ಚಾಲ್ತಿಯಲ್ಲಿದೆ. ಪಂಜರದಲ್ಲೇ ಕೂತು ಇಂಥಾ ಹಲವಾರು ಪಂಜರಗಳನ್ನು ಹೊತ್ತ ಟ್ರಕ್ಕುಗಳಲ್ಲಿ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ಪ್ರಯಾಣ. ಅಲ್ಲಿ ರೇಸುಗಳಲ್ಲಿ ಓಡುವಿಕೆ. ದಿನಕ್ಕೆ 3–4 ಬಾರಿ ಊಟಕ್ಕಾಗಿ, ಅಭ್ಯಾಸಕ್ಕಾಗಿ ಅಥವಾ ಪ್ರಕೃತಿಯ ಕರೆಗಾಗಿ ಪಂಜರದಿಂದ ಹೊರಗೆ.

ಕೆಲವು ಕಡೆ ಹಿಮದ ಕೊರೆತವಿದ್ದರೆ, ಕೆಲವು ಕಡೆ ಸುಡು ಬಿಸಿಲು. ಅದೆಲ್ಲದರ ಪರಿವೆಯೇ ಇಲ್ಲದೆ, ಗುಂಡು ಹೊಡೆದು ಸಿಗ್ನಲ್ ಕೊಟ್ಟ ತಕ್ಷಣ ಸ್ವಲ್ಪ ದೂರದಲ್ಲಿಯೇ ಓಡುತ್ತಿರುವ ಭೇಟೆಯ ಮೇಲೇ ಕಣ್ಣಿಟ್ಟು, ಮೈ ಮರೆತು ಬಾಣದಂತೆ ಜಿಗಿಯುತ್ತಾನೆ. ಬಣ್ಣಬಣ್ಣದ ನಂಬರ್ ಹೊತ್ತ ಕೋಟು ಧರಿಸಿ, ಬಾಯಿಗೆ ಬೀಗ ಹಾಕಿಕೊಂಡು (ಅಕಸ್ಮಾತ್ ಫೋಟೊ ಫಿನಿಶ್ ಆದರೆ ಸ್ಪಷ್ಟವಾಗಿ ತಿಳಿಯಲೆಂದೂ, ಓಡುವ ಉತ್ಸಾಹದಲ್ಲಿ ಪಕ್ಕದ ನಾಯಿಗಳಿಗೆ ಅಕಸ್ಮಾತ್ ಗಾಯವಾಗದಿರಲೆಂದೂ ಹೀಗೆ ಹಾಕುವ ಮಝಲ್ ಕೆಲವು ಬಾರಿ ಟ್ರೇನರ್‌ಗಳು ಅಸಡ್ಡೆಯಿಂದ ದಿನವೆಲ್ಲಾ ತೆಗೆಯುವುದಿಲ್ಲ!) ಮಿಂಚಿನಂತೆ ಓಡುವ ಈ ನಾಯಿಗಳ ಮೇಲೇ ಎಲ್ಲರ ಕಣ್ಣುಗಳು ಕೇಂದ್ರೀಕೃತ. ಬೆಟ್ಟಿಂಗ್ ಜ್ವರಏರಿದಂತೆ ಜೋರಾದ ಚಪ್ಪಾಳೆ, ಹುರಿದುಂಬಿಸುವಿಕೆ, ರೋಮಾಂಚನ. ಕೆಲವರಿಗೆ ಝಣ ಝಣ ಹಣದ ಸುರಿಮಳೆಯಾದರೆ, ಕೆಲವರಿಗೆ ಇದ್ದದ್ದೆಲ್ಲ ಕಳೆದುಕೊಂಡ ಕಣ್ಣೀರು. ಮತ್ತೆ ಪಂಜರದತ್ತ ಕಾಲು ಹಾಕುವಾಗ ಇದಕ್ಕೆಲ್ಲಾ ಕಾರಣವಾದ ಗೆದ್ದ ತಾರೆಗೆ ಯಾವುದರ ಅರಿವಿಲ್ಲ, ಸೋತವನಿಗೂ ಇಲ್ಲ.

ಪ್ರತಿ ಸ್ಪರ್ಧೆಯ ನಂತರ ವೇಗ ಕಳೆದುಕೊಂಡವರಿಗೆ, ಗಾಯ ಮಾಡಿಕೊಂಡವರಿಗೆ ಸಾವು ಬದುಕಿನ ಪ್ರಶ್ನೆ. ಅವರಿಂದ ಮುಂದೆ ಲಾಭ ಗಳಿಸುವ ಅವಕಾಶವಿಲ್ಲ ಅನಿಸಿದ ತಕ್ಷಣ ಮರಣ ಶಾಸನ. ಟ್ರಾಕ್‌ನಿಂದಲೇ ಸೋತವನನ್ನು ದರದರ ಎಳೆದುಕೊಂಡು ಹೋಗಿ ಬೈಗುಳ ಸುರಿಮಳೆ ಸುರಿಸಿ ತಲೆಗೆ ಸೀದಾ ಗುಂಡಿಟ್ಟು ಕೊಂದು ಅಲ್ಲೇ ಎಸೆದು ಹೋಗುವವರು ಕೆಲವರು. ಗುರುತು ಸಿಗದಂತೆ ಕಿವಿಗಳನ್ನು ಕತ್ತರಿಸಿ ಪಕ್ಕದ ಮರಕ್ಕೆ ನೇಣು ಹಾಕಿ ಹೋಗುವವರು ಹಲವರು. ತನಗಾಗಿ ಸಾವಿರಾರು ಡಾಲರ್ ದುಡಿದ ಜೀವಕ್ಕಿದು ಅಂತಿಮ ಉಡುಗೊರೆ.ಇಂದು ಮುಖ್ಯವಾಗಿ ಅಮೆರಿಕಾ ಮತ್ತು ಆಸ್ಟ್ರೇಲಿಯಾ ದೇಶಗಳಲ್ಲಿ ಗ್ರೇಹೌಂಡ್ ರೇಸಿಂಗ್ ಜೋರಾಗಿ ನಡೆಯುತ್ತಿದೆ. ಇದರಲ್ಲಿ ಬೆಟ್ಟಿಂಗ್‌ನಲ್ಲಿ ತೊಡಗಿಸುವ ಮಿಲಿಯಗಟ್ಟಲೆ ಹಣದಲ್ಲಿ, ಟ್ಯಾಕ್ಸ್‌ಗಳ ಮೂಲಕ ಸರಕಾರದ ಬೊಕ್ಕಸವೂ ಭರ್ಜರಿಯಾಗಿ ತುಂಬುತ್ತಿದೆ. ಅಮೆರಿಕಾದ ಸುಮಾರು 18 ರಾಜ್ಯಗಳಲ್ಲಿ 60 ರೇಸಿಂಗ್ ಟ್ರ್ಯಾಕ್‌ಗಳಿವೆ. ಅಲ್ಲಿ ಬಿಲಿಯಗಟ್ಟಲೆ ವ್ಯವಹಾರ ನಡೆಯುತ್ತಿದೆ.

ಈ ಅಮಾನುಷ ಗ್ರೇಹೌಂಡ್ ರೇಸಿಂಗ್ ಮೇಲೆ ನಿಷೇಧ ತರಲು ಪ್ರಾಣಿ ದಯಾ ಸಂಘಗಳು ಹಲವಾರು ವರ್ಷಗಳಿಂದ ಹೋರಾಡುತ್ತಲೇ ಇವೆ. ಅದರ ಫಲವಾಗಿ ಕೆಲವು ರಾಜ್ಯಗಳಲ್ಲಿ ನಿಷೇಧ ಜಾರಿಯೂ ಆಗಿದೆ. ಆದರೆ ಅವು ಕುದುರಿಸುವ ಬಿಲಿಯಗಟ್ಟಲೆ ವಹಿವಾಟು ಪೂರ್ಣ ನಿಷೇಧಕ್ಕೆ ಅಡಚಣೆಯಾಗಿದೆ. ಸಾವಿರಾರು ಪ್ರಾಣಿಪ್ರಿಯರು ರಾಜ್ಯ ಸರ್ಕಾರಗಳ ಮೇಲೆ ಒತ್ತಡ ತರುವುದರ ಜೊತೆಗೆ ರೇಸಿನ ಪ್ರೇಕ್ಷಕರಲ್ಲಿ ಅರಿವು ಮೂಡಿಸಲು ಹರಪ್ರಯತ್ನ ಮಾಡುತ್ತಿದ್ದಾರೆ. ಕ್ರೀಡೆ, ಮನೋರಂಜನೆಯ ಹೆಸರಿನಲ್ಲಿ, ಮೂಕ ಪ್ರಾಣಿಗಳ ಮೇಲೆ ನಡೆಯುವ ಹಿಂಸೆ, ಅತ್ಯಾಚಾರಗಳನ್ನು ಚಿತ್ರಸಹಿತ ವಿವರ ಕೊಡುವ ಹಲವಾರು ವೆಬ್‌ಸೈಟುಗಳು ಪ್ರಾರಂಭವಾಗಿವೆ. ಇದೆಲ್ಲದರ ಫಲವಾಗಿ, 1990ರಲ್ಲಿ 29 ಮಿಲಿಯನ್ ಇದ್ದ ಪ್ರೇಕ್ಷಕರ ಸಂಖ್ಯೆ ಹತ್ತು ವರ್ಷಗಳಲ್ಲಿ ಇಳಿದು, ಆಗ ಬೆಟ್ಟಿಂಗ್‌ನಲ್ಲಿ ಆಗುತ್ತಿದ್ದ ಮೂರುವರೆ ಬಿಲಿಯನ್ ಡಾಲರ್ ವಹಿವಾಟಿನಲ್ಲಿ ಒಂದು ಬಿಲಿಯನ್‌ನಷ್ಟು ಕಡಿಮೆಯಾಗಿದೆ.

ಈಗ ರೇಸಿಂಗ್‌ನಿಂದ ನಿವೃತ್ತರಾದ ಗ್ರೇಹೌಂಡ್‌ಗಳ ಕೊಲೆ ತಪ್ಪಿಸಲೂ ಪ್ರಾಣಿ ಪ್ರಿಯರು ಹಲವಾರು ಸಂಸ್ಥೆಗಳನ್ನು ಪ್ರಾರಂಭಿಸಿದ್ದಾರೆ. ಈ ಪ್ರಾಣಿಗಳನ್ನು ಅವರು ತಕ್ಷಣ ತಮ್ಮ ಸುಪರ್ದಿಗೆ ತೆಗೆದುಕೊಳ್ಳುತ್ತಾರೆ. ಇದ್ದಿಲಿನ ಮಾಂಸ ತಿಂದೂ ತಿಂದೂ ಕಪ್ಪಗಾದ ಅವುಗಳ ಹಲ್ಲುಗಳನ್ನು ಸ್ವಚ್ಛಗೊಳಿಸಿ, ಹುಣ್ಣುಗಳಿಗೆ ಚಿಕಿತ್ಸೆ ಮಾಡಿ, ಆರೋಗ್ಯ ಉತ್ತಮವಾದ ಕೂಡಲೇ ಅವುಗಳನ್ನು ಪ್ರಾಣಿಗಳನ್ನು ಪ್ರೀತಿಸುವ ಕುಟುಂಬಗಳಿಗೆ ದತ್ತು ಕೊಡುತ್ತಾರೆ. ತಮ್ಮ ಉಳಿದ ಬದುಕು ನೆಮ್ಮದಿಯಿಂದ ಕಳೆಯಲು ಅವಕಾಶ ಮಾಡಿಕೊಡುತ್ತಾರೆ.

ಈ ರೀತಿ ನಮ್ಮ ಮನೆಗೆ ಬಂದವನು ಫಝಿ ವೈಟ್ ವಾಶ್. ನಮ್ಮೆಲ್ಲರ ಕಣ್ಮಣಿ. ಆದರೆ. . . ಇದು ಬರೀ ಫಝಿ ಕತೆಯಲ್ಲ. ಗ್ರೇಹೌಂಡ್‌ಗಳ ಕತೆಯೂ ಅಲ್ಲ. ಇಂದಿನ ಜಗತ್ತಿನ ಕತೆ. ಈ ಕ್ಷಣದಲ್ಲೂ ಸಾವಿರಾರು ಫಝಿಗಳು ಓಡುತ್ತಲೇ ಇದ್ದಾರೆ. ಯಾರದ್ದೋ ಬೊಕ್ಕಸ ತುಂಬಿಸಲು, ಯಾರಿಗೋ ಮನರಂಜನೆ ಒದಗಿಸಲು, ಸಾವಿನ ದವಡೆಯಿಂದ ಪಾರಾಗಲು ಓಡುತ್ತಿದ್ದಾರೆ. ಪಿಳಿ ಪಿಳಿ ಮಾಡುತ್ತಾ, ಫಳಫಳ ತುಪ್ಪಟದಿಂದ ಆಕರ್ಷಿಸುತ್ತಾ, ವಿಕಾರವಾಗಿ ಚೀರುತ್ತಾ ಮುಂದೆ ಮುಂದೆ ಹೋಗುತ್ತಲೇ ಇರುವ ಪ್ಲಾಸ್ಟಿಕ್ ಮೊಲಗಳ ಹಿಂದೆ ಬಾಯಿಬಾಯಿ ಬಿಟ್ಟುಕೊಂಡು ಏದುತ್ತಾ ಹಿಂಬಾಲಿಸುತ್ತಿದ್ದಾರೆ. ದುರಂತವೆಂದರೆ ಆ ಮೊಲ ಅವರಿಗೆ ಎಂದೂ ಸಿಕ್ಕುವುದಿಲ್ಲ. ಸಿಕ್ಕರೂ ಅದು ನಿಜವಾದ್ದಲ್ಲ, ಬರೀ ಪ್ಲಾಸ್ಟಿಕ್ ಎನ್ನುವ ಅರಿವು ಅವರು ಯಾರಿಗೂ ಇಲ್ಲ.

# ನಮ್ಮ ಮೊದಲ ತಾಯಂದಿರ್ಯಾರು?



✍ ಡಾ. ಬಿ.ಆರ್.ಮಂಜುನಾಥ್

ಭಾರತದಲ್ಲಿ ಅನೇಕ ಸಮುದಾಯಗಳು ನೆಲೆಸಿವೆ. ಹತ್ತು ಸಾವಿರ ವರ್ಷಗಳಲ್ಲಿ, ಅನೇಕ ಸಮುದಾಯಗಳು ಇಲ್ಲಿಗೆ, ಬೆಟ್ಟದಾಚೆಯಿಂದ ಕಡಲಿನಾಚೆಯಿಂದ ವಲಸೆ ಬಂದಿವೆ. ಬೆಟ್ಟದ ಕೆಳಗಿರುವ ಈ ನೆಲ, ನೀರು, ಗಿಡ–ಮರಗಳಿಂದ, ಜೀವಿಗಳಿಂದ ತುಂಬಿ ತುಳುಕುತ್ತಿದ್ದು, ಇದರ ನೆರೆ ಹೊರೆಯ ನೆಲೆಗಳು ಮರಳುಗಾಡು, ಇಲ್ಲವೇ ಬೆಟ್ಟಗುಡ್ಡದ ತಾವುಗಳಾಗಿವೆ. ಭಾರತ ಆಫ್ರಿಕಾದಿಂದ ಒಡೆದು, ಏಷಿಯಾದತ್ತ ಸರಿದಾಗ, ಡಿಕ್ಕಿ ಹೊಡೆದು, ಏಷಿಯಾದ ಕೆಳಗೆ ನುಸುಳಿದಾಗ ಎದ್ದ ಹಿಮಾಲಯ ಬೆಟ್ಟಗಳ ಸಾಲು, ಕಡಲಿನಿಂದ ಹರಿ ಬರುವ ಮಳೆ ಮೋಡಗಳನ್ನೆಲ್ಲಾ ತಡೆದು, ಮಳೆ ಈ ನೆಲದ ಮೇಲೆಯೇ ಸುರಿಯುವಂತೆ ಮಾಡಿದ್ದರಿಂದ, ಇಲ್ಲಿ ಹರಿಯುವ ಹೊಳೆಗಳ ಪಡೆಯೇ ಹುಟ್ಟಿತು. ಬೇರೆಡೆ ನೀರು, ಗಿಡ–ಮರಗಳಿಲ್ಲದ ಮಂದಿ ನೀರಿಗಾಗಿ ಅಲೆದಲೆದು ಈ ನೆಲಸಿಕ್ಕಾಗ ಬೆರಗಾಗಿ ಇಲ್ಲಿಯೇ ನೆಲೆಸಿದರು. "ನೆಲೆ" ಎನ್ನುವ "ನೆಲ"ದಿಂದ ಮೂಡಿಬಂದಿದ್ದು.

ಹೀಗಾಗಿ, ಇಲ್ಲಿ ಇದ್ದ ಕಾಡು ಬುಡಕಟ್ಟಿನ ಮಂದಿಯನ್ನು ಬಿಟ್ಟು, ಹೊರಗಿನಿಂದ ಬಂದ ಮಂದಿಯೇ ಹೆಚ್ಚು. ಮೊದಲು, ಪಕ್ಕದ ಇರಾನ್ / ಪರ್ಷಿಯಾ ಅನಂತರ ಏಷಿಯಾದ ನಡುವಿನಲ್ಲಿರುವ ಹುಲ್ಲುಗಾವಲಿನಿಂದ, ಮಂದಿ ವಲಸೆ, ಹಲವು ಬಾರಿ ಬಂದರು. ಇಂದು ನಮಗೆ ದೊರಕಿರುವ ತಿಳುವಳಿಕೆಯಿಂದಾಗಿ ಎಲ್ಲಾ ಆಳುಮಂದಿಯೂ ಕೂಡ, ಆಫ್ರಿಕಾ ಗಡ್ಡೆಯಿಂದ ಬಂದವರು. ವಿಕ್ಟೋರಿಯಾ ಕೊಳದಿಂದ ಹೊರಟ ಈ ಮಂದಿ, ಹಲವಾರು ತಂಡಗಳಲ್ಲಿ, ನಡುಏಷಿಯಾ, ಅಲ್ಲಿಂದ ಯುರೋಪ್ ಆಫ್ರಿಕಾದಿಂದ, ಅರೇಬೀಯಾ ಅಲ್ಲಿಂದ ಇರಾನ್ – ಅಲ್ಲಿಂದ ಸರಸ್ವತೀ–ಸಿಂಧು ಕಣಿವೆ– ನಡು ಏಷಿಯಾದಿಂದ ಬರ್ಮಾ, ಥಾಯ್‌ಲೆಂಡ್, ಮಲಯಾ, ವಿಯೆಟ್‌ನಾಮ್, ಇಂಡೋನೇಷಿಯಾಗಳಿಗೆ ಹರಡಿಕೊಂಡರೆಂದು, ಈಗ ತಿಳಿದು ಬಂದಿದೆ. ಸಾವಿರಾರು ವರ್ಷ ಬೇರೆ ಬೇರೆಯಾಗಿ ಬಾಳಿದ ಈ ಮಂದಿ ಅಲ್ಲಲ್ಲಿರುವ ಮಳೆಗಾಳಿಗಳಿಗೆ, ಹೊಂದಿಕೊಂಡು ಮೂಗು ಉದ್ದವಾಗಿಯೋ, ಮೊಂಡಾಗಿಯೋ ಕಣ್ಣು ಅಗಲವಾಗಿಯೋ, ಕಿರಿದಾಗಿಯೋ, ಬೆಳಕು ಕಡಿಮೆಯಾದೆಡೆ ಬಿಳಿಚಿಕೊಂಡೋ ಬೆಳೆದರು ಎಂದು ಹುಡುಕಿ ತೆಗೆದಿದ್ದಾರೆ.

ಹೀಗಾಗಿ, ಕಪ್ಪಗಿದ್ದವರು, ಬಿಳಿಚಿಕೊಂಡವರು, ಕಣ್ಣು ಕಿರಿದಾದವರು, ಬೇರೆ ಬೇರೆಯೇ ಮಂದಿ ಎಂದು ತಿಳಿಯುವುದು ತಪ್ಪಾಗುತ್ತದೆ. ಆದರೆ ಮೊಟ್ಟಮೊದಲು ನೆಲೆಸಿದ ಬುಡಕಟ್ಟಿನ ಮಂದಿಯ ಬಗ್ಗೆ ತಿಳಿಯುವ ಹಂಬಲ ನಮಗೆಲ್ಲಾ ಇದೆ. ನಮ್ಮ ಮೊದಲ ತಾಯಿಯರು ಈ ನಾಡಿನಲ್ಲಿ ಯಾರು? ಎಂಬುದು ನಮ್ಮಗಳನ್ನು ಬಹಳವಾಗಿ ಕಾಡಿದೆ. ಇದರ ಮೇಲೆಯೇ ಆರ್ಯ, ದ್ರಾವಿಡ, ಚರ್ಚೆಯೂ ನಿಂತಿದೆ.

ಇದನ್ನು ಹುಡುಕಲು, ನಮಗೆ ಸಿಗುವ ಪಳೆಯುಳಿಕೆಗಳು ಯಾವುವು.

- ನೆಲದಡಿ ಹುದುಗಿರುವ ಹಳೆಯ ಒಕ್ಕಲುತನಗಳ ಪಳೆಯುಳಿಕೆಗಳು
- ಸಿಗುವ ಹಳೆಯ ಮೂಳೆಗಳು
- ಮಂದಿಯಲ್ಲಿ ಇಂದೂ ಜರುಗುತ್ತಿರುವ ನಡವಳಿಕೆಗಳು, ವಾಡಿಕೆಗಳು
- ನಮ್ಮ ಇಂದಿನ ಪೀಳಿಗೆಯಲ್ಲಿ ಕಾಣುವ DNA ಸುಳಿಗಳು
- ನುಡಿ

ನುಡಿ ಅಷ್ಟು ಹೆಚ್ಚಿನ ಗುರುತಾಗಬಹುದೇ?

ಆಫ್‌ಘಾನಿಸ್ತಾನದಲ್ಲಿ, "ಕಾಫೀರಿಸ್ತಾನ್" ಎಂಬ ಚಿಕ್ಕ ನಾಡಿದೆ. ಇಲ್ಲಿ 120,000 ಮಂದಿ ತಮ್ಮದೇ ನುಡಿ, ಮತಗಳನ್ನು ಉಳಿಸಿಕೊಂಡು ಬಂದಿದ್ದರು. ಇದು, ಮಿಕ್ಕೆಲ್ಲಾ ಆಫ್‌ಘನ ನಾಡು, ಇಸ್ಲಾಂಗೆ ಸೇರಿದರೂ ಕೂಡ, ಈ ಕಾಫೀರಿಸ್ತಾನ್‌ದಲ್ಲಿ ಇದ್ದ ಬುಡಕಟ್ಟಿನ ಮಂದಿ, ತಮ್ಮ ಮತ ಮತ್ತು ನುಡಿಗಳನ್ನು ಉಳಿಸಿಕೊಂಡು ಬಂದಿದ್ದರು. ಕೇವಲ 19ನೆಯ ಶತಮಾನದಲ್ಲಿ ಅಬ್ದುಲ್ ರೆಹಮಾನ್ ಖಾನ್ ಒತ್ತಡದಿಂದ ಮುಸ್ಲಿಂರನ್ನಾಗಿ ಮಾಡಿದರು. ಆದರೆ ಈ ಮಂದಿ ಇಂದೂ ತಮ್ಮದೇ ಮಾತನ್ನು ಉಳಿಸಿಕೊಂಡು ಬಂದಿದ್ದಾರೆ. ಇದಂತೆ ಬಲೂಚಿಸ್ತಾನ್‌ನಾಲಿ, ಒಂದು ಬುಡಕಟ್ಟಿನ ಜನ, "ಬ್ರಾಹುಯಿ" ನುಡಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಇದರಂತೆಯೇ ಸ್ಪೇನ್ ನಾಡಿನಲ್ಲಿರುವ ಬಾರ್ಸಿಲೋನದ ನುಡಿ ಕೆಟಲಾನ್, ಇಂದೂ ಉಳಿದು ಬಂದಿದೆ.

ಮೂಗು, ಮಾತನ್ನು ತಾಯಿಯ ಮಡಿಲಲ್ಲಿ ಕಲಿಯುವುದರಿಂದ ಮಾತು, ಬುಡಕಟ್ಟಿನ ಒಂದು ಗುರುತಾಗುತ್ತದೆ.

ಭಾರತದಲ್ಲಿ ನಾಲ್ಕು ಬಗೆಯ ನುಡಿಗಳು ಉಳಿದು ಬಂದಿವೆ.

1. ಆರ್ಯ ವಾಡಿಕೆಯ ನುಡಿಗಳು – ಈ ಮಾತುಗಳೆಲ್ಲಾ ಪ್ರಾಕೃತದಿಂದ ಬಂದಿವೆ
2. ದ್ರಾವಿಡ ಬಗೆಯ ನುಡಿಗಳು
3. ಚೀನಾದಿಂದ ಬಂದು, ಇಲ್ಲಿ ಬೆರೆತ ಮಂದಿಯಿಂದ ಉಂಟಾದ ನುಡಿಗಳು
4. ಇಲ್ಲಿಯೇ ಇದ್ದ ಕಾಡು ಹಾಗೂ ವೆಡ್ಡ ಬುಡಕಟ್ಟಿನ ಮಂದಿಯ ನುಡಿಗಳು ನುಡಿಯ ಪಳಯುಳಿಕೆ, DNA ಪಳೆಯುಳಿಕೆಯಷ್ಟೇ ಗುರುತಾದವುಗಳು.

ಇನ್ನು DNA ಪಳೆಯುಳಿಕೆಯಷ್ಟೇ ಗುರುತಾದವುಗಳು.

ಇನ್ನು DNA ಪಳೆಯುಳಿಕೆಗಳು. ಭಾರತಕ್ಕೇ ಗುರುತಾದ, ತಾಯಿ DNA ಈಗ ದೊರಕಿದೆ. ಇದು ಭಾರತದ ಎಲ್ಲಾ ಬುಡಕಟ್ಟುಗಳಲ್ಲಿಯೂ ದೊರೆಯುತ್ತದೆ. ಆದರೆ ತಂದೆಯ DNA ಕೇವಲ ಬಡಗಣ ಭಾರತದಲ್ಲಿ ಮಟ್ಟಿಗೆ ದೊರೆಯುತ್ತದೆ.

ಇದು ಹೇಗೆ ಎನ್ನುವುದನ್ನು ತಿಳಿಯುವುದು ಮೇಲು.

ನಮ್ಮ ಹಳೆಯ ಕಾವ್ಯಗಳಿಂದ, ಈ ಜಗತ್ತು ಹೇಗೆ ಹುಟ್ಟಿತೆಂದು ತಿಳಿಯಬಹುದು. ಇದು ವೇದ, ಇತಿಹಾಸ, ಪುರಾಣಗಳಿಂದ ಅರಿಯಬಹುದು. "ಈ ಜಗತ್ತು" ಎಂದರೆ ಆ ವಿಶ್ವಚೈತನ್ಯ" ಎಚ್ಚರವಾದಾಗ ಎಂದು, "ಜಗತ್" ಎಂದರೆ "ಎಚ್ಚರ"ವಾದದ್ದು ಎಂದೇ ತಿಳಿವು. ಎಚ್ಚರವಾದ ಚೈತನ್ಯದಿಂದ ಬ್ರಹ್ಮ ಮೂಡಿಬಂದ. ಈ ಬ್ರಹ್ಮನಿಗೆ, ಅವನ ಮನಸ್ಸಿನಿಂದಲೇ, ಆರು ಮಕ್ಕಳು ಹುಟ್ಟಿ ಬಂದರು. ಇವರಿಗೆ ಬ್ರಹ್ಮಮಾನಸ ಪುತ್ರರೆಂದು ಕರೆಯುತ್ತಾರೆ. ಇವರುಗಳು ಅತ್ರಿ, ಅಂಗೀರಸ, ಮರೀಚಿ, ಪುಲಹ, ಪುಲಸ್ತ್ಯ, ಕ್ರತು. ಇವರಿಂದಲೇ ಎಲ್ಲಾ ಜೀವ ಜಂತುಗಳು ಈ ನೆಲದಲ್ಲಿ ಹುಟ್ಟಿಬಂದವು.

ಆದರೆ ಇವರಿಗೆ ಮಕ್ಕಳು ಹೇಗೆ ಹುಟ್ಟಿ ಬಂದರು? ನಮ್ಮ ಪುರಾಣ, ಇತಿಹಾಸಗಳಲ್ಲಿ, ಈ ಕೆಳಗಿನ ವಿವರ ಮೂಡಿ ಬರುತ್ತದೆ.

ಕರ್ದಮ ಋಷಿಗೆ, ಆರು ಮಂದಿ ಹೆಣ್ಣುಮಕ್ಕಳು. ಕಲಾ, ಅನಸೂಯಾ, ಶ್ರದ್ಧಾ, ಹವಿರ್ಭುಕ್, ಗತಿ, ಕ್ರಿಯಾ. ಈ ಆರು ಹೆಣ್ಣುಮಕ್ಕಳು ಆರು ಬ್ರಹ್ಮಮಾನಸ ಪುತ್ರರನ್ನು ಮದುವೆಯಾಗುತ್ತಾರೆ.

ಕಲಾ – ಮರೀಚಿ, ಅನಸೂಯ – ಅತ್ರಿ, ಶ್ರದ್ಧಾ – ಅಂಗೀರಸ, ಹವಿರ್ಭುಕ್ – ಪುಲಸ್ತ್ಯ, ಗತಿ – ಪುಲಹ, ಕ್ರಿಯಾ – ಕ್ರತು

(ಕೆಲವು ಕಡೆ ಬ್ರಹ್ಮಮಾನಸ ಪುತ್ರರು ಒಂಬತ್ತು ಮಂದಿ, ಎಂದು ಬರುತ್ತದೆ. ಆದರೆ ಇಂದಿನ ಚರ್ಚೆಗೆ ಇದು ಸಲ್ಲ).

ಕರ್ದಮ ಋಷಿ, ಒಬ್ಬ ಮತಂಗ ಋಷಿ ಮತಂಗ ಎನ್ನುವ ಮಾತಿನಿಂದಲೇ ಮದಾದಿಗ ಎನ್ನುವ ಮಾತ್ರ ಬಂದಿರುವುದು ಅವನ ಹೆಣ್ಣು ಮಕ್ಕಳೆಲ್ಲಾ ಮತಂಗ ಕನ್ಯೆಯರು.

ಇದರಿಂದ ನಮಗೆ ಚೆನ್ನಾಗಿ ತಿಳಿಯುವುದೇನೆಂದರೆ ಬ್ರಹ್ಮ ಮಾನಸಪುತ್ರರೇ ಈ ನಾಡಿನಲ್ಲಿ ಮೊದಲು ಹುಟ್ಟಿದವರಲ್ಲ. ಈ ನಾಡಿನಲ್ಲಿ ಬೇರೆ ಬುಡಕಟ್ಟಿನ "ಮತಂಗ" ಮಂದಿಯರೂ ಇದ್ದರು. ಅವರನ್ನು ಈ ಬ್ರಹ್ಮ ಮಾನಸ ಪುತ್ರರು ಮದುವೆಯಾದರು ಎಂದರೆ, ಇಲ್ಲಿಯ ಬೇರೆಯೇ "ಬ್ರಹ್ಮ"ರಿದ್ದರು, ಎಂದು ತಿಳಿದುಬರುತ್ತದೆ.

ಹಲವಾರು, ಪ್ರಜಾಪತಿಗಳು ನಮಗೆ ಕಂಡುಬರುತ್ತಾರೆ "ದಕ್ಷಬ್ರಹ್ಮ"ನೂ ಒಬ್ಬ ಪ್ರಜಾಪತಿ. "ಕಶ್ಯಪ" ಒಬ್ಬ ಪ್ರಜಾಪತಿ. ಪಾರ್ವತಿಯ ತಂದೆ "ಹಿಮವಂತ" ಮತ್ತೊಬ್ಬ ಪ್ರಜಾಪತಿ. ಹೀಗೆ ಬೇರೆ ಬೇರೆ ಬುಡಕಟ್ಟಿನ ಮಂದಿ, ಮದುವೆಯ ನೆಂಟನ್ನು ಬೆಳೆಸಿಕೊಂಡು ಬಂದರು ಎಂದಾಗುತ್ತದೆ.

ವಲಸೆ ಬರುವ ಮಂದಿಯಲ್ಲಿ ಹೆಚ್ಚಾಗಿ ಗಂಡಸರೇ ಇರುತ್ತಾರೆ. ಕುದುರೆಯ ಮೇಲೆ ಬರುವ ಇ ಮಂದಿ, ಇಲ್ಲಿ ನೆಲೆಯೂರಿದಾಗ ಇಲ್ಲಿರುವ ಹೆಣ್ಣು ಮಕ್ಕಳೊಡನೆಯೇ ಸಂಸಾರ ಮಾಡುತ್ತಾರೆ. ಇದು ಜಗತ್ತಿನ ನಡವಳಿಕೆ. ಆದ್ದರಿಂದ ಈ ಕಲಾ, ಅನಸೂಯ, ಶ್ರದ್ಧಾ, ಹವಿರ್ಭುಕ್, ಗತಿ, ಕ್ರಿಯಾ, ನಮ್ಮ ಮೊದಲಿನ ತಾಯಂದಿರು. ಇವರ "ಮತಂಗ" ಬೇರು DNA ಆಗಿ ನಮ್ಮೆಲ್ಲರಲ್ಲೂ ಇಂದೂ ಮಿನುಗುತ್ತಿದೆ. ದಕ್ಷಿಣವಾಗಲಿ, ಉತ್ತರವಾಗಲಿ, ಎಲ್ಲರಿಗೂ ತಾಯಂದಿರು ಇವರೇ ಆಗಿದ್ದಾರೆ. ●

# ನೃತ್ಯಾಂಜಲಿ – ವಾಷಿಂಗ್‌ಟನ್

ಮೀನಾ ಶಾಸ್ತ್ರಿ, ಅಚ್ಚ ಕನ್ನಡತಿ. ಅಮೇರಿಕಾಕ್ಕೆ ಹೋದ ನಂತರ ತಾನು ಬೆಂಗಳೂರಿನಲ್ಲಿ ಕಲಿತಿದ್ದ ನಾಟ್ಯವನ್ನು, ಇತರರಿಗೂ ನೀಡಬೇಕೆಂದು ವಾಷಿಂಗಟನ್‌ನಲ್ಲಿ "ನೃತ್ಯಾಂಜಲಿ" ನಾಟ್ಯಶಾಲೆ ಯನ್ನು ತೆರೆದು ಅನೇಕರಿಗೆ ನೃತ್ಯ ವಿದ್ಯಾದಾನವನ್ನು ನೀಡುತ್ತಿದ್ದಾರೆ. ಇವರ ಪ್ರತಿಭೆಯನ್ನು ಕಂಡು ಅಮೇರಿಕಾದ ಸರ್ಕಾರ, "ನೃತ್ಯಾಂಜಲಿ"ಗೆ ಪ್ರತಿವರ್ಷವೂ ಅನುದಾನ ನೀಡುತ್ತಿದ್ದಾರೆ.

ಮೀನಾ ಶಾಸ್ತ್ರಿ ಕಲಿಸುವ ಭರತನಾಟ್ಯ, ಎಲ್ಲದರಂತಿಲ್ಲ. ಇದರಲ್ಲಿ ಪಾಶ್ಚಿಮಾತ್ಯ ನೃತ್ಯದಲ್ಲಿರುವ ಸಂಘಟನೆ ಮತ್ತು ದೇಹಭಂಗಿಯನ್ನೂ ಆಳವಡಿಸಿಕೊಂಡಿರುವುದರಿಂದ ಈ ನೃತ್ಯ ಮಾದರಿ ಅಪರೂಪವಾಗಿದೆ. ಏಕೆಂದರೆ ಇದು ತನ್ನ ಭಾರತೀಯ ತನವನ್ನು ಉಳಿಸಿಕೊಂಡೇ ಬಂದಿದೆ.

ಹಿಂದೆ ಅನೇಕ ಬಾರಿ ಭಾರತಕ್ಕೆ ತನ್ನ ತಂದೆಯೊಡನೆ ಭೇಟಿ ನೀಡಿರುವ ಮೀನಾ ಶಾಸ್ತ್ರಿ "ಋತುಗಳು", "ದೇವತೆಗಳು", "ರಸಮಂಜರಿ" ಗಳ ಪ್ರದರ್ಶನ ಮಾಡಿದ್ದು, ಈ ಬಾರಿ "ಭಕ್ತಮಂಜರಿ"ಯೆಂಬ ಭಕ್ತಿ ಪ್ರಧಾನವಾದ ನೃತ್ಯರೂಪಕವನ್ನು ಕೊಂಡು ಬರುತ್ತಿದ್ದಾರೆ. 71ರ ಹರೆಯದಲ್ಲಿಯೂ ಈಕೆ 17ರ ತರುಣಿಯಂತೆ, ನೃತ್ಯ ಮಾಡುವುದನ್ನು ನೋಡುವುದು ಒಂದು ಅಪೂರ್ವ ಸಂದರ್ಭ. ಅಂತೆಯೇ ಆಕೆಯ ವಿದ್ಯಾರ್ಥಿಗಳು, ವೈದ್ಯರು, ಇಂಜಿನಿಯರ್‌ಗಳು, ಉದ್ಯಮಿಗಳು ಆಗಿದ್ದು, ಅವುಗಳನ್ನು ತುಸು ಬದಿಗಿಟ್ಟು ಭಾರತಕ್ಕೆ ನೃತ್ಯ ಪಾಡಲು ಬರುತ್ತಿರುವುದು ಒಂದು ಸುಸಮಯ.

# ನಾವು ಬಿಟ್ಟರೂ ನಮ್ಮನ್ನು ಬಿಡದು ತಂತ್ರಜ್ಞಾನ



✍ **ಹರಿಪ್ರಸಾದ್ ನಾಡಿಗ್**

ಮಂಗಳೂರಿನ ಬಳಿ ಅದೊಂದು ಸಣ್ಣ ಊರು. ಅಲ್ಲಿಯ ಹಿರಿಯ ವೈದ್ಯರೊಬ್ಬರು ರೈತರೂ ಹೌದು. ಅವರು ತೋಟ, ಗದ್ದೆ ಬಿಟ್ಟು ಎಲ್ಲಿಯೂ ಹೋಗುವುದಿಲ್ಲ. ಹಲವು ವರ್ಷಗಳಿಂದ ಅವರಿಗೆ ನಗರದ ಜೀವನದೊಂದಿಗೆ ಸಂಪರ್ಕವೂ ಹೆಚ್ಚಿಲ್ಲ. ಹೀಗಿದ್ದೂ ತಂತ್ರಜ್ಞಾನ ಜಗತ್ತಿನ ಆಗುಹೋಗುಗಳ ಕುರಿತು, ಹೊಸ ಅವಿಷ್ಕಾರಗಳ ಕುರಿತು ಸದಾ ಓದುತ್ತಿರುತ್ತಾರೆ. ಒಮ್ಮೆ ಅವರನ್ನು ಭೇಟಿಯಾದಾಗ ತಂತ್ರಜ್ಞಾನ ಕುರಿತು ಅವರು ಕೇಳಿದ ಪ್ರಶ್ನೆಯೊಂದಕ್ಕೆ ನನಗೆ ಉತ್ತರಿಸಲು ಸಾಧ್ಯವಾಗಲಿಲ್ಲ. ಸ್ವತಃ ತಂತ್ರಜ್ಞನಾದ ನಾನು ಆ ವಿಷಯದ ಬಗ್ಗೆ ಓದಿಕೊಂಡಿರಲಿಲ್ಲ. ಅಷ್ಟು ಗಾಢವಾದ ಓದು ಅವರದ್ದು.

ಅಮೇರಿಕದ ಗೆಳೆಯ ಕ್ಯಾರಿಗೆ ಈಗ ಎಪ್ಪತ್ತರ ವಯಸ್ಸು. ಆದರೂ ಹೊಸ ತಂತ್ರಜ್ಞಾನವೆಂದರೆ ಸಣ್ಣ ಮಕ್ಕಳಿಗಿರುವಷ್ಟು ಕುತೂಹಲ ಅವರಿಗೆ. ಲ್ಯಾಪ್‌ಟ್ಯಾಪ್ ಹಿಡಿದು ಕೂತರೆ ನನಗಿಂತ ಚುರುಕಾಗಿ ಕೆಲಸ ಮಾಡುತ್ತಾರೆ. ಪ್ರವಾಸ ಹೊರಟರೆ ಒಂದುಬ್ಯಾಗಿನ ತುಂಬ ಗ್ಯಾಜೆಟ್ಟುಗಳು. ಈ ರೀತಿಯ ಮತ್ತಷ್ಟು ನಿದರ್ಶನಗಳು ನಮಗೆ ಸಿಗಬಹುದು. ತಂತ್ರಜ್ಞಾನಕ್ಕೆ ಹೊಂದಿಕೊಳ್ಳಲು ವಯಸ್ಸಿನ ಮಿತಿಯಿಲ್ಲ. ಆದರೆ ತಂತ್ರಜ್ಞಾನ ಬಳಕೆಯ ಕುರಿತು ವಯಸ್ಸಿನಲ್ಲಿ ನಮಗಿಂತ ಹಿರಿಯರಾದವರೊಂದಿಗೆ ಮಾತನಾಡುವಾಗ ಸಾಮಾನ್ಯವಾಗಿ "ನಮಗೆ ವಯಸ್ಸಾಯಿತು – ನಿಮ್ಮಂತೆ ಗ್ಯಾಜೆಟ್ಟುಗಳನ್ನು ಬಳಸಲು ನಮಗೆ ಆಗದು" ಎಂದೇ ಕೇಳಿಬರುವುದು. ಹೌದಲ್ಲ, ಅವರಿಗೆ ಅದೆಲ್ಲ ತಲೆಗೆ ಹೋಗುವುದಿಲ್ಲ ಎಂದುಕೊಂಡು ನಾವುಗಳೂ ಬಹುಷಃ ಸುಮ್ಮನಾದೆವು.ಆದರೆ ವಯಸ್ಸಿಗೂ ಇದಕ್ಕೂ ಸಂಬಂಧವಿಲ್ಲ. ಹೊಸ ತಂತ್ರಜ್ಞಾನದ ಬಗ್ಗೆ ತಿಳಿದುಕೊಳ್ಳಲು, ಹೊಸತನ್ನು ಜೀವನದಲ್ಲಿ ಅಳವಡಿಸಿಕೊಳ್ಳಲು ವಯಸ್ಸು ಅಡ್ಡ ಬರಬೇಕಿಲ್ಲ. ಕಲಿಯಲು ಆಸಕ್ತಿ ಇರಬೇಕು, ಆಳವಡಿಸಿಕೊಳ್ಳಲು ಮನಸ್ಸಿರಬೇಕು. ತಂತ್ರಜ್ಞಾನದ ಬಗ್ಗೆ ಉತ್ಸಾಹವಿಲ್ಲದಿದ್ದರೆ ಅದನ್ನು ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದು ಕಷ್ಟ.

ಈಗಿನ ದಿನಗಳಲ್ಲಿ ತಂತ್ರಜ್ಞಾನವಿಲ್ಲದ, ಗ್ಯಾಜೆಟ್ಟುಗಳಿಲ್ಲದ ಜೀವನವನ್ನು ಊಹಿಸಿಕೊಳ್ಳುವುದೂ ಕಷ್ಟ. ದಿನನಿತ್ಯ ಎದುರಾಗುವ ಒಂದು ಸಮಸ್ಯೆಗಳಿಗೆ ತಂತ್ರಜ್ಞಾನ ಪರಿಹಾರ ನೀಡಬಲ್ಲುದು. ಸ್ವತಃ ನನಗೆ ಎದುರಾಗುತ್ತಿದ್ದ ಒಂದು ಸಮಸ್ಯೆ – ಮುಖ್ಯವಾದದ್ದನ್ನು ಬರೆದಿಟ್ಟುಕೊಳ್ಳಬೇಕಾದ ಕೆಲವು ವಿಷಯಗಳನ್ನು ನಾನು ಚೀಟಿಗಳಲ್ಲಿ ಬರೆದಿಡುತ್ತಿದ್ದೆ. ಅಥವಾ ಡೈರಿಯಲ್ಲಿ ಗೀಚಿ ಇಟ್ಟುಕೊಳ್ಳುತ್ತಿದ್ದೆ. ಚೀಟಿಗಳು ಕಳೆದು ಹೋದುವೆಂದರೆ ಅವುಗಳ ಜೊತೆಗೆ ನಾನು ನೆನಪಿಟ್ಟುಕೊಳ್ಳಬೇಕಿದ್ದ ಎಷ್ಟೋ ವಿಷಯಗಳೂ ಚೀಟಿಗಳೊಂದಿಗೇ ಮಾಯವಾಗುತ್ತಿದ್ದವು. ಇನ್ನು ಡೈರಿಯಲ್ಲಿ ಗೀಚಿಟ್ಟುಕೊಂಡಿದ್ದನ್ನು ಹುಡುಕಲು ಹರಸಾಹಸ ಮಾಡಬೇಕಿತ್ತು. ಈಗ ಮೊಬೈಲಿನಲ್ಲಿ ನೋಟ್ ಮಾಡಿಟ್ಟುಕೊಂಡರೆ ಅಥವಾ ಲ್ಯಾಪ್ಟಾಪಿನಲ್ಲೋ, ಐಪ್ಯಾಡಿನಲ್ಲೋ ಬರೆದಿಟ್ಟುಕೊಂಡದ್ದು ಬೇರೆಯವರ ಕೈ ಸೇರಿದರೆ ಏನು ಮಾಡುವುದು?" ಬೇರೆಯವರ ಕೈ ಸೇರದಂತೆ ಮೊಬೈಲಿಗೆ, ಐಪ್ಯಾಡಿಗೆ, ಲ್ಯಾಪ್ಟಾಪಿಗೆ ಪಾಸ್ವರ್ಡ್ ಹಾಕಿಟ್ಟುಕೊಳ್ಳಬೇಕು. "ಸರಿ, ಇದೆಲ್ಲ ಮಾಹಿತಿ ಕ್ಲೌಡ್ ಎಂಬ ತಂತ್ರಜ್ಞಾನದಲ್ಲಿ ಹೋಗಿ ಕುಳಿತಿರುತ್ತದೆ ಎಂದು ಕೇಳಿದ್ದೆವು. ಅಲ್ಲಿ ನಮ್ಮ ವೈಯಕ್ತಿಕ ಮಾಹಿತಿ ಹಾಕುವುದು ಸುರಕ್ಷಿತವೋ ಅಲ್ಲವೋ?' – ಕ್ಲೌಡ್ ಸ್ಟೋರೇಜಿನಲ್ಲಿ ಕುಳಿತಿರುವ ಮಾಹಿತಿಯನ್ನು ಅಲ್ಲಿಗೆ ಕಳುಹಿಸುವಾಗ ಹಾಗು ತಿರುಗಿ ನಮ್ಮ ಮೊಬೈಲಿನ ಪರದೆಯ ಮೇಲೋ ಅಥವ ಐಪ್ಯಾಡಿನ ಪರದೆಯ ಮೇಲೋ ತೋರಿಸಲು ವಾಪಸ್ ಪಡೆಯುತ್ತಿರುವಾಗ ಆಗುವ ಮಾಹಿತಿ ವರ್ಗಾವಣೆ ಗುಪ್ತ ಸಂದೇಶಗಳಂತೆ ಇಂಟರ್ನೆಟ್ ಮೂಲಕ ಹಾದು ಹೊಗುತ್ತದೆ. ವಾಟ್ಸಾಪ್ ಬಳಸುವವರು ಒಬ್ಬರಿಗೊಬ್ಬರು ಸಂದೇಶವನ್ನು ಕಳುಹಿಸುವಾಗ ಕೂಡ ಮಾಹಿತಿ ಸಂಚಲನ ಇದೇ ರೀತಿ ಇರುತ್ತದೆ. ನೀವು ಬಳಸುವ ಯಾವುದೇ ಆಪ್ ಅಥವಾ ಅಪ್ಲಿಕೇಶನ್ ಇರಬಹುದು. ಪಾಸ್ವರ್ಡ್ ಭದ್ರವಾಗಿರಬೇಕು. ಬೇರೆಲ್ಲೋ ಬಳಸಿದ ಪಾಸ್ವರ್ಡ್ ಇಲ್ಲಿ ಬಳಕೆಯಾಗಕೂಡದು. ಮತ್ತೊಂದು ವಿಷಯ – ಆಗಾಗ ನಿಮ್ಮನ್ನು ಬೇಸ್ತು ಬೀಳಿಸಿ ನಿಮ್ಮ ಪಾಸ್ವರ್ಡ್ ಕೊಳ್ಳೆ ಹೊಡೆಯಲು ಬರುವ ಫೋನ್ ಕಾಲ್, ಇಮ್ಮೈಲ್‌ಗಳು ಎಸ್.ಎಂ.ಎಸ್ಸು. ಗಳ ಬಗ್ಗೆ ಎಚ್ಚರದಿಂದಿರಬೇಕು. ಇದನ್ನೆಲ್ಲ ಕೇಳಿದರೆ "ಅಬ್ಬಾ, ಇಷ್ಟೆಲ್ಲ ತಲೆನೋವು ಬೇಡವೇ ಬೇಡ. ಒಂದು ಪೇಪರ್ ಹಾಗು ಪೆನ್ನು ಹಿಡಿದು ಬರೆದಿಟ್ಟುಕೊಳ್ಳುತ್ತೇನೆ ಸಾಕು" ಎನಿಸಬಹುದು. ಹಾಗೆನಿಸುವುದು ಸಹಜ ಕೂಡ. ನಿತ್ಯ ಜೀವನದಲ್ಲಿ ತಂತ್ರಜ್ಞಾನ ಬಳಕೆಗೆ ಇದೊಂದು ಉದಾಹರಣೆ ಅಷ್ಟೆ. ಪೆನ್ನು ಪೇಪರ್ ಬಳಸಿ ನೋಟ್ ಮಾಡಿಟ್ಟುಕೊಳ್ಳುವುದು ಈಗಲೂ ಸುಲಭವೇ. ಆದರೆ ಡಿಜಿಟಲ್ ಆವೃತ್ತಿಯಲ್ಲಿ ಬರೆದಿಟ್ಟುಕೊಂಡರೆ, ಸೌಕರ್ಯ ಹೆಚ್ಚು ಬರೆದಿಟ್ಟುಕೊಂಡದ್ದನ್ನು ಹುಡುಕುವುದು ಸುಲಭ. ಹಾಗಿದ್ದ ಮಾತ್ರಕ್ಕೆ ಅದನ್ನು ಬಳಸಲೇಬೇಕೆಂದಿಲ್ಲ. ಆದರೆ ತಂತ್ರಜ್ಞಾನ ಬಳಸದೇ ಹೋದರೆ ಕಾಲಕ್ರಮೇಣ ನಾವು ಈ ಹೊಸತುಗಳಿಂದ, ಸೌಕರ್ಯಗಳಿಂದ ಸಾಕಷ್ಟು ದೂರ ಉಳಿದುಬಿಡುತ್ತೇವೆ. ಇದರ ಪರಿಣಾಮ ನಮ್ಮ ಮೇಲೆ ಬೇರೆ ಬೇರೆ ರೀತಿಯಲ್ಲಿ ಆಗಬಹುದು.

ಇತ್ತೀಚೆಗೆ ಸುದ್ದಿಯಲ್ಲಿರುವ ಪಂಜಾಬ್ ನ್ಯಾಶನಲ್ ಬ್ಯಾಂಕ್ ಮತ್ತು ನೀರವ್ ಮೋದಿಯ ಸನ್ನಿವೇಶ ತೆಗೆದುಕೊಳ್ಳಿ. ಹಣಕಾಸು ಸಂಸ್ಥೆಗಳ ನಡುವೆ ಸಂವಹನಕ್ಕೆ ಬೇಕದ ನೆಟ್ವರ್ಕ್ ಒದಗಿಸುವ ಸಂಸ್ಥೆಯ ಹೆಸರು "ಸ್ವಿಫ್ಟ್" (SWIFT). ಸ್ವತಃ ಸ್ವಿಫ್ಟ್ ಯವುದೇ ಹಣಕಾಸಿನ ವ್ಯವಹಾರದಲ್ಲಿ ತನ್ನನ್ನು ತೊಡಗಿಸಿಕೊಳ್ಳುವುದಿಲ್ಲ. ಆದರೆ ಅಂತರರಾಷ್ಟ್ರೀಯ ಸಂಸ್ಥೆಗಳ ನಡುವೆ ಹಣ ಪಾವತಿಯ ಆದೇಶಗಳನ್ನು ಬ್ಯಾಂಕಿಂಗ್ ವಹಿವಾಟುಗಳನ್ನು ಪರಸ್ಪರ ವಿನಿಮಯ ಮಾಡಲು ಬೇಕಿರುವ ತಂತ್ರಜ್ಞಾನವನ್ನು ವ್ಯವಸ್ಥೆಯನ್ನು ಈ ಸಂಸ್ಥೆ ಒದಗಿಸಿದೆ. ಭಾರತದ ಬಹುಪಾಲು ಖಾಸಗಿ ಬ್ಯಾಂಕುಗಳು ಸ್ವಿಫ್ಟ್ ವ್ಯವಸ್ಥೆಯನ್ನು ತಮ್ಮ ಬ್ಯಾಂಕಿಂಗ್ ತಂತ್ರಾಂಶಗಳಲ್ಲಿ ಆಳವಡಿಸಿಕೊಂಡಿವೆ. ಹೊಸ ತಂತ್ರಜ್ಞಾನ ಬಂದಾಗ ಅದನ್ನು ಅಳವಡಿಸಿಕೊಳ್ಳುವಲ್ಲಿ ಹಿಂದೆ ಬಿದ್ದ ಸಾರ್ವಜನಿಕ ವಲಯದ ಬ್ಯಾಂಕುಗಳು "ಸ್ವಿಫ್ಟ್" ಬಳಸಿ ನಡೆಸಿದ ಸಂವಹನವನ್ನು ಈಗಲೂ ಪುಸ್ತಕದಲ್ಲಿ ಬರೆದಿಟ್ಟುಕೊಳ್ಳುತ್ತಿವೆಯಂತೆ. ಪಂಜಾಬ್ ನ್ಯಾಶನಲ್ ಬ್ಯಾಂಕಿನಲ್ಲೂ ಅದನ್ನು ಹೀಗೆಯೇ ಪುಸ್ತಕದಲ್ಲಿ ಬರೆದಿಟ್ಟುಕೊಂಡದ್ದು, ತಂತ್ರಜ್ಞಾನ ಬಳಸಿದ್ದರೆ ಆ ಮಾಹಿತಿ ಬ್ಯಾಂಕಿನ ತಂತ್ರಾಂಶಕ್ಕೆ ತಂತಾನೆ ಸೇರ್ಪಡೆಯಾಗಿ ಬಿಡುತ್ತಿತ್ತು. ಹೀಗೆ ಸಾವಿರಾರು ಕೋಟಿ ರೂಪಾಯಿಗಳ ವಹಿವಾಟುಗಳನ್ನು ಕಣ್ತಪ್ಪಿಸಿ ಮಾಡುವುದು ಸಾಧ್ಯವಾಗುತ್ತಿರಲಿಲ್ಲ.

ತಂತ್ರಜ್ಞಾನವನ್ನು ನಾವು ಬಿಟ್ಟರೂ ಅದು ನಮ್ಮ ಬೆನ್ನು ಬಿಡುವುದಿಲ್ಲ. ಸ್ಮಾರ್ಟ್ ಫೋನ್ ಒಲ್ಲೆ ಎನ್ನುತ್ತಿದ್ದ ಹಿರಿಯರು ಈಗ ವಾಟ್ಸಾಪಿನಲ್ಲಿ ಎಲ್ಲರಿಗಿಂತ ಹೆಚ್ಚಿನ ಸಂದೇಶಗಳನ್ನು ಕಳುಹಿಸುತ್ತಿದ್ದಾರೆ. ಫೇಸ್ಬುಕ್ ನಮಗಲ್ಲ ಎನ್ನುತ್ತಿದ್ದವರು ಪ್ರತಿ ನಿತ್ಯ ದೇವರಿಗೆ ಹೂ ತಪ್ಪಿಸಿದರೂ ಫೇಸ್ಬುಕ್ ತಿರುವಿ ಹಾಕುವುದನ್ನು ಮರೆಯುವುದಿಲ್ಲ. ಮಕ್ಕಳಿಗೆ ಹೊಸತುಗಳ ಬಗ್ಗೆ ಇರುವ ಸಹಜ ಕುತೂಹಲ ವಯಸ್ಸಾದವರಿಗೆ ಇಲ್ಲದಿದ್ದರೇನು, ಬೆನ್ನು ಬಿಡದ ಬೇತಾಳದಂತೆ ತಂತ್ರಜ್ಞಾನ ತಲೆಗೇರಿದಾಗ ಬಳಸಲು ಯಾವುದೇ ಅಡೆತಡೆಗಳು ಕಾಣವು. ಟಿ.ವಿ. ಒಲ್ಲೆಯೆಂದ ಅಜ್ಜಿಯಂದಿರು, ಈಗ ಮಧ್ಯಾಹ್ನ ಅಯಿತೆಂದರೆ ರಿಮೋಟ್ ಹಿಡಿದು ಕೂತಿರುತ್ತಾರೆ. ರಿಮೋಟಿನಲ್ಲಿರುವ ಎಲ್ಲ ಬಟನುಗಳ ಬಗ್ಗೆ ಅವರು ತಿಳಿದುಕೊಳ್ಳುವ ಗೋಜಿಗೆ ಹೋಗದಿದ್ದರು ಟಿವಿ ಆನ್ ಮಾಡುವುದು ಹೇಗೆ? ಚ್ಯಾನಲ್ ಬದಲಾಯಿಸುವುದು ಹೇಗೆ ಎನ್ನುವುದನ್ನು ತಿಳಿದುಕೊಂಡಿರುತ್ತಾರೆ. ಅಜ್ಜಿ ಅಜ್ಜಂದಿರು ವಾಟ್ಸಾಪಿನಲ್ಲಿ ಮಕ್ಕಳ ಕ್ಷೇಮ ವಿಚಾರಿಸುತ್ತಾರೆ. ತಾವು ಹೋಗಿ ಬಂದ ತೀರ್ಥ ಯಾತ್ರೆಗಳ ಫೋಟೋಗಳನ್ನು ವಾಟ್ಸಾಪ್ ಗುಂಪುಗಳಲ್ಲಿ ಹಂಚಿಕೊಳ್ಳುತ್ತಾರೆ. ಅಲ್ಲಿ ತೆಗೆದ ವಿಡಿಯೋಗಳನ್ನು ಫೇಸ್ಬುಕ್ಕಿನಲ್ಲಿ ನೇರ ಪ್ರಸಾರ ಮಾಡುತ್ತಾರೆ. ಅಥವ ಮನೆಯಲ್ಲೇ ಕುಳಿತು ದೂರದ ಊರಲ್ಲಿ ನಡೆದ ಪೂಜೆ ಪುನಸ್ಕಾರಗಳನ್ನು ನೋಡುತ್ತ "ಧನ್ಯರಾದೆವು" ಎನ್ನುತ್ತಾರೆ. ಅವರವರಿಗೆ ಉತ್ಸಾಹವಿರುವ ಅಯಾ ವಿಷಯಗಳು ಈಗ ತಂತ್ರಜ್ಞಾನದ ಮೂಲಕ ತಲುಪುತ್ತಿವೆ. ತಂತ್ರಜ್ಞಾನವನ್ನು ಅಳವಡಿಸಿಕೊಳ್ಳಲು ಒಲ್ಲೆ ಎಂದವರನ್ನು ತಂತ್ರಜ್ಞಾನ ಅಳವಡಿಸಿಕೊಂಡುಬಿಟ್ಟಿದೆ.

*With best compliments from:*

**R. M. Hegde**

Mob: **99306 37027**

Email: rhegde92@gmail.cm

**JYOTHI CATERERS**

Specialist in: **PUNJABI & SOUTH INDIAN DISHES**

**Let us be your personal chef for your SPECIAL EVENT**
**Buffets set ups for Breakfast, Lunch and Dinner**

Bhau Daji Road, Matunga, Mumbai - 400 019.

# ಅಭಿಜಾತ ಕಲಾವಿದ ರಾಮಕೃಷ್ಣ ರೇವಣ್ಕರ್



ಕಾರವಾರದ ಕಿನ್ನರ ಎಂಬ ಹಳ್ಳಿಯಲ್ಲಿ ಜನಿಸಿದ ರಾಮಕೃಷ್ಣ ಮಹಾದೇವ ರೇವಣ್ಕರ್ ಇವರು ಹುಟ್ಟು ಕಲಾವಿದ. ಕಿನ್ನರದ ರೇವಣ್ಕರ್ ಮನೆತನ ಸುತ್ತಮುತ್ತಲಿನ ಹಳ್ಳಿ, ತಾಲೂಕು ಮತ್ತು ಜಿಲ್ಲೆಯಲ್ಲಿ ಚಿನ್ನ, ಬೆಳ್ಳಿ, ಮತ್ತು ಪಂಚಲೋಹ ಮತ್ತಿತರ ಲೋಹಗಳಿಂದ ಕಲಾತ್ಮಕವಾದ ಆಭರಣ, ವಿಗ್ರಹ ಮುಂತಾದ ವಸ್ತುಗಳನ್ನು ತಯಾರಿಸುವುದಕ್ಕೆ ಪ್ರಸಿದ್ಧವಾಗಿದೆ.

ಕಾಡು, ಗುಡ್ಡ, ಗದ್ದೆಗಳು, ನಡುಗುಡ್ಡೆಯ ಗುಂಟ ಹರಿಯುವ ಅರಬ್ಬೀ ಸಮುದ್ರ ರಾಜನ ಸಖಿ ಕಾಳಿ ನದಿಯ ದಡದಲ್ಲಿ ಆ ನೈಸರ್ಗಿಕ ಚೆಲುವಿನ ತಾಣದಲ್ಲಿ ಆಡಿ ಬೆಳೆದವರು ರಾಮಕೃಷ್ಣ ರೇವಣ್ಕರ್.ಅಕ್ಕಸಾಲಿಗ ಕುಟುಂಬದಲ್ಲಿ ಹುಟ್ಟಿದ ಇವರು ಕಲಿತದ್ದು ನಾಲ್ಕನೇ ತರಗತಿಯಾದರೂ ಇಂಗ್ಲೀಷ್, ಹಿಂದಿ, ಮರಾಠಿ ಮತ್ತು ಕನ್ನಡ ಭಾಷೆಗಳನ್ನು ಬರೆಯಬಲ್ಲ, ಓದಬಲ್ಲವರಾಗಿದ್ದರು.

ಬಾಲ್ಯದಲ್ಲಿಯೇ ಕುಲಕಸುಬಾದ ಅಕ್ಕಸಾಲಿಗ ವೃತ್ತಿಯನ್ನು ಪ್ರಾರಂಭಿಸಿದ ರೇವಣ್ಕರ್ ಶೀಘ್ರವೇ ತನ್ನ ನಾಜೂಕು, ಕಲಾತ್ಮಕ ಮತ್ತು ಹೊಸ ವಿನ್ಯಾಸದ ಒಡವೆ ತಯಾರಿಕೆಗೆ ಕಾರವಾರದಾದ್ಯಂತ ಪ್ರಸಿದ್ಧರಾದರು. ವೃತ್ತಿಯಲ್ಲಿ ಪಕ್ವತೆ ಮತ್ತು ಪ್ರೌಢತೆ ಪ್ರಾಪ್ತವಾದಂತೆ ಅವರ ಖ್ಯಾತಿ ಹುಬ್ಬಳ್ಳಿ, ಧಾರವಾಡ, ಬಾಗಲಕೋಟ, ಗದಗ, ಸೋಲಾಪುರ, ನಿಪ್ಪಾಣಿ, ಸಂಕೇಶ್ವರ ಮೊದಲಾದ ಊರಿಗೆ ಹಬ್ಬಿತು.

ಆಧುನಿಕ ಯಂತ್ರಗಳು ಲಭ್ಯವಾಗದ ಆ ಕಾಲದಲ್ಲಿ ರೇವಣ್ಕರ್ ತನ್ನ ಗ್ರಾಹಕರಿಗೆ ನವನವಿನ ವಿನ್ಯಾಸದ ಆಭರಣಗಳನ್ನು ನೀಡಿ ತೃಪ್ತಿಪಡಿಸಲು ಸ್ವತಃ ತಾವೇ ಬೇಕಾದ ಉಪಕರಣಗಳನ್ನು ತಯಾರಿಸಿಕೊಳ್ಳುತ್ತಿದ್ದರು.

ನಿಸ್ವಾರ್ಥ ಮಬೋಭಾವದ ರಾಮಕೃಷ್ಣ ಗ್ರಾಹಕರ ಮನಕ್ಕೊಪ್ಪುವ ಕಲಾತ್ಮಕ, ಅಲಂಕಾರಿಕ ಆಭರಣಗಳ ಮೂಲಕ ಜನಸೇವೆಗೆ ತನ್ನ ಜೀವನವನ್ನು ಮುಡಿಪಾಗಿಟ್ಟವರು. ಯಾವುದೇ ಆಭರಣ ಅಥವಾ ವಿಗ್ರಹಕ್ಕೆ ಸುಂದರ ಫಿನಿಶಿಂಗ್ ಟಚ್' ಕೊಡುವುದರಲ್ಲೂ ಅದ್ಭುತ ಪ್ರತಿಭೆ ಹೊಂದಿದ್ದರು.

ದೈವದತ್ತವಾಗಿ ಒಲಿದ ಕಲೆಯನ್ನು ರೇವಣ್ಕರ್ ಎಂದೂ ದುರುಪಯೋಗ ಪಡಿಸಿಕೊಂಡವರಲ್ಲ. ಅವರೊಬ್ಬ ಪ್ರಾಮಾಣಿಕ ಕೆಲಸಗಾರ. ಸಮಾಜಕ್ಕೆ ಅವರ ಅಪಾರ ಸೇವೆ ಸಂದಿದೆ. ಕಲಾವಿದರಷ್ಟೇ ಅಲ್ಲ, ಅಕ್ಕಸಾಲಿಗರು, ಶಿಲ್ಪಿಗಳು, ವ್ಯಾಪಾರಿಗಳು ಅವರ ಅನುಭವಿ, ಅಮೂಲ್ಯ ಸಲಹೆಗಳನ್ನು ಮತ್ತು ಸೇವೆಯನ್ನು ಪಡೆದಿದ್ದಾರೆ.ಸಲಹೆ ಮಾತ್ರವಲ್ಲ ದುಡಿಯುವರೊಂದಿಗೆ ದುಡಿಮೆಗಾರನಾಗಿ ಅವರು ಕೆಲಸಗಾರರಿಗೆ ಸೂಚನೆಗಳನ್ನು ನೀಡಿದ್ದಾರೆ. ಸಹನೆಮೂರ್ತಿಯಾದ ರೇವಣ್ಕರ್ ಪ್ರತಿ ಕೆಲಸದಲ್ಲೂ ಅತ್ಯುತ್ತಮ ಫಲಿತಾಂಶಕ್ಕಾಗಿ ಕಾಯುತ್ತಿದ್ದರು.

ಕಂಚು, ತಾಮ್ರದಂತಹ ಲೋಹಗಳು ತಕ್ಷಣ ಕೈಗೆ ಸಿಗದಾಗ ಇವು ತನ್ನ ಮನೆಗೆ ಸೇರಿದ ಲೋಹಗಳನ್ನು ತುಂಡರಿಸಿ, ಹಿಡಿದ ಕೆಲಸವನ್ನು ಮಾಡಿ ಮುಗಿಸುತ್ತಿದ್ದರು.

ಅರೇಬಿಕ್ ಸೇರಿದಂತೆ ಯಾವುದೇ ಭಾಷೆಯ ಅಕ್ಷರಗಳನ್ನು ಕೆತ್ತುವ ನೈಪುಣ್ಯ ಹೊಂದಿದ ರೇವಣ್ಕರ್ ಇತಿಹಾಸ ಮತ್ತು ಭೂಗೋಲದ ಜ್ಞಾನ ಸಂಪಾದಿಸಿದ್ದರು. ರಾಮಾಯಣ ಮತ್ತು ಮಹಾಭಾರತದಲ್ಲೂ ಪಾರಂಗತರಾಗಿದ್ದ ಇವರಿಗೆ ಕಲಾತ್ಮಕ ಆಭರಣಗಳನ್ನು ಮತ್ತು ವಿವಿಧ ಲೋಹಗಳ ವಿವಿಧ ರೂಪದ ವಿಗ್ರಹಗಳನ್ನು ತಯಾರಿಸಲು ಇದು ಸಹಕಾರಿಯಾಗಿತ್ತು.

ರೇವಣ್ಕರ್ ಜುವೈಲರಿ ಹುಬ್ಬಳ್ಳಿ ಮೂಲಕ ಅವರು ತಯಾರಿಸಿದ 'ರೋಟರಿ ಕ್ಲಬ್ ಪಿನ್ಸ್' ಅವರಿಗೆ ಪ್ರಶಸ್ತಿ ತಂದ ಮೊದಲ ಸಾಧನೆಯಾಯಿತು.

ಪ್ರತಿ ಪುರುಷನ ಯಶಸ್ಸಿನ ಹಿಂದೆ ಒಬ್ಬಳು ಸ್ತ್ರೀ ಇರುತ್ತಾಳೆ ಎಂಬ ನುಡಿಯಂತೆ ರಾಮಕೃಷ್ಣ ಮಹಾದೇವ ರೇವಣ್ಕರ್‌ರ ಸಾಧನೆಯ ಹಿಂದೆ ಅವರ ಪತ್ನಿ ಯಶೋಧಾ ಬ್ಯಾಯವರ ಅಪಾರ ಕೊಡುಗೆ ಇದೆ.

ಪತಿಯ ಒಲವಿನ ಪತ್ನಿಯಾಗಿ ಮಕ್ಕಳ ಮಮತೆಯ ಮಾತೆಯಾಗಿ ರೇವಣ್ಕರ್ ಕುಟುಂಬವನ್ನು ಕುಶಲ ಅಕ್ಕಸಾಲಿಗ ಕುಟುಂಬವೆಂದು ಖ್ಯಾತಿಗೇರಿಸುವಲ್ಲಿ ಯಶೋದಾ ಬ್ಯಾ ಸಾಕಷ್ಟು ಶ್ರಮ ವಹಿಸಿದ್ದಾರೆ.

ದೈವಭಕ್ತೆ ಸುಸಂಸ್ಕೃತ ಕುಲೀನ ಮಹಿಳೆ ಶ್ರೀಮತಿ ಯಶೋದಾ ಬ್ಯಾ ಪತಿ ಕೆಲಸಕ್ಕಾಗಿ ಪರ ಊರಿಗೆ ಹೋದ ಸಂದರ್ಭದಲ್ಲೂ ಮಕ್ಕಳ ಮತ್ತು ಅವರನ್ನು ಬೆಳೆಸುವ ಜವಾಬ್ದಾರಿಯನ್ನು ಸಂಪೂರ್ಣವಾಗಿ ತಮ್ಮ ಹೆಗಲೇರಿಸಿಕೊಂಡಿದ್ದರು.

ರೇವಣ್ಕರ್ ಕುಟುಂಬದ ಮೂರು ಪೀಳಿಗೆ ಅವರ ಅನುಭವದ ಮಾರ್ಗದರ್ಶನ ಪಡೆದುಕೊಂಡಿದೆ. ಮನೆಯವರು ಈಗಲೂ ಅವರನ್ನು ಶ್ರೇಷ್ಠ ಗೌರವ ಮತ್ತು ಆದರಗಳಿಂದ ಸ್ಮರಿಸಿಕೊಳ್ಳುತ್ತಿದ್ದಾರೆ.

ಪ್ರಾಮಾಣಿಕ ಪತ್ನಿಯಾದ ಯಶೋದಾ ಬ್ಯಾ ಪತಿಗೆ ಕಲಾತ್ಮಕ ಆಭರಣ ತಯಾರಿಸುವಲ್ಲಿಯೂ ಸಹಕರಿಸುತ್ತಿದ್ದರು. ಕಾರವಾರ, ಬೆಳಗಾಂ ಮತ್ತು ಸುತ್ತಮುತ್ತಲಿನ ಪ್ರದೇಶಗಳು ಅಭಿವೃದ್ಧಿ ಹೊಂದಲು ರೇವಣ್ಕರ್ ಕಲಾತ್ಮಕ ಕೊಡುಗೆಯೇ ಮೂಲ ಕಾರಣ. ಮುಂಬಯಿ, ಕಲ್ಕತ್ತ, ದಿಲ್ಲಿ, ಮದ್ರಾಸ್ ಮುಂತಾದ ನಗರಗಳಲ್ಲಿ ದುಬಾರಿ ಡೈಗಳಿಂದ ತಯಾರಾಗಿ ಪ್ರದರ್ಶನಗೊಳ್ಳುತ್ತಿದ್ದ ಆಭರಣಗಳನ್ನು ರೇವಣ್ಕರ್ ತಯಾರಿಸುತ್ತಿದ್ದರು. ಇಲ್ಲವೆ ಇವರ ನಿರ್ದೇಶನದಲ್ಲಿ ತಯಾರಾಗುತ್ತಿತ್ತು.

ನಿಸ್ವಾರ್ಥ ಸೇವೆ ಮತ್ತು ಕಲಾತ್ಮಕ ಮೌಲ್ಯಗಳ ಅಭಿವೃದ್ಧಿಯನ್ನು ಗುರಿಯಾಗಿಸಿಕೊಂಡ ರೇವಣ್ಕರ್ ಹಲವಾರು ಹಳ್ಳಿಗಳ ಮತ್ತು ಸುತ್ತಮುತ್ತಲಿನ ಜಿಲ್ಲೆಗಳ ಕುಟುಂಬಗಳು ನೀಡಿದ ಗೌರವ ಮತ್ತು ಪ್ರಸಿದ್ಧಿಗಳಿಂದ ತೃಪ್ತಿ ಹೊಂದಿದ್ದರು. ಅಲ್ಲದೆ, ಅದನ್ನೇ ತನ್ನ ಕೊಡುಗೆಗೆ ಪ್ರತಿಫಲ ಎಂದೂ ತಿಳಿದಿದ್ದರು.

ತುಂಬು ಜೀವನ ನಡೆಸಿದ ಅವರು ಸಾಮಾನ್ಯ ಮನುಷ್ಯ ಬಯಸಿದುದಕ್ಕಿಂತಲೂ ಹೆಚ್ಚಿನ ಕೊಡುಗೆ ನೀಡಿ ತಮ್ಮ ತೊಂಬತ್ತೆರಡನೇ ವರ್ಷ ಪ್ರಾಯದಲ್ಲಿ ಕೊನೆಯುಸಿರೆಳೆದರು.

ನಾವು ಈ ಶ್ರೇಷ್ಠ ಕಲಾವಿದನನ್ನು ಎಲ್ಲಾ ತರದ ಲೋಹಗಳಲ್ಲಿ ಅವರು ಮೂಡಿಸಿದ ಕಲೆಯನ್ನು, ನಿರ್ದಿಷ್ಟವಾಗಿ ಅವರು ತಯಾರಿಸಿದ ಆಭರಣವನ್ನು ಮತ್ತು ಅವರ ಕೊಡುಗೆಯನ್ನು ಸದಾ ಗೌರವದಿಂದ ಸ್ಮರಿಸುತ್ತೇವೆ.

# T.S. Champaknath



M.A.N. Prasad

Shri.T. S. Champaknath passed away on the 7th of November 2018. He was 93. He had lost his wife Sumitra five weeks earlier. He leaves behind his son Sridhar and daughter Rama Hariharan and their children.


Hailing from an illustrious family, Champaknath was born in 1925 to T.R.Srinivasa Iyengar and Jayalakshamma. Srinivasa Iyengar was the eldest son of T.S.Raghavachar and



Rukkamma, and was the elder brother of R.D.Char, the well-known industrialist of Mumbai. Raghavachar was an Executive Engineer in PWD and was actively involved in many social activities. This tradition has continued in the family.

Champaknath studied Mechanical Engineering in Bangalore. By the time of his passing out, his uncle R.D.Char - who was also an engineer from the first batch, of Govt. college of Engineering, now known as Visweswaraya College of Engineering - had successfully established a business house in Mumbai. So, he invited Champaknath to join his company and he did so. He was initially posted at locations outside Mumbai like Bhopal, Khymur, etc. and acquired hands on experience of the job. Later around 1955, he moved to Bombay.

Champaknath studied Mechanical Engineering in Bangalore. By the time of his passing out, his uncle R.D.Char - who was also an engineer from the first batch, of Govt. college of Engineering, now known as Visweswaraya College of Engineering - had successfully established a business house in Mumbai. So, he invited Champaknath to join his company and he did so. He was initially posted at locations outside Mumbai like Bhopal, Khymur, etc. and acquired hands on experience of the job. Later around 1955, he moved to Bombay.



Champaknath told him that he too is an engineer and works for such and such a company. Curious to know more, the youngster asked him what is he in that company and Champaknath very casually said that he is the M.D. of that company. The youngster was startled at the simplicity and the friendly nature of Champaknath and narrated what happened to all his friends.

During the emergency he was arrested and was in jail for some time. I recall an incidence which occurred during that time. There was some function in the family and Champaknath's mother and many relatives were present. One of the relative, with the intention of embarrassing her, asked loudly "where is Champu these days"? His mother, cool and undisturbed, replied " in Lord Krishna's birth place ". The questioner quietly disappeared.

After retiring from service, Champaknaths moved to Bangalore. He was now having more time for social activity. He worked to build up a school at Channenahalli. He built Aruna Chetana – a school for the differently abled children and Dharitri Trust again a residential school for differently abled children. These have today become huge institutions and are doing yeoman service in that sector.

Champaknath was a father figure and guiding force not only in his family circle, but also among his friends. He commanded a lot of respect and his words carried a lot of value. He may not be with us physically today, but his memory will guide us all along.

# ನಾವು ಎಂತಿರಬೇಕು

✍ ಡಾ. ಬಿ. ಆರ್. ಮಂಜುನಾಥ್



ನಾನು ಮುಂಬಯಿಗೆ ಬಂದಾಗ ಕೇವಲ 21 ವರ್ಷ. ನಾನು ಮೊದಲು ಹೋಗಿ ನೋಡಿದ್ದು ಶ್ರೀ. ಆರ್. ಡಿ.ಚಾರ್ ಅವರನ್ನು. ಆಮೇಲೆ ನೋಡಿದ್ದು ಶ್ರೀ. ಟಿ. ಎಸ್. ಚಂಪಕನಾಥ್ ಅವರನ್ನು. ಆಗ ಅವರಿಗೆ 38 ವಯಸ್ಸಿರಬಹುದು. ಖಂಇಅ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ನುಡಿಯಲ್ಲಿ, ನಡೆಯಲ್ಲಿ ಅಚ್ಚುಕಟ್ಟು. ಯಾವತ್ತೂ ಆಶಾವಾದಿ. ಭಾರತದ ಭವಿಷ್ಯದ ಬಗ್ಗೆ ತುಸುವೂ ಜಗ್ಗದ ನೆಚ್ಚಿಕೆ. ಯಾವತ್ತೂ ರಾಷ್ಟ್ರೀಯ ಸ್ವಯಂ ಸೇವಾ ಸಂಘದ ನಡೆ-ನುಡಿಯನ್ನು ಹಿಂಬಾಲಿಸುವವರು.

ಆಗ ನಮಗೆ, ನಾಟಕ-ರಂಗಭೂಮಿಯ ಹುಚ್ಚು ಹೆಚ್ಚಾಗಿತ್ತು. ರಂಗಭೂಮಿ, ಕಲೆ ಎಲ್ಲವೂ ಮಂದಿಯನ್ನು ಕೂಡಿಸುವ ಒಂದು ಬಗೆ. ಆದರೆ ದಿಟವಾದ ಕೆಲಸವೆಂದರೆ ಸಮಾಜದ ಬೆಳವಣಿಗೆಗಾಗಿ, ವಿದ್ಯಾಭ್ಯಾಸಕ್ಕಾಗಿ ಕೆಲಸ ಮಾಡುವುದೇ ಎಂಬ ತಿರುವನ್ನು ನಮಗೆ ಕೊಟ್ಟವರು ಶ್ರೀ. ಚಂಪಕನಾಥ್. ಆಗ ನಾವು ದಿಟ್ಟತನದಿಂದ ಅಸೋಸಿಯೇಷನ್ನಿನ ಹಿರಿಯರನ್ನೂ ಎದಿರುಸುತ್ತಿದ್ದನ್ನು ಕಂಡು, "ಹೌದು, ದಿಟಕ್ಕಾಗಿ ಹಾಗೂ ಅಸೋಸಿಯೇಷನ್ನಿನ ಹಿತಕ್ಕಾಗಿ, ಹೋರಾಡಬೇಕು. ಆದರೆ ಹಿರಿಯರ ಬಗ್ಗೆ ನಾವು ಗೌರವವನ್ನು ತೋರಬೇಕು. ಅವರಿಂದಲೇ ಇಂದು ಅಸೋಸಿಯೇಷನ್ ಇರುವುದು" ಎಂದು ಹೇಳಿಕೊಟ್ಟವರು ಅವರು.

ಬಾಂಗ್ಲಾದೇಶದ ಯುದ್ಧ 1970-71ರಲ್ಲಿ ಆದಾಗ, ನಾವೆಲ್ಲಾ ಇಂದಿರಾ ಗಾಂಧಿಯವರನ್ನು ಕೊಂಡಾಡಿದ್ದೆವು. ಆದರೆ 1975 ಎಮರ್ಜೆನ್ಸಿಯನ್ನು ತಂದು, ಎಲ್ಲ ವಿರೋಧಿಗಳನ್ನೂ ಸೆರೆಮನೆಗೆ ಹಾಕಿ ಸಂವಿಧಾನವನ್ನು 25 ಬಾರಿ ತಿದ್ದಿದಾಗ ನಾವೆಲ್ಲರೂ ಅವರಿಗೆ ವಿರೋಧವಾದೆವು. ಚಂಪಕನಾಥ್‌ರವರನ್ನು ಕೂಡ ಸರ್ಕಾರ್ ಸೆರೆಮನೆಯಲ್ಲಿ ಕೂಡಿ ಹಾಕಿತ್ತು. ಆದರೆ ಚಂಪಕನಾಥ್ ಎಂತಹ ಶಾಂತ ಸ್ವಭಾವದವರೆಂದರೆ "ಇದು ಒಂದು ಸದ್ಯದ ವೈಪರೀತ್ಯ ಅಷ್ಟೆ. ಭಾರತದ ಭವಿಷ್ಯ ಭವ್ಯವಾಗಿದೆ" ಎನ್ನುತ್ತಿದ್ದರು.

ಅಸೋಸಿಯೇಷನ್ನಿನ ಚುಕ್ಕಾಣಿಯನ್ನು 5 ವರ್ಷಗಳ ಕಾಲ ನಡೆಸಿದರು. ಅದೂ ಬಂಗಾರ ಹಬ್ಬದ ವರ್ಷಗಳಲ್ಲಿ. ಅವರ ಮುಂದಾಳುತನದಲ್ಲಿ ಪ್ರತಿ ತಿಂಗಳು 4 ಸಾರ್ವಜನಿಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಎಲ್ಲಾ ಕಾರ್ಯಕ್ರಮಗಳಿಗೆ ಹಣವನ್ನು ಕೂಡಿಸುವುದರಿಂದ ಹಿಡಿದು, ಎಲ್ಲಾ ಕಾರ್ಯಕ್ರಮಗಳಿಗೂ ವ್ಯವಸ್ಥೆ ಮಾಡುವುದು ಅವರ ಹೊಣೆಗಾರಿಕೆಯಾಗಿತ್ತು. 1976ರಲ್ಲಿ ಎಮರ್ಜನ್ಸಿಯ ನಡುವಿನಲ್ಲಿ, ನಾವು ದೇವರಾಜ್ ಅರಸು, ಕರ್ನಾಟಕದ ಮುಖ್ಯಮಂತ್ರಿಗಳನ್ನು ಕರೆಸಬೇಕೆಂದಾಗ, ದೇವರಾಜ ಅರಸು ಅವರು ಎಮರ್ಜನ್ಸಿಯನ್ನು ಬೆಂಬಲಿಸಿದ ಕಾಂಗ್ರೆಸಿಗರಾದರೂ ಕೂಡ, ಕೂಡಲೇ ಒಪ್ಪಿ ಅವರನ್ನು ಕರೆಯಲು ಮುಂದಾದರು.

ತಾವೊಬ್ಬರೇ ಅಸೋಸಿಯೇಷನ್ನಿನ ಕೆಲಸದಲ್ಲಿ ತೊಡಗಿದರೆ ಸಾಲದೆಂದು, ಮನೆಯವರನ್ನೆಲ್ಲಾ ತೊಡಗಿಸಿದ್ದುದು ವಿಶೇಷ.

ಅಸೋಸಿಯೇಷನ್ನಿನ 90 ಸಂದಾಗ, ಅವರನ್ನು ಕರೆದು ಸನ್ಮಾನಿಸಿದ್ದುದು ನೆನಪಿದೆ. ಆಗ ತಾವಾಗಿಯೇ ಬಂದು ಅಸೋಸಿಯೇಷನ್ ಹಾಗೂ ಕನ್ನಡ ಶಾಲೆಗೆ ಭೇಟಿ ಇತ್ತು ನಮ್ಮೆಲ್ಲರನ್ನು ಹುರಿದುಂಬಿಸಿದ್ದರು.

ಹೆಂಡತಿ ಸುಮಿತ್ರಾ ಹೋದ ಒಂದೇ ತಿಂಗಳಿಗೆ ಅವರೂ ಕೂಡ ಪರಲೋಕ ಯಾತ್ರೆಯನ್ನು ಮಾಡಿದರು. ಇದಕ್ಕೆ ಸಹಗಮನ ಎನ್ನುವುದು

ಚಂಪಕನಾಥ್, ಹೆಸರಿಗೆ ತಕ್ಕಂತೆ ಮರೆಯಲಾಗದ ನರುಗುಂಪು.

# ಕಲಿಕೆ – ಅರಿವು – ತಿಳಿವು

## ವಿಚಾರ ಮಂಥನ

ಇಂದು ನಮ್ಮಲ್ಲಿ ಊರುತುಂಬಾ ಕಲಿಕೆಯ ಶಾಲೆಗಳು ಹುಟ್ಟಿವೆ. ಹಿಂದಿದ್ದ ಕೂಲಿಮಠ, ಈಗ ಕೀಳರಿಮೆಯ ತುಳಿತದಲ್ಲಿ ಹೊಸಕಿ ಹಾಕಲ್ಪಟ್ಟಿದೆ. ಈಗ ಇಂಟರ್ ನ್ಯಾಷನಲ್ ಶಾಲೆಗಳು, ಅಂತರಿಕ್ಷ ಶಾಲೆಗಳಲ್ಲಿದೆ, ಬೇರೆ ನಾಡುಗಳಲ್ಲಿ ದಾಖಲಾಗಿರುವ ಶಾಲೆಗಳು ಇಲ್ಲಿ ನಮ್ಮ ಎಳೆಯರಿಗೆ ಕಲಿಸುತ್ತವೆ. ಈಗ ತಂದೆ ತಾಯಿಗಳಿಗೆ "ಮಕ್ಕಳು ಏನಾದರೂ ತಿಳಿವು ಪಡೆಯುತ್ತಾರೆ" ಎನ್ನುವುದಕ್ಕಿಂತ, ಅವರು ಮೊದಲು ಇಲ್ಲಿಂದ ಪಾರಾಗಿ ತೊರಂಪು ನಾಡಿನಲ್ಲಿ ನೆಲಸಬೇಕು ಎಂಬುವ ಹಂಬಲದಿಂದ ಇಂತಹ ಶಾಲೆಗಳನ್ನೇ ಅರಸುತ್ತಾರೆ.

ಇನ್ನು ನಮ್ಮ ನಾಡಿನ ಶಾಲೆಗಳಲ್ಲಿ ಕಲಿಸುವ ಪರಿಯನ್ನು ನೋಡೋಣ. ಒಂದು ಕಲಿಕೆಯ ಪರಿಯಲ್ಲಿ ಸರ್ಕಾರದ ಒಪ್ಪಿಗೆಯಿಂದ ಅಚ್ಚಾದ ಹೊತ್ತಿಗೆಗಳಿಂದ ಪ್ರತಿದಿನ ಪಾಠ ಮಾಡುವುದೇ ಆಗಿದೆ. ಈ ಪಾಠದ ಮುಖ್ಯ ಗುರಿ, ನೂರಕ್ಕೆ ನೂರು ಪಾಠಗಳನ್ನು 8 ತಿಂಗಳಲ್ಲಿ ಅಂದರೆ, 200 ದಿನಗಳು ಇಲ್ಲ. ಮುಗಿಸುವುದು, ಮುಗಿಸುವುದು ಎಂದರೆ ಕಲಿಸುವುದು ಎಂದಲ್ಲ. ಅಂದರೆ ಮಾಸ್ತರುಗಳು, "ನಮ್ಮ ಕೆಲಸವಾಯಿತು" ಎಂದು ಕೈ ಎತ್ತುವುದಷ್ಟೇ.

ಕಲಿಕೆ ಎಂದರೇನು, ಎಂದು ಹುಡುಕುತ್ತಾ ಇಂಟರ್‌ನೇಷನಲ್ ಶಾಲೆಗಳಿಗೆ ಹೋದರೆ, ಅಲ್ಲಿ ಎಲ್ಲವನ್ನೂ ನಾವು ಟೆಕ್ನಾಲಜಿ ಬಳಸಿ ಕಲಿಸುತ್ತೇವೆ ಎಂಬ ಹೆಮ್ಮೆಯಷ್ಟೇ.

ದಿಟವಾಗಿಯೂ "ಕಲಿಕೆ ಎಂದರೇನು? ಈಗ ಒಂದು ಮಗು ಈ ಭೂಮಿಯಲ್ಲಿ ಹುಟ್ಟುತ್ತದೆ. ಅದಕ್ಕೆ ಇಲ್ಲಿರುವುದೆಲ್ಲಾ, ಸೋಜಿಗ, ಹೆದರಿಕೆ ತರಿಸುವುದೇ ಆಗಿದೆ.

- ಇಲ್ಲಿ ಚಿರತೆ, ಹುಲಿ, ಹಾವು, ಗಿಡುಗ, ಆನೆಗಳ್ ಇರುತ್ತವೆ. ಅವುಗಳ ನಡುವೆ ಇರಬೇಕಾದರೆ ನಾವು ಅವುಗಳನ್ನು ತಿಳಿಯಬೇಕು.
- ಇಲ್ಲಿ ಸಿಡಿಲು–ಮಿಂಚು –ಗುಡುಗು, ಕಾಳ್ಗಿಚ್ಚು, ಭೂಕಂಪ ಸಿಡಿಯುವ ಬೆಟ್ಟ ಇರುತ್ತವೆ. ಅವುಗಳ ನಡುವೆ ನಾವಿರಬೇಕೆಂದರೆ, ಅವುಗಳ ಬಗ್ಗೆ ನಾವು ಹೆಚ್ಚು ತಿಳಿಯಬೇಕು.
- ಕಡಲು, ಹೊಳೆ, ಉಪ್ಪುನೀರು, ಎಲ್ಲದರ ನಡುವೆ ಇರಬೇಕಾದರೆ ಅವುಗಳನ್ನು ನಾವು ತಿಳಿಯಬೇಕು.

ಇವೆಲ್ಲದರ ಬಗ್ಗೆ ಹೆಚ್ಚು ತಿಳಿದುಕೊಂಡಿದ್ದರೆ ಆ ಮಗು ಬಹುಕಾಲ ಇಲ್ಲಿ ನೆಮ್ಮದಿಯಿಂದ ಬಾಳಬಹುದು.

- ಹುಲಿ –ಚಿಂತೆ–ಹಾವು–ಗಿಡುಗಗಳನ್ನು ನಾವು ಜಿಯಾಲಜಿ ಎನ್ನುತ್ತೇವೆ.
- ಸಿಡಿಲು –ಮಿಂಚು–ಗುಡುಗುಗಳನ್ನು ಫಿಸಿಕ್ಸ್ ಎನ್ನುತ್ತೇವೆ.
- ಗಿಡ–ಮರ–ಗೆಡ್ಡೆ–ಗೆಣಸು, ಕಾಳು ಕಡ್ಡಿಗಳನ್ನು ಬಾಟನಿ ಎನ್ನುತ್ತೇವೆ.
- ಭೂಕಂಪ, ಸಿಡಿ ಬೆಟ್ಟಗಳನ್ನು ಸೈಸ್ಮಾಲಜಿ ಎನ್ನುತ್ತೇವೆ.
- ನಮ್ಮ ಸುತ್ತ ಮುತ್ತ ಇರುವ ನೆಲ, ಹೊಳೆ, ಗುಡ್ಡ, ಕಡಲುಗಳನ್ನು ಜಿಯೋಗ್ರಫಿ ಎನ್ನುತ್ತೇವೆ.
- ನೆಲದಡಿ ಸಿಗುವ ಅದುರುಗಳು, ಬಂಡೆಗಳು ಖನಿಜಗಳನ್ನು, ಜಿಯಾಲಜಿ ಎನ್ನುತ್ತೇವೆ ಅಷ್ಟೇ.

ಇವೆಲ್ಲವೂ ನಮ್ಮ ಸುತ್ತಲೂ ಇರುವ, ಆವರಿಸಿರುವ ಭೂಮಿಯ ಲಕ್ಷಣಗಳು.

ಮೊಟ್ಟ ಮೊದಲು ಮಗು ತಿಳಿಯಬೇಕಾದುದು ಭೂಗೋಳ. ತಾನು ನಿಂತಿರುವ ನೆಲ ಎಂತಿದೆ? ಸಮತಟ್ಟಾಗಿದೆಯೇ, ಗುಡ್ಡಗಳಿವೆಯೇ, ಕಾಡುಗಳು ಹರಿಯುವ ಹೊಳೆಗಳಿವೆಯೇ ಎನ್ನುವುದನ್ನು ಮೊದಲು ಮಗು ತಿಳಿಯಬೇಕಾದ ಶಾಸ್ತ್ರ.

- ಏಕೆಂದರೆ ಈ ನೆಲದ ಗುಣದಿಂದಲೇ, ಅಲ್ಲಿ ಮಳೆಗಾಳಿಗಳಾಗುವುದು
- ಮಳೆಗಾಳಿಗಯಿಂದ ನೀರು ದೊರಕುವುದು
- ನೀರಿರುವುದರಿಂದಲೇ ಮರ ಗಿಡಗಳು ಅವುಗಳ ನಡುವಿನಲ್ಲಿಯೇ ಜೀವ ಜಂತುಗಳು ಬೆಳೆಯುವುದು.
- ನೀರು–ನಿಡಿ, ಗಿಡ ಮರಗಳು, ಪ್ರಾಣಿಗಳು ಇರುವಲ್ಲಿಯೇ ಮಂದಿ ನೆಲೆಸುವುದು.

ಆದ್ದರಿಂದ, ಮಗು ಮೊಟ್ಟ ಮೊದಲು ತಿಳಿಯಬೇಕಾದುದು, "ಭೂಗೋಳ".

ಭೂಗೋಳದಿಂದಲೇ ಖನಿಜಗಳು ದೊರಕುವುದು. ಭೂಗೋಳಕ್ಕಾಗಿಯೇ ಕಾದಾಡಿ ಮಡಿದಾಗ, ಇತಿಹಾಸ ಹುಟ್ಟುವುದು.

ಭೂಮಿಯನ್ನು ಬಿಟ್ಟು ಹಾರಾಡಬೇಕೆಂದರೂ ಕೂಡ, ನಾವು ಭೂಮಿಯನ್ನೇ ಸುತ್ತಬೇಕಾಗುತ್ತದೆ. ಹೀಗಾಗಿ ಭೂಮಿಯೇ ನಾವು ಮೊದಲು ತಿಳಿಯಬೇಕಾದ ವಿಷಯ.

ಭೂಮಿಯನ್ನು ಅಳತೆ ಮಾಡುವ ಶಾಸ್ತ್ರವನ್ನು ನಾವು ಜಾಮಿತ್ರಿ ಎನ್ನುತ್ತೇವೆ. ಆದರೆ ಎಲ್ಲಾ ಶಾಲೆಗಳಲ್ಲಿಯೂ, ಇಂಟರ, ನೆಂಟರ, ಅಂಟದ ಶಾಲೆಗಳಲ್ಲೂ, ಭೂಗೋಳವನ್ನು ಮಕ್ಕಳಿಗೆ ಕಲಿಸುವುದೇ ಇಲ್ಲ.

ಆದ್ದರಿಂದ ಮಕ್ಕಳಿಗೆ ನಮ್ಮ ನೆಲದ ನೆಂಟು ಏನೂ ಇಲ್ಲ. ಕಲಿಸುವ ಮಾಸ್ತರುಗಳಿಗೇ ಯಾವ ಭೂಖಂಡದ ಪಟವನ್ನು ಬರೆಯುವುದೇ ಬರುವುದಿಲ್ಲ. ಏನು ಕೇಳಿದರೂ, ಪ್ರೊಜೆಕ್ಷನ್ ಪರದೆಯನ್ನು ತೋರಿಸಿ ಬಿಡುತ್ತಾರೆ.

ಕೆಲವನ್ನು ತಲೆಯ ಎಡಪಕ್ಕದಿಂದ ಕಲಿಯಬೇಕಾಗುತ್ತದೆ. ಇನ್ನು ಕೆಲವನ್ನು ತಲೆಯ ಬಲಪಕ್ಕದಿಂದ ಕಲಿಯಬೇಕಾಗುತ್ತದೆ. ಎಣಿಕೆ, ಗಣಿತ, ಓದುವುದು, ಬರೆಯುವುದನ್ನು ತಲೆಯ ಎಡಪಕ್ಕದಿಂದ ಕಲಿಸಬೇಕಾಗುತ್ತದೆ.

ಹಾಡು, ಕುಣಿತ, ಚಿತ್ರ ಬರೆಯುವುದು, ಇವೆಲ್ಲವನ್ನೂ ತಲೆಯ ಬಲಪಕ್ಕದಿಂದ ಕಲಿಸಬೇಕಾಗಿದೆ.

ಆದರೆ ಇವೆಲ್ಲಕ್ಕೂ ಮಿಕ್ಕು, ಮಗುವಿಗೆ, ನೋಡಿದ, ಕೇಳಿದ, ಎಲ್ಲಾ ವಿಷಯಗಳ ಬಗ್ಗೆ "ಪ್ರಶ್ನೆ" ಮಾಡುವ ನಡವಳಿಕೆಯನ್ನು ಮೊಟ್ಟಮೊದಲು ಕಲಿಸಬೇಕಾಗಿದೆ. "ಪ್ರಶ್ನೆ" ಕೇಳಿದಾಗ "ಉತ್ತರ" ದೊರೆಯುತ್ತದೆ. ಅಂತೆಯೇ ಕೇಳಿದ್ದನ್ನೆಲ್ಲಾ ತಲೆಗೆ ತುಂಬಿಕೊಳ್ಳುವ ಕಸದ ಬುಟ್ಟಿ" ಯಾಗುವುದಿಲ್ಲ.

ಇಂದು ನಮ್ಮೆಲ್ಲಾ ಶಾಲೆಗಳಲ್ಲಿ, ಮಗು ಏನದರು ಪ್ರಶ್ನೆ ಕೇಳಿದರೆ, "ತೆಪ್ಪಗೆ ಕೂತ್ಕೋ, ಅಧಿಕಪ್ರಸಂಗಿ" ಎನ್ನುವ ಮೂದಲಿಕೆಯೇ ದೊರೆಯುತ್ತದೆ. ಎಷ್ಟೋ ಮಕ್ಕಳ ತಂದೆ ತಾಯಿಯರು, ಶಾಲೆಯಿಂದ "ನಿಮ್ಮ ಮಗ ಏನೂ ಕಲಿಯುವುದೇ ಇಲ್ಲ. ಬರಿಯ ಪ್ರಶ್ನೆ ಕೇಳುತ್ತಾ ಇರುತ್ತಾನೆ" ಎಂಬ ದೂರನ್ನೇ ಕೇಳುತ್ತಾರೆ.

ಏಕೆ ಹೀಗೆ? ಕಲಿಸುವ ಮಾಸ್ತರುಗಳಿಗೆ ಏನೂ ಗೊತ್ತಿಲ್ಲದಿರುವುದರಿಂದ, ಅದನ್ನು ಮುಚ್ಚಿ ಹಾಕಿಕೊಳ್ಳಲೋಸುಗ, ಮಕ್ಕಳನ್ನೇ ದೂರಿದರಾಯ್ತು, ಮಕ್ಕಳಿಗೆ ಎಲ್ಲವನ್ನೂ ಅರಿಯುವ ತವಕ. ನೀವೂ ಮಕ್ಕಳನ್ನು ನೋಡಿದರೆ, ಅವು ಎಲ್ಲಾ ವಸ್ತುಗಳನ್ನೂ, ಮುಟ್ಟಿ ಮುಟ್ಟಿ ನೋಡಬೇಕು. ಏಕೆಂದರೆ, ಅವೆಲ್ಲವೂ ಅವರಿಗೆ ಸೋಜಿಗವಾಗಿ ತೋರುತ್ತವೆ. ನೋಟ ದೂರದಿಂದಾರೆ, ಮುಟ್ಟುವುದರಿಂದ ಎಷ್ಟೋ ಆವಸ್ತುಗಳ ಗುಣಗಳ ಅರಿವಾಗುತ್ತದೆ.

ಕಲಿಸುವವರಿಗೆ, ತಾವು ಏನನ್ನಾದರೂ ಕಲಿಸುವ ಮೊದಲು ಅದರ ಬಗ್ಗೆ ತಾವು ಏನಾದರೂ ತಿಳಿದು ವಿಚಾರ ಮಾಡಬೇಕೆಂಬ, ತಾಳ್ಮೆ ಅರಿವು ಇಲ್ಲವೇ ಇಲ್ಲ. "ಮಕ್ಕಳಿಗೆ ತಾನೇ ಕಲಿಸುವುದು? ಹೇಗಾದರೂ ಆಗುತ್ತದೆ" ಎಂಬ ಹೀನಾಯ ಎಲ್ಲಾ ಮಾಸ್ತರುಗಳಲ್ಲಿ ತುಂಬಿದೆ.

ಇನ್ನು ಮಾತು –ಭಾಷೆ ಇದು ಮಂದಿಯ ನಡವಳಿಕೆ, ಒಬ್ಬರಿಗೊಬ್ಬರು ತಿಳಿಯುವುದಕ್ಕೆ ಒಂದು ಅಣಿಗೆಯಾಗಿದೆ ಎಂದು ಯಾವ ಮಾಸ್ತರೂ ತಿಳಿಸಿಲ್ಲ,. ಸ್ಪೆಲ್ಲಿಂಗ್ ಬಹಳ ಮುಖ್ಯವಾಗುತ್ತದೆ. ಇಂಗ್ಲೀಷ್ ಕಲಿಸುವಾಗ ಅದನ್ನು ಮಗು ಮನೆಯಲ್ಲಿ ತಾಯಿಯ ತೊಡೆಯ ಮೇಲೆ ಕಲಿತ ಮಾತಿಗೆ ಹೊಂದಿಸಿ ಕಲಿಸಬೇಕೆಂಬುದೇ ಇಲ್ಲ.

"ಡೋರ್" ಎನ್ನುವ ಮಾತು "ದಾರ್" ಎಂಬ ಮರಾಠಿಯ "ದ್ವಾರ" ಎಂಬ ಸಂಸ್ಕೃತದಿಂದ ಬಂದಿದೆ. "ಸ್ಟಾರ್" ಎನ್ನುವ ಮಾತು "ತಾರಾ" ಎಂಬುವ ಸಂಸ್ಕೃತದ "ಸಿತಾರಾ" ಎಂಬ ಹಿಂದಿಯ ಮಾತಿಂದ ಬಂದಿದೆ"

ಕನ್‌ಕ್ಲೂಷನ್‌ಗಳನ್ನು ಮಾಡಿದರೆ ಒಂದು 200 ಹಾಳೆಗಳ ಥೀಸಿಸ್ ಆಗುತ್ತದೆ. ಎಷ್ಟೋ ವಿಶ್ವವಿದ್ಯಾಲಯಗಳಲ್ಲಿ ಥೀಸಿಸ್ ಬರೆದು ಕೊಡುವಂತಹ ಗುತ್ತಿಗೆದಾರರೂ ದೊರಕುತ್ತಾರೆ. ಇಂದು ಭಾರತದ ಯಾವ ಲ್ಯಾಬೋರೇಟರಿ, ವಿಶ್ವವಿದ್ಯಾಲಯಗಳಲ್ಲಿ ಏನೂ ಸಂಶೋಧನೆ ನಡೆದೇ ಇಲ್ಲ. ವಿಜ್ಞಾನದ್ದೇ ಈಪಾಡಾದರೆ, ಇನ್ನು ಸಾಹಿತ್ಯ, ಇತಿಹಾಸ ಸಮಾಜ ಶಾಸ್ತ್ರಗಳಲ್ಲಿ ಪಾಡು, ನಾಯಿ ಪಾಡು ನಗುಪಾಟಲು.

ಯಾವ ನಾಡಿನಲ್ಲಿ ಸಂಶೋಧನೆ ಇಲ್ಲವೋ ಅದರ ಭವಿಷ್ಯ ಸೊನ್ನೆಯಾಗಿರುತ್ತದೆ. ಇಂದು ಚೀನಾ, ಜಪಾನ್, ಅಮೇರಿಕ, ಜರ್ಮನಿ, ರಷ್ಯಾಗಳಲ್ಲಿ ನಡೆಯುತ್ತಿರುವ ಸಂಶೋಧನೆಗಳು ಆ ನಾಡುಗಳ ಭವಿಷ್ಯವಾಗಿವೆ. ಹೀಗೆ ನಮ್ಮ "ಕಲಿಕೆ ಕ್ರಮ" ಮೊದಲ ತರಗತಿಯಿಂದಲೇ ಸೊನ್ನೆಯಾಗಿರುವಾಗ, ಅದು ಬೆಳೆಯುವುದಾದರೂ ಎಂತು?"ಏನು, ಎಂತು, ಏಕೆ" ಅನ್ನುವುದು ತಿಳಿವಿನ ಮೊದಲ ಮೂರು ಹೆಜ್ಜೆಗಳು ಅದನ್ನು ತುಳಿದಾಗಲೇ ನಾವು ಮುನ್ನೆಡೆಯುವುದು.

("ಕಾಕ್" ಎನ್ನುವ ಕೋಳಿಯ ಹೆಸರು, "ಕುಕ್ಕುಟ'ದಿಂದ ಬಂದಿದೆ, ಎಂದರೆ ಮಗುವಿಗೆ ಬೇಗ ತಿಳಿಯುವುದು. ಆದರೆ ಇವುಗಳ ಬಗ್ಗೆ ಯೋಚಿಸುವ ಪರಿಯೇ ನಮ್ಮ ಮಾಸ್ತರುಗಳಿಗೆ ತಿಳಿದಿಲ್ಲ. ಅರ್ಥಮ್ಯಾಟಿಕ್, ಮ್ಯಾಥಮೇಟಿಕ್ಸ್, ಜಾಮಿಟ್ರಿ ಎಂಬ ಮಾತುಗಳ ಬೇರುಗಳ ಬಗ್ಗೆ ಅವರು ತಮ್ಮ ತಲೆಯನ್ನೇ ಕೆಡಿಸಿಕೊಂಡಿಲ್ಲ. ಹೀಗೆ ಪ್ರಶ್ನೆ ಕೇಳಬಾರದೆಂದೇ ಹೇಳಿಕೊಟ್ಟ ಕಲಿಕೆಯಿಂದ ಆಗಿರುವ ಅಪಾಯ ನಮ್ಮ ಕಣ್ಣಮುಂದಿದೆ. ಈಗ ಭಾರತದಲ್ಲಿ ಸಂಶೋಧನೆ ಯಾರಿಗೂ ಬೇಡದ ವಿಷಯ. ಯಾರೂ ಸಂಶೋಧನೆಗೆ ಹೋಗುವುದೇ ಇಲ್ಲ. ಡಾಕ್ಟರೇಟ್ ಪದವಿ ಪಡೆಯುವುದು ರೀಡರ್–ಪ್ರೊಫೆಸರ್, ಕೆಲಸ ಸಿಗುತ್ತದೆಂದು ಮಾತ್ರಕ್ಕೆ, ಅಷ್ಟೇ. ನಮ್ಮ ವಿಶ್ವವಿದ್ಯಾಲಯಗಳಲ್ಲಿ ಇಂದು ದೊರಕುವ ಡಾಕ್ಟರೇಟ್ ಥೀಸಿಸ್‌ಗಳಿಗೆ, ಅವು ಬರೆದಿರುವ ಹಾಳೆಗಳ ಬೆಲೆಯೂ ಇಲ್ಲವಾಗಿದೆ. 50 ಹಾಳೆ, ಹಿಂದಿನ ರೆಫರೆನ್ಸ್‌ಗಳು, ಹಾಕಿದ ಟೇಬಲ್‌ಗಳನ್ನೇ ಮತ್ತೆ ಗ್ರಾಫ್ ಆಗಿ ತೋರಿಸುವುದು, ಅಷ್ಟು ಫೋಟೋಗಳು. ಆಮೇಲೆ 4 ಹಾಳೆ ಡಿಸ್‌ಕಷನ್ ಆನಂತರ ಎರಡು ಹಾಳೆ) ಕನ್‌ಕ್ಲೂಷನ್ ಮಾಡಿದರೆ ಒಂದು 200 ಹಾಳೆಗಳ ಥೀಸಿಸ್ ಆಗುತ್ತದೆ. ಎಷ್ಟೋ ವಿಶ್ವವಿದ್ಯಾಲಯಗಳಲ್ಲಿ ಥೀಸಿಸ್ ಬರೆದು ಕೊಡುವಂತಹ ಗುತ್ತಿಗೆದಾರರೂ ದೊರಕುತ್ತಾರೆ.

ಇಂದು ಭಾರತದ ಯಾವ ಲ್ಯಾಬೋರೇಟರಿ, ವಿಶ್ವವಿದ್ಯಾಲಯಗಳಲ್ಲಿ ಏನೂ ಸಂಶೋಧನೆ ನಡೆದೇ ಇಲ್ಲ. ವಿಜ್ಞಾನದ್ದೇ ಈ ಪಾಡಾದರೆ, ಇನ್ನು ಸಾಹಿತ್ಯ, ಇತಿಹಾಸ, ಸಮಾಜ ಶಾಸ್ತ್ರಗಳಲ್ಲಿ ಪಾಡು,ನಾಯಿಪಾಡು, ನಗುಪಾಟಲು.ಯಾವ ನಾಡಿನಲ್ಲಿ ಸಂಶೋಧನೆ ಇಲ್ಲವೋ ಅದರ ಭವಿಷ್ಯ ಸೊನ್ನೆಯಾಗಿರುತ್ತದೆ. ಇಂದು ಚೀನಾ, ಜಪಾನ್, ಅಮೇರಿಕ, ಜರ್ಮನಿ, ರಷ್ಯಾಗಳಲ್ಲಿ ನಡೆಯಿತ್ತಿರುವ ಸಂಶೋಧನೆಗಳು, ಆ ನಾಡುಗಳ ಭವಿಷ್ಯವಾಗಿವೆ.ಹೀಗೆ ನಮ್ಮ "ಕಲಿಕೆ ಕ್ರಮ" ಮೊದಲ ತರಗತಿಯಿಂದಲೇ ಸೊನ್ನೆಯಾಗಿರುವಾಗ ಅದು ಬೆಳೆಯುವುದಾದರೂ ಎಂತು?"ಏನು ಎಂ, ಏಕೆ' ಅನ್ನುವುದು ತಿಳಿವಿನ ಮೊದಲ ಮೂರು ಹೆಜ್ಜೆಗಳು ಅದನ್ನು ತುಳಿದಾಗಲೇ ನಾವು ಮುನ್ನೆಡೆಯುವುದು.

# ಕನ್ನಡ ನಾಡು– ಎಲ್ಲಿಂದ – ಎಲ್ಲಿಯವರೆಗೆ

ಕನ್ನಡ ನಾಡಿನ ಮೊಟ್ಟಮೊದಲ ಕುರುಹು ಪಾಣಿನಿಯ ಬರಹಗಳಲ್ಲಿ ಕಾಣಬರುತ್ತದೆ. ಅವನು ಕೆಲವು ಬುಡಕಟ್ಟಿನ ಮಂದಿಯನ್ನು "ಕರ್ನಾಢಕ" ಗೋತ್ರದವರೆಂದು ಕರೆಯುತ್ತಾನೆ. "ಕರ್ನಾಟಕ" ಒಂದು ನಾಡೆಂದು ಮಹಾಭಾರತದಲ್ಲಿ ಕಾಣ ಬರುತ್ತದೆ. ಭೀಷ್ಮಪರ್ವದಲ್ಲಿ, ದಕ್ಷಿಣದಲ್ಲಿ ಕೆಳಕಂಡ ನಾಡುಗಳಿದ್ದವೆಂದು ಬರೆಯಲಾಗಿದೆ.

ಅಥಪರೇ ಜನಪದಾಃ ದಕ್ಷಿಣ ಭಾರತರ್ಷಭ

ದರ್ವಿಡಃ ಕೇರಲ, ಪ್ರಾಚ್ಯ ಮೂಷಿಕವನವಾಸಿಕಾಃ

ಕರ್ನಾಟಕ ಮಹೀಷಕ ವಿಕಲ್ಪಃ ಮೂಷಕಸ್ತಥಾಃ

ಪುಣೆಯ ಮಹಾಭಾರತ ಪ್ರಕಾಶನದಲಿ, "ಕುಂತಲ" ಅಥವಾ "ಉನ್ನತ್ಯಕ" ವೆಂದು ಬರೆಯಲಾಗಿದೆ. "ಉನ್ನತ್ಯಕ" ವೆಂದರೆ ಎತ್ತರವಾದ ನಾಡು ಎಂದು. "ಕರುನಾಡು" ಎಂದರೂ ಕೂಡ ಎತ್ತರದ ನಾಡೆಂದೇ ಆಗಿದೆ. ಪಶ್ಚಿಮ ಘಟ್ಟ ಮತ್ತು ಪೂರ್ವ ಘಟ್ಟಗಳು ತೊಟ್ಟಿಲಿನಂತೆ ಕರುನಾಡನ್ನು ಎತ್ತಿ ಹಿಡಿದಿವೆ. ಘಟ್ಟಗಳ ಮೇಲಿರುವ ನಾಡು "ಕರುನಾಡು", ಕೆಳಗಿರುವ ನಾಡು "ಕೇಳುನಾಟ್ಟು".

ನಂತರದ ಸಂಸ್ಕೃತದ, ಮಾರ್ಕಂಡೇಯ, ಭಾಗವತ, ಬೃಹತ್ ಸಂಹಿತ, ವರಾಹ ಸಂಹಿತೆಗಳು, 1ನೆಯ ಶತಮಾನದ ನಂತರದವು. ಅವು ಕೂಡ "ಕರ್ನಾಟಕ"ವೆಂಬುದನ್ನು ಹೇಳುತ್ತವೆ. ಹಳೆಯ ತಮಿಳಿನ ಬರಹಗಳು ಕೂಡ, "ಕರುನಾಡರ್'. "ಕರುನಾಟಕರ್" ಎಂದು ಹೇಳುತ್ತವೆ.

ಚಾಲುಕ್ಯರು, ಶಾತವಾಹನರು, ದೇವಗಿರಿ ಯಾದವರು, ಕದಂಬರು, ನರ್ಮದಾದ ಉತ್ತರದಲ್ಲಿ ಕೂಡ ತಮ್ಮ ಸಾಮ್ರಾಜ್ಯವನ್ನು ಹೊಂದಿದ್ದರು. ಇವರೆಲ್ಲರ ರಾಜಭಾಷೆ, ಕನ್ನಡವೇ ಆಗಿತ್ತೆಂಬುದು, ಶಾಸನಗಳಿಂಡ ತಿಳಿದಿದೆ. 8ನೆಯ ಶತಮಾನದ ರಾಷ್ಟ್ರಕೂಟ ರಾಜ, ನೃಪತುಂಗ ತನ್ನ "ಕವಿರಾಜಮಾರ್ಗ"ದಲ್ಲಿ

"ಕಾವೇರಿಯಿಂದ ಗೋದಾವರೆ ಮಿರ್ದ

ನಾಡದಾ ಕನ್ನಡದೊಳ್' ಎನ್ನುತ್ತಾನೆ.

"ಕನ್ನಡದ" ಹೆಸರು ಎಂತಾಯಿತೆಂದು ಹಲವು ಎಣಿಕೆಗಳಿವೆ. "ಕರುನಾಡು – ಕರ್ನಡವಾಗಿ– ಕನ್ನಡ" ವಾಯಿತೆಂಬುದೆಂದು ಎಲ್ಲರೂ ಒಪ್ಪುತ್ತಾರೆ.

ನಾಡಿನ ಹೆಸರೆ "ಕನ್ನಡ"ವೆಂದರೆ, "ಕನ್ನಡ ನಾಡು" ಎನ್ನುವುದು ತಪ್ಪಾಗುತ್ತದೆ. "ಕರು" ಎಂದರೆ ಎತ್ತರ.

"ಕರು" ಎಂಬುದು "ಕರಿಪ್ಪು"–"ಕರಿ" ಎಂದರೆ ಕಪ್ಪಾದ ನೆಲ. "ಕರು" ಎಂದರೆ "ಕರ್ಬೊನ" – ಕರಿಹೊನ್ನು" ಎಂಡರೆ "ಕಬ್ಬಿಣ"ದ ನಾಡು ಎಂದೂ ತಿಳಿದಿದೆ. ಏಕೆಂದರೆ ಈ ನಾಡಿನಲ್ಲಿ ಕಬ್ಬಿಣ ಹೇರಳವಾಗಿ ದೊರೆಯುತ್ತದೆ. ಉಪಗ್ರಹದಿಂದ ನೋಡಿದಾಗ, ಕಬ್ಬಿಣದ ಸೆಳೆಗಳೇ ಈ ನಾಡನ್ನು ಗುರುತಿಸುತ್ತವೆ.

"ಕರುನಾಡು", "ಕರುನಾಟ್ಟು", ಸಂಸ್ಕೃತ ಪಂಡಿತರ ಕೈಯಲ್ಲಿ ಸಿಲುಕಿ "ಕರ್ನಾಟಕ" ವಾಗಿದ್ದೂ ತಿಳಿದಿದೆ.

ಹನ್ನೊಂದನೆಯ ಶತಮಾನದಲ್ಲಿ, ಇಂಡೋನೇಷಿಯಾದ ಜಾವಾದಲ್ಲಿದ್ದ, ಶ್ರೀ ವಿಜಯ ಐರ್ಲಿಂಗ, ರಾಜನ ಶಾಸನದ ಹಲವು ವ್ಯಾಪಾರಿಗಳು ಬೇರೆಡೆಯಿಂದ ಬಂದವರಲ್ಲಿ ಕರ್ನಾಟದವರೂ ಇದ್ದರೆಂಬುದು, ತಿಳಿ ಮೂಡಿದೆ.

ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ದೇವಗಿರಿಯ ಯಾದವರು ಐದು ಶತಮಾನಗಳ ಕಾಲ, ನರ್ಮಾದಾ ನದಿಯಿಂದ ಕಾವೇರಿಯ ವರೆಗಿನ ನೆಲವನ್ನು ಆಳಿದರು. ಚಾಲುಕ್ಯರ ಇಮ್ಮಡಿ ಪುಲಿಕೇಶಿ, ಕನ್ಯಾಕುಬ್ಜದ ಶ್ರೀ ಹರ್ಷನನ್ನು ಸೋಲಿಸಿದ್ದು ಹಲವಾರು ದಾಖಲೆಗಳಿಂದ ತಿಳಿಯಬರುತ್ತದೆ. ಶ್ರೀ ಹರ್ಷನ ಆಳ್ವಿಕೆಯಲ್ಲಿ ಚೀನಾದಿಂದ ಬಂದ ಪ್ರವಾಸಿ, ಹುಯೆನ್‌ತ್ಸಾಂಗ್‌ನ ಬರಹಗಳಿಂದ ಕೂಡ, ಇದು ತಿಳಿಯುತ್ತದೆ. ಕರ್ನಾಟರನ್ನು ಯುದ್ಧದಲ್ಲಿ ಸೋಲಿಸಬಲ್ಲವರು, ಯಾರೂ ಇಲ್ಲವೆಂದು ಆಗಿನ ಕಥೆಯಾಗಿತ್ತು. ಬಂಗಾಳದ ಸೇವುಣರು, ತಮ್ಮನ್ನು ಕರ್ನಾಟ ಕ್ಷತ್ರೀಯರೆಂದು ಕರೆದುಕೊಂಡರು. ಬಿಹಾರದ ಮಿಥಿಲೆಯನ್ನು ಆಳಿದ ಮನೆತನಗಳಲ್ಲಿ ಒಂದು, ತನ್ನನ್ನು ತಾನು ಕರ್ನಾಟ ವಂಶ" ವೆಂದು ಕರೆದುಕೊಂಡಿದೆ.

5ನೆಯ ಶತಮಾನದ ಹಲ್ಮಿಡಿ ಶಾಸನದಲ್ಲಿ ಮೊಟ್ಟ ಮೊದಲ ಕನ್ನಡ ಬರಹ ಕಂಡುಬರುತ್ತದೆ. 8ನೆಯ ಶತಮಾನದ ಕಪ್ಪೆ ಆರ್ಯಭಟ್ಟನ ಒಂದು ಪದ್ಯ ತ್ರಿಪದಿಯಲ್ಲಿ ಬಾದಾಮಿಯಲ್ಲಿ ಸಿಕ್ಕಿದೆ. 8ನೆಯ ಶತಮಾನದ ನೃಪತುಂಗನ "ಕವಿರಾಜಮಾರ್ಗ" ದಲ್ಲಿ, ಇನ್ನೂ ಹಳೆಯ ಕವಿಗಳು ಮತ್ತು ಅವರ ಬರಹಗಳನ್ನು ಕುರಿತು ದಾಖಲೆ ಇದೆ. ಆದ್ದರಿಂದ ಕನ್ನಡದಲ್ಲಿ ಸಾಹಿತ್ಯ ಕ್ರಿಸ್ತ ಪೂರ್ವದಲ್ಲಿಯೇ ಇತ್ತೆಂದು ಕಾಣಬರುತ್ತದೆ. ಸಾಹಿತ್ಯವೇ ಇಷ್ಟು ಹಳೆಯದಾದ ಮೇಲೆ ಆಡುನುಡಿಯಾಗಿ ಕನ್ನಡ ಇನ್ನೂ ಹಲವಾರು ಶತಮಾನದಲ್ಲಿಯೇ ಇತ್ತೆಂಬುದು ನಿಚ್ಚಳ. 20ಕ್ಕೂ ಮಿಕ್ಕ ದ್ರಾವಿಡ ನುಡಿಗಳಲ್ಲಿ, ಕನ್ನಡದಅತಿ ಹಳೆಯ ನೂಡಿ ಎಂಬುದು ದಿಟ. "ಇಸಿಲ" ಎನ್ನುವ ಮಾತು, ಕನ್ನಡವೆಂದೂ ಅದು ಅಶೋಕನ ಶಾಸನದಲ್ಲಿ ಮೂಡಿದೆ ಎಂದೂ ಪ್ರಾ. ನರಸಿಂಹಾಚಾರ್ಯರೂ ಅನ್ನುತ್ತಾರೆ – "ಇಸಿಲ" ಎಂದರೆ "ಎಸೆಯೆಲಾ" – "ಬಾಣವನ್ನು ಎಸೆ" ಎಂದೇ ತಿಳಿವು ಎನ್ನುತ್ತಾರೆ.

ಇದಲ್ಲದೆ ಟಾಲೆಮಿ ಎಂಬ ಗ್ರೀಕ್ ವಿದ್ವಾಂಸ, ಇವನ್ನು ಅಲೆಕ್ಸಾಂಡರನ ಗುರುವೂ ಕೂಡ, ಕನ್ನಡ ನಾಡಿನ ಹಲವಾರು ಊರುಗಳನ್ನು ಗುರುತಿಸಿದ್ದಾನೆ. "ಕಲ್ಲೇರಿ", (ಕಲಕೇರಿ), "ಮೊದಲಗೌಲ" (ಮುದಗಲ್), "ಬಾದಾಮಿಯೋಸ್" ಬಾದಾಮಿ, ಮತ್ತಿತರ ಊರುಗಳನ್ನು ಹೆಸರಿಸಿದ್ದಾನೆ. ಕಲ್ಲಿನ ಮೇಲೆ, ತಾಮ್ರದ ಮೇಲೆ, ಕನ್ನಡ ಮತ್ತು ಸಂಸ್ಕೃತದಲ್ಲಿ ಮೂಡಿದ ಹಲವಾರು ಬರಹಗಳು ದೊರಕಿವೆ. ಒಟ್ಟಾರೆ 30,000 ಕ್ಕೂ ಮಿಕ್ಕು ಶಾಸನಗಳು ಸಿಕ್ಕಿವೆ.

ಇವೆಲ್ಲವೂ ಎಫಿಗ್ರಾಫಿಕಾ ಇಂಡಿಕಾ, ಎಪಿಗ್ರಾಫಿಕಾ ಕರ್ನಾಟಕ ಮೈಸೂರ, ಆರ್ಕೆಯಾಲಾಜಿಕಲ್ ವರದಿಗಳಲ್ಲಿ ಸಿಗುತ್ತವೆ.

ಶಾಸನಗಳು: ಎಲ್ಲದಕ್ಕಿಂತ ಹಳೆಯವು. ಅಶೋಕನ ಕಾಲದ ಶಿಲಾ ಶಾಸನಗಳು, ಒಟ್ಟು 13. ಇವು ಚಿತ್ರದುರ್ಗ ಬಳ್ಳಾರಿ, ರಾಯಚೂರು, ಮತ್ತು ಗುಲ್ಬರ್ಗಾದ ಸನ್ನತಿಯಲ್ಲಿ ಇವೆ. ಇವೆಲ್ಲವೂ ಪ್ರಾಕೃತ ನುಡಿಯಲ್ಲಿದ್ದು, ಬ್ರಾಹ್ಮೀ ಲಿಪಿಯಲ್ಲಿದೆ.

ಶಾತವಾಹನರ ಕಾಲದ ಹಲವಾರು ಶಾಸನಗಳು ಪ್ರಾಕೃತದಲಿಯೇ ಇದ್ದು, ಬೆಳಗಾವಿ, ಗುಲಬರ್ಗಾ, ಉತ್ತರ ಕನ್ನಡ, ಮತ್ತು ಇಂದಿನ ಮಹಾರಾಷ್ಟ್ರದಲ್ಲಿವೆ. ಇವುಗಳಲ್ಲಿ ಶಾಲಿವಾಹನ ಶಕೆಯೂ ಮೂಡಿಬಂದಿದೆ. ಗಂಗರ ಕಾಲದ ಬರಹಗಳು ತಾಮ್ರದ ಹಾಳೆಗಳ ಮೇಲಿವೆ.

ಬಾದಾಮಿಯಲ್ಲಿ ಗವಿಗಳಲ್ಲಿ ಹಾಗೂ ಹಲ್ಮಿಡಿಯಲ್ಲಿ ದೊರಕಿದ ಕ್ರಿ.ಶ. 5ನೆಯ ಶತಮಾನದ ಬರಹಗಳು ಕನ್ನಡದಲ್ಲಿಯೇ ಇವೆ. ಇಮ್ಮಡಿ ವಿಕ್ರಮಾದಿತ್ಯ, ಚೋಳರ ಮೇಲೆ ಗೆಲವು ಪಡೆದ ಮೇರೆಗೆ ಮೂಡಿದ ಶಾಸನಗಳು ಸಿಕ್ಕಿವೆ. ಬಾದಾಮಿಯ ಶಿಖರದ, ಮಹಾಕೂಟ ಕಂಬದಲ್ಲಿ ಮೂಡಿದ ಮಂಗಳೇಶನ, ಹಾಗು ಇಮ್ಮಡಿ ಪುಲಿಕೇಶಿಯ ಐಹೊಳೆಯ ಶಾಸನಗಳು, ಕನ್ನಡದಲ್ಲಿಯೇ ಇವೆ.

ಚಾಲುಕ್ಯರ ಮುನ್ನ, ಅಶೋಕ ಸಾಮ್ರಾಜ್ಯದ ನಡೆವಳಿಕೆಯಿಂದ ಎಲ್ಲಾ ಪಂಡಿತರೂ ಕೂಡ, ಪ್ರಾಕೃತ್ಯವನ್ನೇ ಹಿಂಬಾಲಿಸಿದ್ದರು. ಹಿಂದಿನ ಶಾಸನಗಳು ಪ್ರಾಕೃತದಲಿದ್ದವು. ಎರಡನೆಯ ಶತಮಾನದಿಂದ ಚಾಲುಕ್ಯರು ತಮ್ಮ ರಾಜಭಾಷೆ ಕನ್ನಡವೆಂದುದರಿಂದ, ಎಲ್ಲಾ ಬರಹಗಳೂ ಕೂಡ ಕನ್ನಡದಲ್ಲಿಯೇ ಮೂಡಿಬಂದವು. ಚಾಲುಕ್ಯರ ನಂತರದ ರಾಷ್ಟ್ರಕೂಟರು, ಕದಂಬರು, ಗಂಗರು, ಹೊಯ್ಸಳರು ಎಲ್ಲರೂ ಕನ್ನಡದಲ್ಲಿಯೇ ಬರೆದರು.

ಸೇವುಣರು, ಕಲಚೂರ್ಯರು, ಹೊಯ್ಸಳರ ಕೆತ್ತನೆ ಬರಹಗಳು ಹೇರಳವಾಗಿ ಸಿಕ್ಕಿವೆ. ಸಿಂಘಣ, ಬಿಲ್ಲಮ 5 ಜೈತುಗಿ, ಇಮ್ಮಡಿ ಸಿಂಘಣ ಕಾಲದ ಕಲ್‌ಬರಹಗಳು ಹೆಚ್ಚಾಗಿವೆ.

ಹೊಯ್ಸಳರ ನಂತರ, ವಿಜಯನಗರದ ಶಾಸನಗಳು ಸುಮಾರು 7000 ಸಿಕ್ಕಿವೆ. ಇದರಲ್ಲಿ ಸುಮಾರು 3000 ಕನ್ನಡದಲ್ಲಿದೆ. ಸಂಗಮ ವಂಶದವರು ಶೃಂಗೇರಿ ಮಠಕ್ಕೆ 1346 ರಲ್ಲಿ ನೀಡಿದ ಕೊಡುಗೆ, ಇಮ್ಮಡಿ ಹರಿಹರ ಬೇಲೂರಿನಲ್ಲಿ, ಮುದ್ದ ನಾಯಕನನ್ನು ದಂಡನಾಯಕ ಹಾಗೂ ಪ್ರಥ್ವಿಶೆಟ್ಟಿಯಾಗಿ ನೇಮಕ ಮಾಡಿ, ಅವನಿಗೆ 26 ಜಾತ್ರೆಗಳಲ್ಲಿ, ತೆರಿಗೆಯನ್ನು ಪಡೆಯುವ ಹಕ್ಕು ನೀಡಿದ ಶಾಸನ, ಕೃಷ್ಣದೇವರಾಯ 1510 ರಲ್ಲಿ ಅದಿಲ್‌ಶಹಾನ ಮೇಲೆ ಪಡೆದ ಗೆಲವಿನ ಶಾಸನ, ಇವುಗಳು ಹೆಗ್ಗುರುತುಗಳಾಗಿವೆ.

ದೇವಗಿರಿಯಾದವರ, ಆಸ್ಥಾನದಲ್ಲಿ 10ನೆಯ ಶತಮಾನದಲ್ಲಿ "ಭಾಗವತ ಪುರಾಣ' ವನ್ನು ಬರೆದ ಶ್ರೀ ವಿಜಯ ಕನ್ನಡದವನಾಗಿದ್ದು, ದೇವಗಿರಿಯಾದವರು ಕೂಡ, ತಾವು ಕನ್ನಡದವರೇ ಎಂದು ಹೇಳಿಕೊಂಡಿದ್ದಾರೆ.

ಎಲ್ಲರಿಗೂ ತಿಳಿಯದ ಮಾತೆಂದರೆ, ಗುಡಿಗಳು ಚಾಲುಕ್ಯರ ಮುನ್ನ ಎಲ್ಲಿಯೂ ಇರಲಿಲ್ಲ. ಚಾಣಕ್ಯನ ಅರ್ಥಶಾಸ್ತ್ರದಲ್ಲಿ, ಯಾಗಶಾಲೆ, ಅನ್ನಶಾಲೆಗಳು ಕಾಣುತ್ತವೆ ಹೊರತು, ದೇವಾಲಯಗಳು ಕಾಣಬರುವುದೇ ಇಲ್ಲ. ಮೊಟ್ಟ ಮೊದಲಿಗೆ ಪಟ್ಟದ ಕಲ್ಲು, ಐಹೊಳೆಗಳಲ್ಲಿ ಚಾಲುಕ್ಯರು ಕಟ್ಟಿದ ಮೊದಲ ಗುಡಿಗಳು ಕಾಣಬರುತ್ತವೆ.

ಕನ್ನಡನಾಡಿನಲ್ಲಿ, ಹಿಂದೆ ಇದ್ದ ಎಲ್ಲಾ ಸಾಮ್ರಾಜ್ಯಗಳೂ ಜೈನರದ್ದೇ ಎನ್ನುವ ಮಾತು ಪದೇ ಪದೇ ಕೇಳಿಬರುತ್ತದೆ. ಆದರೆ ಇದರ ಎದಿರಾಗಿ, ಚಾಲುಕ್ಯರ ಮಹಾಸಾಮ್ರಾಜ್ಯ, ಸನಾತನ ಮತವನ್ನೇ ಸಾರುತ್ತಿತ್ತು. ಗುಡಿ, ದ್ರಾವಿಡ ಪರಂಪರೆಯ ಭಕ್ತಿ ಸಂಪ್ರದಾಯದ ಹಾದಿಯಾಗಿ ಕನ್ನಡನಾಡಿನಲ್ಲಿ ಮೊದಲು ಮೂಡಿ ಬಂದಿತು.

ಪಟ್ಟದಕಲ್ಲು, ಐಹೊಳೆಯ ಗುಡಿಗಳು 5ನೆಯ ಶತಮಾನದಲ್ಲಿ ಕೆತ್ತಿದವಾಗಿದ್ದು, ಮಹಾಬಲಿಪುರದ ಕಲ್ಲಿನ ಗುಡಿಗಳು, 8ನೆಯ ಶತಮಾನದಲ್ಲಿ ಕೆತ್ತಿದಂತಹವು. ಹೀಗಾಗಿ ಕಲ್ಲಿನ ಕೆತ್ತನೆ, ಕನ್ನಡನಾಡಿನಲ್ಲಿ ಅತಿ ಹಿಂದಿನ ಪರಂಪರೆಯನ್ನೂ ಹೊಂದಿದೆ. ಇದಕ್ಕೆ ಕಾರಣವಾಗಿದ್ದು, ಈ ಕರುನಾಡಿನಲ್ಲಿ, ಕಡುಗಲ್ಲುಗಳು, ಬಳಪದ ಕಲ್ಲುಗಳೂ ಹೇರಳವಾಗಿ ದೊರೆಯುತ್ತಿದ್ದುದೇ ಆಗಿದೆ. ಇಂದೂ ಕೂಡ, ಗ್ರಾನೈಟ್ ಕರುನಾಡಿನ ಗುರುತಾಗಿದೆ.

ವೀರಗಲ್ಲು, ಮಾಸ್ತಿಕಲ್ಲುಗಳು ಬಹಳ ಹಿಂದಿನ ದಿನಗಳಿಂದಲೂ, ಕರುನಾಡಿನಲ್ಲಿ ವಾಡಿಕೆಯಲ್ಲಿದೆ. ತಮಗಾಗಿ ಹೋರಾಡಿದ ಕೆಚ್ಚೆದೆಯ ಕಟ್ಟಾಳುಗಳನ್ನು ಮಂದಿ ತಮ್ಮ ಪೂಜೆಗೆ ತಕ್ಕವರೆಂದು, "ವೀರಗಲ್ಲು"ಗಳನ್ನು ನೆಟ್ಟರು. ಅವರನ್ನು ಕುರಿತು ಹಾಡಿದರು. ಕರುನಾಡಿನವರಿಗೆ, ಎಂದೂ ಹಾಡು ಕುಣಿತಗಳು ಅಚ್ಚುಮೆಚ್ಚು. ಅದೂ ತಮ್ಮ ತಮ್ಮ ಹಳ್ಳಿಯ ತಾಯಂದಿರ ಗುಡಿಯ ಮುಂದೆ ಕುಣಿಯುತ್ತಾ ಮೆರೆಯುವುದು, ಬಹಳ ಹಿಂದಿನ ವಾಡಿಕೆ. ಹಿಗಾಗಿ, "ಜಾನಪ್ದ" ನಮ್ಮ ನರನಾಡಿಗಳಲ್ಲಿ ಹಾಸು ಹೊಕ್ಕಿದೆ.

ಕನ್ನಡಿಗರಿಗೆ, ಮೊದಲಿನಿಂದಲೂ ತಮ್ಮ ನುಡಿಯ ಬಗ್ಗೆ ಬಹಳ ಮೆಚ್ಚು. ಹೆಸರಿಡುವಾಗ ತಮ್ಮ ನುಡಿಯಲ್ಲಿಯೇ ಮಗುವನ್ನು ಒಲವಿನಿಂದ ಕರೆಯಬೇಕು.

"ಮುದ್ದಪ್ಪ, ಪುಟ್ಟಪ್ಪ, ಕೆಂಚ, ಕರಿಯ, ಬೂದ, ಮಲ್ಲಿಗೆ, ಸಂಪಿಗೆ, ಚೆಲುವಿ, ನಿಂಗಿ" ಎಂಬ ಹೆಸರುಗಳು ಮಕ್ಕಳಿಗೆ ಇಡುವ ವಾಡಿಕೆ. ಈಗ ಸಂಸ್ಕೃತ ಪಂಡಿತರು, ಇಲ್ಲವೇ ಸಂಸ್ಕೃತವೇ ತಾಯಿನುಡಿ ಎಂದು ತಿಳಿದ ದಡ್ಡರಿಂದ, ಈ ವಾಡಿಕೆ ಮಾರ್ಪಾಡಾಗುತ್ತಿದೆ. ಪುಟ್ಟಪ್ಪ, ಹೋಗಿ ಈಗ ಪೂರ್ಣಚಂದ್ರ ತೇಜಸ್ವಿಯಾಗಿದ್ದುದು ಇತ್ತೀಚೆಗೆ ತಾನೇ.

- ದಾಸರು, ಶರಣರು, ಕನ್ನಡದಲ್ಲಿಯೇ ಮಂದಿಗೆ ಬಾಳಿನ ತಿಳಿವನ್ನು ಸಾರಿದುದು ಇಲ್ಲಿಯೇ
- ಜಾತಿ ಮತಗಳು ಇಲ್ಲವೆಂದು ಸಾರಿದುದು ಇಲ್ಲಿಯೇ
- ಭಕ್ತಿ ಪಂಥ ಹುಟ್ಟಿದುದು ಇಲ್ಲಿಯೇ
- ದೇಗುಲಗಳು ಹುಟ್ಟಿದುದು ಇಲ್ಲಿಯೇ
- ಕವಯಿತ್ರಿಗಳು ಮೆರೆದುದ್ದು ಇಲ್ಲಿಯೇ
- ಕನ್ನಡ ನೆಲವನ್ನು ಉಳಿಸಿಕೊಳ್ಳಲು ಹೊಡೆದಾಡಿದ ರಾಣಿಯರು ಇಲ್ಲಿಯೇ
- ತಾಳ ಮದ್ದಳೆಗಳ ದುಡಿಗೆ, ಹಾಡು ಕುಣಿತ–ಆಟಗಳು ಹುಟ್ಟಿದ್ದು ಇಲ್ಲಿಯೇ

ಆದರೆ ಇಂದು ತಂದೆ ತಾಯಿಯರು ಮಕ್ಕಳಿಗೆ ಕನ್ನಡ ಕಲಿಸುವುದು ಬಿಟ್ಟು ಇನ್ನಿತರ ನುಡಿಗಳಲ್ಲಿ ತರಬೇತಿ ನೀಡುತ್ತಿರುವುದನ್ನು ನೋಡಿದಾಗ. ಅಂದಿನಿಂದ ಬಂದ ಕರುನಾಡು, ಇಂದಿಗೆ ಮುಗಿಯುತ್ತಿದೆಯೇ ಎಂದು ಕಣ್ಣಲ್ಲಿ ನೀರು ತುಂಬುತ್ತದೆ.

**(ಬೇರೆ ಬೇರೆ ಎಡೆಗಳಿಂದ ಆಯ್ದ ಬರಹ)**

# ನರಹಳ್ಳಿ ಬಾಲಸುಬ್ರಹ್ಮಣ್ಯ ಕನ್ನಡ ವಿಮರ್ಶಾ ವಿವೇಕಕ್ಕೆ ಸಾಕ್ಷಿ

✍ **ಡಾ. ಜಿ. ಎಂ. ಹೆಗಡೆ**

ಕನ್ನಡ ವಿಮರ್ಶಾ ಲೋಕದಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ಮೂರು ದಶಕಗಳಿಂದ ಮಿವರ್ಶೆಯ ವ್ಯವಸಾಯವನ್ನು ನಿರಂತರವಾಗಿ ಮಾಡುತ್ತ ಬಂದಿದ್ದಾರೆ. ವಿದ್ಯಾರ್ಥಿ ಜೀವನದಿಂದಲೂ ಪ್ರತಿಭಾವಂತರಾದ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ರಾಷ್ಟ್ರಕವಿ ಜಿ. ಎಸ್. ಶಿವರುದ್ರಪ್ಪನವರ ಪರಂಪರೆಯಲ್ಲಿ ಬೆಳೆದವರು, ವ್ಯಾಪಕವಾದ ಓದು, ಚಿಕಿತ್ಸಕ ಬುದ್ಧಿ, ಸದಭಿರುಚಿಗಳಿಂದ ಕೂಡಿರುವ ನರಹಳ್ಳಿ ಕನ್ನಡ ವಿಮರ್ಶಾ ವಿವೇಕಕ್ಕೆ ಸಾಕ್ಷಿಯಾಗಿದ್ದಾರೆ. ಸ್ವೋಪಜ್ಞತೆ, ವ್ಯಾಖ್ಯಾನ ಪರಿಣತಿ, ಚಿಂತನಶೀಲತೆಯಿಂದ ಕೂಡಿರುವ ಅವರ ವಿಮರ್ಶೆ ಬಹುಮುಕೀ ನೆಲೆಗಳನ್ನು ಪಡೆದುಕೊಂಡಿದೆ. ಸಮಕಾಲೀನ ಗೆಳೆಯರು ಸೈದ್ಧಾಂತಿಕ ಬದ್ಧತೆಗೆ ತಮ್ಮನ್ನು ಅರ್ಪಿಸಿಕೊಂಡರೆ ನರಹಳ್ಳಿಯವರು ಯಾವುದೇ ಪಂಥ, ಪ್ರಣಾಲಿ, ಬದ್ಧತೆಗೆ ಒಳಗಾಗದೆ ಸಾಹಿತ್ಯ ವಿಮರ್ಶೆಯ ಅಭಿಜಾತ ಪರಂಪರೆಯನ್ನು ಮುನ್ನಡೆಸಿರುವದು ಮುಖ್ಯವಾದ ಸಂಗತಿಯಾಗಿದೆ.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ವಿಮರ್ಶೆ ಯಾವುದೇ ವಾಗ್ವಾದಗಳನ್ನು ಹುಟ್ಟು ಹಾಕಲಿಲ್ಲ. ವಾದ ವಿವಾದಗಳಿಗೆ ಗುರಿಯಾಗಲಿಲ್ಲ. ಸಾಹಿತ್ಯ ಪರಂಪರೆಯ ಶ್ರೇಷ್ಠತೆಯನ್ನು ಅದು ಎತ್ತಿ ಹಿಡಿದಿದೆ. ಕವಿರಾಜಮಾರ್ಗದಿಂದ ಹಿಡಿದು ಸಿದ್ಧಲಿಂಗಯ್ಯನವರ 'ಊರುಕೇರಿ'ಯವರೆಗೆ ನರಹಳ್ಳಿಯವರು ಕೃತಿಯ ಅಂತರಂಗವನ್ನು ತೆರೆದಿಟ್ಟಿದ್ದಾರೆ. ವಿಮರ್ಶೆಯ ಮೂಲಕ ಕೃತಿಯ ಅರ್ಥಲೋಕ ವಿಸ್ತಾರಗೊಳ್ಳಬೇಕು ಎಂಬ ವಿವೇಕ ನರಹಳ್ಳಿಯವರದಾಗಿದೆ. ನರಹಳ್ಳಿಯವರು ವಿಮರ್ಶೆಯಲ್ಲಿ ವಸ್ತುನಿಷ್ಠತೆಯನ್ನು ಕಾಪಾಡಿಕೊಂಡಿದ್ದಾರೆ. ಕನ್ನಡದಲ್ಲಿ ಈಗ ಬರುತ್ತಿರುವ ಪಿಎಚ್‌ಡಿ ಮಹಾಪ್ರಬಂಧಗಳ ಬಗ್ಗೆ ಅವರು ಅತ್ಯಂತ ನಿಷ್ಠುರವಾಗಿ ವಿಚಾರವನ್ನು ವ್ಯಕ್ತಪಡಿಸಿದ್ದಾರೆ. ಪಿಎಚ್‌ಡಿ ಮಹಾಪ್ರಬಂಧಗಳ ಗುಣಮಟ್ಟ ಕಳಪೆಯಾಗುತ್ತಿರುವದಕ್ಕೆ ತೀವ್ರವಾದ ಅಸಮಾಧಾನವನ್ನು ಅವರು ಸೂಚಿಸಿದ್ದಾರೆ. ವಿಶ್ವವಿದ್ಯಾಲಯಗಳ ಶೈಕ್ಷಣಿಕ ಗುಣಮಟ್ಟದ ಕುಸಿತದ ಬಗೆಗೆ ಅವರ ಕಳವಳ ಸಾರ್ವಜನಿಕ ಅಭಿಪ್ರಾಯವಾಗಿ ಹೊರಹೊಮ್ಮಿರುವುದನ್ನು ಇಲ್ಲಿ ನೆನೆಯಬೇಕು. ಮಿವರ್ಶೆ ಮಾಡುವ ಕೆಲಸ ಸಾಮಾಜಿಕ ಎಚ್ಚರವನ್ನು ಉಂಟು ಮಾಡುವದಾಗಿದೆ. ಕನ್ನಡ ಸಾಹಿತ್ಯದ ಶ್ರೇಷ್ಠ ಕೃತಿಗಳ ಒಳನೋಟಗಳನ್ನು ತಮ್ಮ ಲೇಖನಗಳ ಮೂಲಕ ಒದಗಿಸಿ ಕೊಟ್ಟವರು ನರಹಳ್ಳಿ ಪ್ರಜಾವಾಣಿ, ಮಯೂರ, ಮಲ್ಲಿಗೆ ಮೊದಲಾದ ಪತ್ರಿಕೆಗಳಲ್ಲಿ ನಿರಂತರವಾಗಿ ಅವರು ಬರೆಯುತ್ತಿದ್ದ ಬಂದ ಅಂಕಣ ಲೇಖನಗಳು ಸಮಕಾಲೀನ ಕನ್ನಡ ಸಾಹಿತ್ಯವನ್ನು ಸಹೃದಯಲೋಕ ಅರಿಯುವಂತೆ ಮಾಡಿದ್ದಾರೆ.

ನರಹಳ್ಳಿ ಅವರ ಮಿವರ್ಶೆಯ ಮುಖ್ಯ ಗುಣವೆಂದರೆ ಅದರಲ್ಲಿ ಕಾಣುವ ಸಮಗ್ರ ದೃಷ್ಟಿಯ ಪರಿಶೀಲನೆ. ನರಹಳ್ಳಿಯವರ ಕೆ. ಎಸ್. ನರಸಿಂಹಸ್ವಾಮಿಯವರ ಸಮಗ್ರ ಕಾವ್ಯದ ಅಧ್ಯಯನ 'ಇಹದ ಪರಿಮಳದ ಹಾದಿ' ಕನ್ನಡದ ಸಂಶೋಧನ ಮಹಾಪ್ರಬಂಧಗಳಿಗೆ ಒಂದು ಮಾದರಿಯಾಗಿದೆ. ಕುವೆಂಪು, ಜಿ.ಎಸ್.ಶಿವರುದ್ರಪ್ಪ ಅನಕೃ ಕುರಿತ ವಿಮರ್ಶೆಯ ಗ್ರಂಥಗಳಲ್ಲಿಯೂ ನರಹಳ್ಳಿಯವರ ಸಮಗ್ರ ದೃಷ್ಟಿಯ ಅವಲೋಕನ ಸಾಮರ್ಥ್ಯವನ್ನು ನಾವು ಕಾಣುತ್ತೇವೆ. ತೌಲನಿಕ ಚಿಂತನ ಕ್ರಮವೂ ಅವರ ಮಿವರ್ಶೆಯಲ್ಲಿದೆ. 'ಕುವೆಂಪು ಕಾವ್ಯ ವಿಮರ್ಶೆ ಮಾಡುತ್ತ ಅವರ ಪ್ರೇಮೋಪನಿಷತ್ತು ಕುರಿತು ಹೇಳುತ್ತ ಹೆಣ್ಣು ಪುತಿನ ಅವರಿಗೆ ಜಿಜ್ಞಾಸೆ, ಬೇಂದ್ರೆಯವರಿಗೆ ಸಖಿ, ಮನದನ್ನೆ, ಎ.ಎಸ್.ಎನ್ ಅವರಿಗೆ ಇಹದ ಪರಿಮಳದ ಹಾದಿ, ಕುವೆಂಪು ಅವರಿಗೆ ದೇವತೆ (ಪುಟ 119) ಎಂದು ಹೇಳಿದ್ದಾರೆ. "ಕುವೆಂಪು ವಿಮರ್ಶಕರನ್ನು ಗೌರವದಿಂದ ಕಾಣಲು ಸಾಧ್ಯವಾಗಿದ್ದರೆ ಅಥವಾ ತಮ್ಮ ಕಾವ್ಯದ ವಿಮರ್ಶೆಯನ್ನು ಸ್ವೀಕರಿಸಲು ಸಾಧ್ಯವಾಗಿದ್ದರೆ ಗುಣಾತ್ಮಕ ಬದಲಾವಣೆ ಸಾಧ್ಯವಿತ್ತು... ನಾನೇರುವೆತ್ತರಕೆ ನೀನೇರಬಲ್ಲೆಯಾ? ಇದು ಕುವೆಂಪು ಸೂಕ್ಷ್ಮ ಓದಿನ ವಿಮರ್ಶಕರನ್ನು ತಿರಸ್ಕರಿಸಿದಂತೆ ತೋರುತ್ತದೆ" (ಪುಟ 203) ಎಂದೂ ಹೇಳಿದ್ದಾರೆ. ಕುವೆಂಪು ಕಾವ್ಯ ನಾಟಕಗಳನ್ನು ಅವು ಆಕೃತಿಗೊಂಡ ಚಾರಿತ್ರಿಕ ಸಂದರ್ಭದಲ್ಲಿ ಅವಲೋಕನ ನಡೆಸಿದ್ದು ಅತ್ಯಂತ ಮಹತ್ವದ ಸಂಗತಿಯಾಗಿದೆ.

ಪಾಶ್ಚಾತ್ಯ ವಿಮರ್ಶೆಯ ಮಾನದಂಡಗಳನ್ನು ನಮ್ಮ ಸಾಹಿತ್ಯ ಕೃತಿಗಳಿಗೆ ಅನ್ವಯಿಸಿ ವಿಮರ್ಶಿಸುವ ಧೋರಣೆಯನ್ನು ನರಹಳ್ಳಿಯವರು ಅಲ್ಲಗಳೆದಿದ್ದಾರೆ. ಭಾರತೀಯ ಮೂಲದ ದೇಶೀವಾದವನ್ನು ಪುರಸ್ಕರಿಸುತ್ತ ವಿಮರ್ಶೆಗೆ ಬೇಕಾದ ಪ್ರಮಾಣ, ನಿಕಷಗಳನ್ನು ಒದಗಿಸಿದ್ದಾರೆ. ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸುವವರಿಗಾಗಿ ಮೌಲಿಕ ಸಾಹಿತ್ಯ ವಿಮರ್ಶೆಯನ್ನು ನರಹಳ್ಳಿಯವರು ಒದಗಿಸಿದ್ದಾರೆ. ಪತ್ರಿಕೆಗಳಲ್ಲಿ ಬರುತ್ತಿರುವ ರಿವ್ಯೂಗಳನ್ನು ಹೊರತುಪಡಿಸಿ ವಿಮರ್ಶೆಗಾಗಿಯೇ ಇರುವ ಸಾಕ್ಷಿ, ರುಜುವಾತು, ಮನ್ವಂತರದಂತಹ ಪತ್ರಿಕೆಗಳು ಮಾಯವಾಗುತ್ತಿರುವಾಗ ನರಹಳ್ಳಿಯವರು ಪ್ರಜಾವಾಣಿಯಲ್ಲಿ ಮತ್ತೆ ಮೌಲಿಕ ವಿಮರ್ಶಾ ಅಂಕಣ ಬರೆಯುತ್ತಿದ್ದಾರೆ. ನರಹಳ್ಳಿಯವರ ಮುಖ್ಯ ಕಾಳಜಿ ನೆಲ ಸಂಸ್ಕೃತಿಯತ್ತ, ಯಾವುದೇ ಪೂರ್ವಾಗ್ರಹಗಳಿಗೆ ಒಳಗಾಗದೆ ಓದುಗರಲ್ಲಿ ಸಾಹಿತ್ಯದ ರುಚಿ ಅಭಿರುಚಿಗಳನ್ನು ಬೆಳೆಸುವ ಗುರುತರ ಹೊಣೆಗಾರಿಕೆಯನ್ನು ನರಹಳ್ಳಿಯವರು ತುಂಬ ಯಶಸ್ವಿಯಾಗಿ ನಿಭಾಯಿಸಿದ್ದಾರೆ. ಅನುಸಂಧಾನದ ಹೊಸ ಮಾರ್ಗವನ್ನು ಅವರು ತೆರೆದಿದ್ದಾರೆ.

ಕನ್ನಡ ನವ್ಯ ವಿಮರ್ಶೆಯ ಉತ್ಕರ್ಷದ ಸಂದರ್ಭದಲ್ಲಿ ನರಹಳ್ಳಿಯವರು ವಿಮರ್ಶೆಯ ರಂಗ ಪ್ರವೇಶ ಮಾಡಿದ್ದರೂ ಅವರು ತಮ್ಮದೇ ಆದ ದಾರಿಯಲ್ಲಿ ಮುನ್ನೆಡೆದಿದ್ದಾರೆ. ವಸ್ತುನಿಷ್ಠತೆ, ಪ್ರಾಮಾಣಿಕತೆ, ಸ್ವೋಪಜ್ಞತೆಯನ್ನು ತಮ್ಮದಾಗಿಸಿಕೊಂಡ ನರಹಳ್ಳಿಯವರು ಸಮಕಾಲೀನ ಸಾಹಿತ್ಯದ ಬಗೆಗೆ

ಆರದ ಆಸಕ್ತಿಯಿಂದ ವಿಮರ್ಶಿಸಿದ್ದಾರೆ. ಜನಪ್ರಿಯ ಲೇಖಕರ ಕೃತಿಗಳ ಬಗೆಗೂ ಸಮಾನವಾದ ಆಸ್ಥೆಯನ್ನು ವ್ಯಕ್ತಪಡಿಸಿದ್ದಾರೆ. ಇದಕ್ಕೆ ನಿದರ್ಶನವಾಗಿ ಮಹಿಳಾ ಸಾಹಿತ್ಯ ಮತ್ತು ದಲಿತ ಬಂಡಾಯ ಲೇಖಕರ ಕೃತಿಗಳ ವಿಮರ್ಶೆಯನ್ನು ನೋಡಬೇಕು.

ನರಹಳ್ಳಿ ಬಾಲಸುಬ್ರಹ್ಮಣ್ಯ ಅವರದು ಮುಖ್ಯವಾಗಿ ಕೃತಿನಿಷ್ಠ, ಶ್ರದ್ಧೆ, ಕನ್ನಡದ ಕವಿಗಳ ಸಮಗ್ರ ಕಾವ್ಯ, ಕಥೆ, ಕಾದಂಬರಿಗಳ ಆಳಕ್ಕಿಳಿದು ಅವುಗಳ ಅರ್ಥಲೋಕವನ್ನು ತೆರೆದಿಟ್ಟಿದ್ದಾರೆ. ಇದಕ್ಕೆ ಚೆನ್ನವೀರ ಕಣವಿಯವರ ಸಮಗ್ರ ಕಾವ್ಯ 'ಹೊಂಬೆಳಕು' ಬಂದಾಗ ಸುಧಾದಲ್ಲಿ ಬಂದ ಅವರ ವಿಮರ್ಶೆಯನ್ನು ಉದಾಹರಿಸಬಹುದು. ಒಂದು ಸಾಹಿತ್ಯ ಕೃತಿ ಯಾವ ಯಾವ ಕಾರಣಗಳಿಂದ ಮೌಲಿಕವಾದದ್ದು ಎಂಬುದನ್ನು ಗುರುತಿಸಿ ಅದರ ಸತ್ವ ಆಶಯಗಳನ್ನು ವಿಶ್ಲೇಷಿಸುವ ನರಹಳ್ಳಿಯವರ ವಿಮರ್ಶೆ ನಮಗೆ ತುಂಬ ಪ್ರಿಯವಾಗುತ್ತದೆ. ವಿಮರ್ಶೆ ಸೃಜನಶೀಲ ಕ್ರಿಯೆ. ಅದು ಕಾರಯತ್ರೀ ಪ್ರತಿಭೆಯನ್ನು ಅಪೇಕ್ಷಿಸುತ್ತದೆ. ವಿಮರ್ಶೆಗೆ ಬೇಕಾದ ಶಿಸ್ತು ನರಹಳ್ಳಿಯವರಲ್ಲಿ ನಾವು ಕಾಣುತ್ತೇವೆ. ಅವರು ಈವರೆಗೆ ಹಲವಾರು ಕೃತಿಗಳ ಸಮೀಕ್ಷೆಯನ್ನು ನೂರಾರು ಸಭೆಗಳಲ್ಲಿ ಮಾಡಿದ್ದಾರೆ. ಸೈದ್ಧಾಂತಿಕ (ಉದಾ ನವ್ಯತೆ) ಮತ್ತು ಕೃತಿ ವಿಮರ್ಶೆಯು (ಸಾಹಿತ್ಯ ಸಂಸ್ಕೃತಿ) ಅವರ ವಿಮರ್ಶಾ ಸಾಹಿತ್ಯದಲ್ಲಿ ಸ್ಥಾನ ಪಡೆದಿವೆ.

ನರಹಳ್ಳಿ ಅವರು ಅದ್ಭುತ ವಾಗ್ಮಿಗಳು. ಅವರ ಭಾಷಣಗಳು ಕೇಳುಗರನ್ನು ಮಂತ್ರ ಮುಗ್ಧಗೊಳಿಸುತವೆ. ಅವರು ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ಪ್ರಶಂಸೆಯ ಮಾತುಗಳನ್ನು ಹೇಳಿ ಮುಗಿಸದೆ ಕೇಳುಗರಲ್ಲಿ ಕೃತಿಯ ರಸಸ್ಥಾನಗಳನ್ನು ಮಾರ್ಮಿಕವಾಗಿ ಹೇಳುತ್ತ ಸಾಹಿತ್ಯ ಕೃತಿಯ ಮಿತಿಗಳನ್ನು ಚರ್ಚಿಸಿ ಒಂದು ಚೇತೋಹಾರಿಯಾದ ಅನುಭವವನ್ನು ಒದಗಿಸುತ್ತಾರೆ. ಕನ್ನಡ ವಾಚಕಲೋಕ ನರಹಳ್ಳಿ ವಿಮರ್ಶೆಯನ್ನು ಅಸ್ವಾದಿಸಿದಂತೆ ಕೃತಿ ಸಮೀಕ್ಷೆಯ ಭಾಷಣವನ್ನು ಆರದ ಆಸಕ್ತಿಯಿಂದ ಕೇಳಿ ಆನಂದಿಸುತ್ತಲಿದೆ. ಬರಹ ಮತ್ತು ಭಾಷಣಗಳ ಮೂಲಕ ಕನ್ನಡ ಸಾಹಿತ್ಯ ವಲಯದಲ್ಲಿ ನರಹಳ್ಳಿ ಜನಪ್ರಿಯತೆ ಸಾಧಿಸಿದ್ದಾರೆ.

ನರಹಳ್ಳಿಯವರದು ಸೃಜನಶೀಲ ಪ್ರತಿಭೆ, ಲಲಿತ ಪ್ರಬಂಧಗಳ ರಚನೆಯಲ್ಲೂ ಕ್ರಿಯಾಶೀಲವಾಗಿದೆ. ಅವರ 'ಅಂತರಂಗದ ಮೃದಂಗ' ಸೊಗಸಾದ ಹರಟೆಗಳ ಸಂಗ್ರಹವಾಗಿದೆ. ಅದರಲ್ಲಿರುವ ಕೌಟುಂಬಿಕ ವಿವರಗಳು, ಸುಸಂಸ್ಕೃತ ಸೂಕ್ಷ್ಮ ಸಂವೇದನೆಯ ಮನೋಜ್ಞ ಬರವಣಿಗೆಯಾಗಿದೆ. ನರಹಳ್ಳಿಯವರು ವ್ಯಕ್ತಿಯಾಗಿ ತುಂಬ ಸ್ನೇಹಪರರು. ಸಜ್ಜನಿಕೆ, ಪ್ರೀತಿ ತುಂಬಿದ ಹೃದಯದ ಮಾಧುರ್ಯ ಅವರಲ್ಲಿದೆ. ಅಹಂಕಾರ, ಶ್ರೇಷ್ಠತೆಯ ವ್ಯಸನದಿಂದ ದೂರವಾದ ಅವರ ವ್ಯಕ್ತಿತ್ವ ಪಾರದರ್ಶಕವಾದದ್ದು. ನರಹಳ್ಳಿಯವರು ಈಗ ಆಧುನಿಕ ಕನ್ನಡ ಸಾಹಿತ್ಯದ ವಿಶಿಷ್ಟತೆಯಾದ ಸಾಹಿತಿ ದಂಪತಿಗಳ ಸಾಲಿಗೆ ಸೇರಿದ್ದಾರೆ. ಅವರ ಶ್ರೀಮತಿಯವರು ಇತ್ತೀಚೆ ಎರಡು ಹೊಸ ಪುಸ್ತಕಗಳ ಮೂಲಕ ರಚಿಸಿ ಕನ್ನಡ ಓದುಗರಲ್ಲಿ ಕುತೂಹಲವನ್ನುಂಟು ಮಾಡಿದ್ದಾರೆ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ನಾನು ಧಾರವಾಡಕ್ಕೆ ಕರೆದಾಗಲೆಲ್ಲ ಪ್ರೀತಿಯಿಂದ ಬಂದು ಭಾಷಣ ಮಾಡಿದ್ದಾರೆ. ಕವಿ ಕಣವಿಯವರಿಗೆ ನನಗೆ ಅತ್ಯಂತ ಪ್ರಿಯರಾದ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರು ತಮ್ಮ ವಿಮರ್ಶಾ ವಿವೇಕದಿಂದ ಕನ್ನಡ ಸಹೃದಯ ಲೋಕವನ್ನು ಸದಾ ಉಲ್ಲಾಸಗೊಳಿಸುತ್ತಿರಲಿ!

# ಶ್ರೀ ಬಿ. ಎನ್. ಶ್ರೀಕೃಷ್ಣ ಅವರಿಗೆ ಫೆಲೋಷಿಪ್



ಶ್ರೀ. ಬಿ. ಎನ್. ಶ್ರೀಕೃಷ್ಣ ಅವರು ಮೊದಲು ಮುಂಬಯಿಯಲ್ಲಿಯೇ ವಕೀಲರಾಗಿದ್ದು, ಆಮೇಲೆ ಬಾಂಬೆ ಹೈಕೋರ್ಟ್‌ನಲ್ಲಿ, ನ್ಯಾಯಾಧೀಶರು, ಕೇರಳದ ಹೈಕೋರ್ಟ್‌ನಲ್ಲಿ ನ್ಯಾಯಾಧೀಶರಾದ ಮೇಲೆ, ಸರ್ವೋಚ್ಚ ನ್ಯಾಯಾಲಯಕ್ಕೆ ನ್ಯಾಯಾಧೀಶರಾಗಿದ್ದರು. ಅವರು ಅನೇಕ ಕಮೀಷನ್‌ಗಳ ಮುಖ್ಯಸ್ಥರಾಗಿ ವರದಿಯನ್ನಿತ್ತು ನಾಡಿನಲ್ಲಿಯೇ ತಮ್ಮ ಹೆಸರನ್ನು ಅಚ್ಚಳಿಯದಂತೆ ಮೂಡಿಸಿದ್ದಾರೆ.

ಶ್ರೀ ಬಿ. ಎನ್. ಶ್ರೀಕೃಷ್ಣ ಅವರಿಗೆ ಏಷ್ಯಾಟಿಕ್ ಸೊಸೈಟಿಯವರು, ಗೌರವ ಫಿಲೋಷಿಪ್ ಅನ್ನು ನೀಡಿದ್ದಾರೆ. ಇದು ನಮ್ಮೆಲ್ಲರಿಗೂ ಹೆಮ್ಮೆಯ ಸುದ್ದಿ.

ಅವರಿಗೆ ಆಯುರಾರೋಗ್ಯವನ್ನು ನೀಡಿ, ನಾಡಿಗೆ ಇನ್ನೂ ಹೆಚ್ಚಿನ ದುಡಿಮೆಯನ್ನು ಸಲ್ಲಿಸಲು ಅವಕಾಶ ನೀಡಲೆಂದು ದೇವರಲ್ಲಿ ನಮ್ಮೆಲ್ಲರ ಕೋರಿಕೆ.

# ನಗೆಹನಿ

ಗೆಳತಿ: ನೀವು ನಮ್ಮ ತಾಯಿಗೆ ಇಷ್ಟವಾದಿರಿ.

ಪಪ್ಪು: ಅದೆಲ್ಲಾ ನನಗೊತ್ತಿಲ್ಲ. ನಾನು ನಿನ್ನನ್ನೇ ಮದುವೆಯಾಗೋದು. ನಿಮ್ಮಮ್ಮನಿಗೆ ಕ್ಷಮಿಸಲು ಹೇಳು.

*****

ಹುಚ್ಚ: ನಾನು ವಿಧಾನ ಸೌಧಾನ ಕೊಂಡ್ಕೋತಿದೀನಿ!

ದಡ್ಡ: ಸಾರಿ! ನಾನು ಅದನ್ನ ಮಾರೋ ಮೂಡ್ನಲ್ಲಿಲ್ಲ!!

*****

ಡಾಕ್ಟರ್: ನಿಮ್ಮ ತೂಕ ಎಷ್ಟು?

ಮಂಕ: ಕನ್ನಡಕ ಹಾಕ್ದಾಗ 75 ಕೆ.ಜಿ.

ಡಾಕ್ಟರ್: ತೆಗೆದ್ರೆ ಎಷ್ಟಾಗುತ್ತೆ?

ಮಂಕ: ಎಷ್ಟೂಂತ ನನಗೆ ಕಾಣೊಲ್ಲ ಡಾಕ್ಟರೇ

*****

ಒಂದು ಹಳ್ಳಿಯ ಪಂಚಾಯಿತಿ ಕಛೇರಿಯಲ್ಲಿ ಹಾಕಿದ ಬೋರ್ಡ್

"ಹೆಬ್ಬೆಟ್ಟು ಒತ್ತಿ ಸಹಿ ಮಾಡಿದ ಬೆರಳನ್ನು ಗೋಡೆಯ ಮೇಲೆಲ್ಲಾ ಒರೆಸಿ ಗಲೀಜು ಮಾಡಬಾರದು"

ಅದರ ಕೆಳಗೆ ನಮ್ಮ ಗುಂಡ ಹೀಗೆ ಬರೆದ.

"ಮಗನ ... ನೀ ಹಾಕಿದ ಬೋರ್ಡ್ ಅವರಿಗೆ ಓದಾಕೆ ಬಂದಿದ್ರ, ಮತ್ತ್ಯಾಕ ಹೆಬ್ಬೆಟ್ಟು ಒತ್ತಿದ್ರಲೇ. . ."

*****

ವೆಂಕ ಕುಡಿದು ಮನೆ ಕಡೆ ಹೊರಟ. ಜೋರಾಗಿ ಮಳೆ ಬಂತು. ಚರಂಡಿಯಲ್ಲಿ ಬಿದ್ದ. ಕೆಲ ಹೊತ್ತಿನಲ್ಲಿ ಮಿಂಚು ಹೊಳೆಯಿತು. ಬಾಬಿನ ಕಡೆ ದೇವರಿಗೆ ಕೈ ಮುಗಿದು, ವೆಂಕ ಅಂದ "ದೇವರೇ, ಮಳೆ ಬೀಳಿಸಿ, ನನ್ನನ್ನ ಜಾರಿಸಿದ್ದಿ, ಮೇಲಾಗಿ ನನ್ನ ಫೋಟೋ ಏಕೆ ತೆಗೆಯುತ್ತಿ. ಫೇಸ್ ಬುಕ್ ನಲ್ಲಿ ಹಾಕ್ತಿಯೇನು?

*****

ತರಕಾರಿಗೆ ಅಂತ ನಿನ್ನೆನೇ 1000 ರೂಪಾಯಿ ತಗೊಂಡ್ಯಲ್ಲೇ, ಏನಾಯ್ತು?

ಹೆಂಡತಿ: ಅಯ್ಯೋ, ನಿಮ್ಮಮ್ಮ ಹೇಳಿದಾರೆ. ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ ಹೋಗುತ್ತೆ. ಅದಕ್ಕೆಲ್ಲ ಅಲೆಕ್ಕ ಇಡಬಾರದೂಂತ.

*****

ಸಂಸಾರವೆಂದರೆ ಝುಂಡೂಬಾಮ್ ಇದ್ದ ಹಾಗೆ

ಬೇರೆಯವರಿಗೆ ಘಮ ಘಮ

ಹಚ್ಚಿಕೊಂಡವರಿಗೆ ಉರಿ – ಉರಿ

*****

ಡಾಕ್ಟರ್: ನಿನ್ನ ದೇಹದಲ್ಲಿ 265 ಮೂಳೆಗಳಿವೆ.

ಗುಂಡ: ಮೆಲ್ಲಗೆ ಹೇಳಿ ಡಾಕ್ಟರೇ, ಹೊರಗೆ ನನ್ನ ನಾಯಿ ನಿಂತಿದೆ!!!

*****

ಇಷ್ಟೇ...


ಅದನ್ನು ಹೇಳಿದ್ದು ಇಷ್ಟೆ.

ಐ ಲವ್ ಯೂ ಮಾಯಾ ॥ವ್ಹಾ ವ್ಹಾ॥

ಅವನು ಹೇಳಿದ್ದು ಇಷ್ಟೇ

ಐ ಲವ್ ಯೂ ಮಾಯಾ ।ವ್ಹಾ ವ್ಹಾ॥

ಆಗಿದ್ದು ಇಷ್ಟೇ



# ನೀತಿ ಕತೆಗಳು

ಆ ಊರಿನ ಹೆಸರು ರಾಂಪುರ. ವನವಾಸದ ಸಂದರ್ಭದ ಶ್ರೀರಾಮಚಂದ್ರ, ಸೀತಾ, ಲಕ್ಷ್ಮಣರು ಇಲ್ಲಿ ಒಂದು ದಿನ ತಂಗಿದ್ದರೆಂದೂ, ಅದೇ ಕಾರಣಕ್ಕೆ ಈ ಊರಿಗೆ ರಾಮಪುರ ಎಂಬ ಹೆಸರು ಬಂತೆಂದೂ ಕಾಲಕ್ರಮೇಣ ಜನರ ಆಡು ಭಾಷೆಯಲ್ಲಿ ಅದು ರಾಂಪುರ ಎಂದಾಯಿತೆಂದೂ ಜನ ಈಗಲೂ ಮಾತಾಡುತ್ತಾರೆ. ಊರ ಮುಂದಿರುವ ಈಶ್ವರನ ದೇವಾಲಯ ತೋರಿಸಿ, ಇಲ್ಲಿ ಶ್ರೀರಾಮಚಂದ್ರ ಶಿವನನ್ನು ಪೂಜಿಸಿದನಂತೆ ಎಂದು ಇನ್ನೊಂದು ಕತೆಯನ್ನು ಹೇಳುತ್ತಾರೆ.

ಆಗ ಹೇಳಲಿರುವ ಕಥೆ ಅದೆಷ್ಟೋ ವರ್ಷಗಳ ಹಿಂದೆ ನಡೆದದ್ದು, ಅಂದರೆ, ರಾಜರ ಆಡಳಿತವಿತ್ತಲ್ಲ? ಆಗ ನಡೆದದ್ದು. ರಾಂಪುರದಲ್ಲಿ ಆಗ ಒಬ್ಬ ಭಿಕ್ಷುಕನಿದ್ದ. ಅವನ ಅವನ ಹೆಸರು ಸುಬ್ಬ. ಒಂದು ಮಾಸಲು ಅಂಗಿ, ಅಲ್ಯುಮಿನಿಯಂ ತಟ್ಟೆ ಹಾಗೂ ಮಾರುದ್ದದ ಒಂದು ಕೋಲು. ಇವಿಷ್ಟೂ ಸುಬ್ಬನ ಆಸ್ತಿ. ಬೆಳಗಿನ ಹೊತ್ತು, ಈಶ್ವರನ ದೇವಾಲಯ ಮುಂದಿನ ಅರಳಿಕಟ್ಟೆಯಲ್ಲಿ ಆತ ಕೂತಿರುತ್ತಿದ್ದ. ದೇವಸ್ಥಾನಕ್ಕೆಂದು ಬಂದವರು ಏನಾದರೂ ಕೊಟ್ಟರೆ ಅದನ್ನು ಪಡೆದುಕೊಳ್ಳುತ್ತಿದ್ದ. ಬೆಳಗ್ಗೆ – ಮಧ್ಯಾಹ್ನ ಸಂಜೆ ಏನು ಸಿಗುತ್ತಿತ್ತೋ ಅದನ್ನು ಖುಷಿಯಿಂದ ತಿನ್ನುತ್ತಿದ್ದ. ಬಹುಶಃ ಅವನಿಗೆ ಆಸೆಯಿರಲಿಲ್ಲ. ನಾಳೆಗೆ ಕೂಡಿಡುವ ಬುದ್ಧಿಯೂ ಇರಲಿಲ್ಲ. ಹಾಗಾಗಿ ಅವನು ಮನೆಮನೆಯಲ್ಲಿ ಭಿಕ್ಷೆ ಕೇಳಲು ಹೋಗುತ್ತಿರಲಿಲ್ಲ. ಸಂಜೆಯಾಗುತ್ತಿದ್ದಂತೆ ಊರಿನ ಯಾರದಾದರೂ ಮನೆಯ ಜಗುಲಿಯಲ್ಲಿ ಮಲಗಿಬಿಡುತ್ತಿದ್ದ. ಬೆಳಗ್ಗೆ ಆದದ್ದೇ ತಡ, ಊರ ಸಮೀಪವಿದ್ದ ಕೆರೆಯ ಬಳಿ ಹೋಗಿ, ನಿತ್ಯಕರ್ಮಗಳನ್ನು ಮುಗಿಸಿ ಸೀದಾ ಬಂದು ಅರಳೀಕಟ್ಟೆಯಲ್ಲಿ ಕೂತುಬಿಡುತ್ತಿದ್ದ.

ಸುಬ್ಬನಿಂದ ಯಾವತ್ತೂ ಯಾರಿಗೂ ತೊಂದರೆಯಾಗಿರಲಿಲ್ಲ. ದಿನವೂ ಒಂದೊಂದು ಮನೆಯ ಜಗುಲಿಯಲ್ಲಿ ಮಲಗುತ್ತಿದ್ದನಲ್ಲ? ಆಗ, ಕೂಡ ಮನೆಯವರಿಗೆ ಯಾವುದೇ ರೀತಿಯ ಕಿರಿಕಿರಿಯಾಗದಂತೆ ಎಚ್ಚರವಹಿಸುತ್ತಿದ್ದ. ಅವನು ಹೊರಗಿದ್ದಾನೆ ಎಂದರೆ, ಮನೆಯ ರಕ್ಷಣೆಗೆ ಒಬ್ಬ ಸಮರ್ಥ ಕಾವಲುಗಾರ ಇದ್ದಂತಾಗುತ್ತಿತ್ತು. ಈ ಕಾರಣದಿಂದ ಊರಿನ ಯಾರೂ ಸುಬ್ಬನನ್ನು ಯಾಕಪ್ಪಾ ಇಲ್ಲಿ ಉಳ್ಕೊಂಡಿದೀಯ ಎಂದು ಕೇಳುತ್ತಿರಲಿಲ್ಲ.

ಹುಟ್ಟು ಸೋಮಾರಿಯಂತಿದ್ದ. ಭಿಕ್ಷೆಯನ್ನು ಬದುಕಾಗಿಸಿಕೊಂಡಿದ್ದ ಸುಬ್ಬನಿಗೆ ಒಂದು ವಿಶೇಷ ಗುಣವಿತ್ತು. ಜನ ಏನಾದರೂ ಸಮಸ್ಯೆ ಹೇಳಿದರೆ, ಅವನು ಅದಕ್ಕೆ ಪರಿಹಾರ ಹೇಳುತ್ತಿದ್ದ. ಎಷ್ಟೇ ಕಷ್ಟದ ಸಮಸ್ಯೆ ಅಂದುಕೊಂಡರೂ ಅದನ್ನು ಸುಲಭವಾಗಿ ಬಿಡಿಸುತ್ತಿದ್ದ. ಹೀಗೆ ಪರಿಹಾರ ಹೇಳುತ್ತಿದ್ದ. ಎಷ್ಟೇ ಕಷ್ಟದ ಸಮಸ್ಯೆ ಅಂದುಕೊಂಡರೂ ಅದನ್ನು ಸುಲಭವಾಗಿ ಬಿಡಿಸುತ್ತಿದ್ದ. ಹೀಗೆ ಪರಿಹಾರ ಹೇಳುತ್ತಿದ್ದನಲ್ಲ? ಅದಕ್ಕೆ ನಯಾಪೈಸೆಯ ಗೌರವಧನವನ್ನೂ ಪಡೆಯುತ್ತಿರಲಿಲ್ಲ. ಬದಲಾಗಿ ಇದು ನನ್ನ ಆತ್ಮ ಸಂತೋಷದ ಕೆಲಸ ಎಂದು ಬಿಡುತ್ತಿದ್ದ. ರಾಂಪುರದ ಕಡುಬಡವನಿಂದ ಹಿಡಿದು ಪಟೇಲರವರೆಗೆ ಎಲ್ಲರೂ ಒಂದಲ್ಲ ಒಂದು ಸಂದರ್ಭದಲ್ಲಿ ಸುಬ್ಬನ ಬಳಿಗೆ ಸಮಸ್ಯೆ ಹೊತ್ತುಕೊಂಡು ಬರುತ್ತಿದ್ದರು. ಆತ ಎಲ್ಲವನ್ನೂ ಕೇಳಿಸಿಕೊಂಡು ಐದಾರು ನಿಮಿಷದ ನಂತರ ಪರಿಹಾರ ಹೇಳುವುದನನ್ನು ವಿಸ್ಮಯದಿಂದ ಕೇಳುತ್ತಿದ್ದರು. ನಂತರ, ಇಷ್ಟೊಂದು ಬುದ್ಧಿವಂತನಾಗಿದ್ದರೂ ಈತ ಪಟ್ಟಣಕ್ಕೆ ಹೋಗಿ ಕೈ ತುಂಬಾ ಸಂಪಾದಿಸದೆ, ಕುಗ್ರಾಮದಲ್ಲಿ ಭಿಕ್ಷೆ ಬೇಡುವುದಾದರೂ ಏಕೆ ಎಂದು ತಮಗೆ ತಾವೇ ಕೇಳಿಕೊಳ್ಳುತ್ತಿದ್ದರು. ಉತ್ತರ ಹೊಳೆಯದೇ ಹೋದಾಗ ಸುಮ್ಮನಾಗುತ್ತಿದ್ದರು.

ಹೀಗಿರುವಾಗಲೇ ಒಂದು ದಿನ ಮಹಾರಾಜರ ಸವಾರಿ ರಾಂಪುರ ಗ್ರಾಮಕ್ಕೆ ಬಂತು. ಅಂದಮೇಲೆ ಕೇಳಬೇಕೆ? ಈಶ್ವರ ದೇವಾಲಯವನ್ನು ಬಗೆಬಗೆಯಲ್ಲಿ ಅಲಂಕರಿಸಲಾಯಿತು. ಪಟೇಲರೂ ಸೇರಿದಂತೆ ಊರ ಹಿರಿಯರೆಲ್ಲ ಬೆಳಗಿನಿಂದಲೇ ಮಹಾರಾಜರ ದಾರಿ ಕಾಯುತ್ತಿದ್ದರು. ಕಡೆಗೊಮ್ಮೆ ಮಹಾರಾಜರ ಸವಾರಿ ಬಂದೇ ಬಂತು. ಮುಖಂಡರಿಂದ ಮಹಾರಾಜರು ಆತಿಥ್ಯ ಸ್ವೀಕರಿಸಿದರು. ತುಸು ಹೊತ್ತು ವಿಶ್ರಾಂತಿ ಪಡೆದರು. ನಂತರ ಪ್ರಜೆಗಳ ಸುಖ–ದುಃಖ ಕೇಳಲು ಹೊರಟ. ಆ ಸಂದರ್ಭದಲ್ಲಿಯೇ ಅರಳೀ ಕಟ್ಟೆಯಲ್ಲಿ ಒಂದು ಮಾಸಲು ಅಂಗಿ–ಅಲ್ಯುಮಿನಿಯಂ ತಟ್ಟೆ ಹಿಡಿದು ಕೂತಿದ್ದ ಸುಬ್ಬ ಮಹಾರಾಜರ ಕಣ್ಣಿಗೆ ಬಿದ್ದ.

ತಮ್ಮದು ರಾಮರಾಜ್ಯ. ಸುಭಿಕ್ಷಾ ಸಾಮ್ರಾಜ್ಯ ಎಂಬುದು ಮಹಾರಾಜರ ನಂಬಿಕೆಯಾಗಿತ್ತು. ಇಂಥ ಸಂದರ್ಭದಲ್ಲಿ ಭಿಕ್ಷುಕನೊಬ್ಬ ಕಣ್ಣಿಗೆ ಬಿದ್ದುದ್ದರಿಂದ ಅವರಿಗೆ ತುಂಬಾ ಬೇಜಾರಾಯಿತು. ಛೆ, ನಮ್ಮ ರಾಜ್ಯದಲ್ಲಿ ಈಗಲೂ ಭಿಕ್ಷುಕರು ಇದ್ದಾರಲ್ಲ ಎಂದು ನೊಂದುಕೊಂಡರು. ನಂತರ ಪಟೇಲರನ್ನು ಕರೆದು ಯಾರೀತ? ನೋಡೋಕೆ ಗಟ್ಟಿಮುಟ್ಟಾಗೇ ಇದ್ದಾನೆ. ಇವನಿಗೆ ದುಡಿದು ತಿನ್ನಲು ಏನು ದಾಡಿ ಎಂದು ಪ್ರಶ್ನೆ ಹಾಕಿದರು. ಮಹಾಪ್ರಭುಗಳೆ, ಈತ ಭಿಕ್ಷುಕ ನಿಜ. ಆದರೆ ಇವನು ಅಪಾರ ಬುದ್ಧಿವಂತನೂ ಹೌದು. ಎಂಥ ಸಮಸ್ಯೆಗೂ ಪರಿಹಾರ ಹೇಳಬಲ್ಲ ಶಕ್ತಿ ಈ ಭಿಕ್ಷುಕನಿಗಿದೆ. ಅಂದಹಾಗೆ, ಇವನ ಹೆಸರು ಸುಬ್ಬ. ಇವನನ್ನು ನಮ್ಮ ಊರಿನ ಆಸ್ತಿ ಎಂದು ಕರೆದರೂ ತಪ್ಪಿಲ್ಲ ಸ್ವಾಮಿ . . .!

ಪಟೇಲರಿಂದ ಈ ಬಗೆಯ ಉತ್ತರ ಕೇಳಿ ಮಹಾರಾಜರಿಗೆ ಆಶ್ಚರ್ಯವಾಯಿತು. ಹಿಂದೆಯೇ, ಈ ಭಿಕ್ಷುಕನ ಇನ್ನೊಂದು ಮುಖವನ್ನು ನೋಡಿಬಿಡುವ ಆಸೆಯೂ ಬಲಿಯಿತು. ಅದೇ ಸಂದರ್ಭಕ್ಕೆ, ತುಂಬ ದಿನಗಳಿಂದಲೂ ಪರಿಹಾರವಾಗದೆ ತಲೆ ತಿನ್ನುತ್ತಿದ್ದ ಆಡಳಿತಕ್ಕೆ ಸಂಬಂಧಿಸಿದ ಸಮಸ್ಯೆಯೊಂದು ನೆನಪಾಯಿತು. ತಕ್ಷಣವೇ ಭಿಕ್ಷುಕನ ಬಳಿ ಹೋದ ಮಹಾರಾಜರು – ನೋಡಯ್ಯ, ನನ್ನದೊಂದು ಸಮಸ್ಯೆ ಇದೆ. ಅದಕ್ಕೆ ಪರಿಹಾರ ಸೂಚಿಸಿದರೆ ನಿನಗೆ ಬಹುಮಾನವಾಗಿ ಒಂದು ಚಿನ್ನದ ನಾಣ್ಯ ಕೊಡುತ್ತೇನೆ' ಎಂದರು. ಈ ಸುಬ್ಬ ತಕ್ಷಣವೇ ಹೀಗೆಂದ. ಮಹಾಪ್ರಭುಗಳೇ, ನನಗೆ ಚಿನ್ನದ ನಾಣ್ಯ ಬೇಡ. ಅದನ್ನು ನೀವೇ ಇಟ್ಟುಕೊಳ್ಳಿ. ನಿಮ್ಮನ್ನು ಕಾಡುತ್ತಿರುವ ಸಮಸ್ಯೆ ಏನೆಂದು ಹೇಳೀ. . .' ಒಬ್ಬ ಯಃಕಶ್ಚಿತ್ ಭಿಕ್ಷುಕನಿಂದ ಈ ಬಗೆಯ ಉತ್ತರವನ್ನು ಮಹಾರಾಜರು ನಿರೀಕ್ಷಿಸಿರಲಿಲ್ಲ. ಅವರಿಗೆ ತುಂಬಾ ಬೇಸರವಾಯಿತು. ಆದರೆ ಏನೂ ಮಾಡುವಂತಿರಲಿಲ್ಲ. ಇರಲಿ' ಎಂದುಕೊಂಡು ತಮ್ಮ ಸಮಸ್ಯೆಯನ್ನು ಹೇಳಿಕೊಂಡರು.

ಭಿಕ್ಷುಕ ಸುಬ್ಬ ಐದಾರು ನಿಮಿಷ ತಲೆ ತಗ್ಗಿಸಿದ್ದ. ಆ ಸಮಯದಲ್ಲಿ ತನ್ನಷ್ಟಕ್ಕೆ ತಾನೇ ಏನೇನೋ ಮಾತಾಡಿಕೊಂಡ. ಕೈ ಬೆರಳುಗಳನ್ನು ಬಿಡಿಸಿ, ಮಡಿಚಿ ಅದೇನೇನೋ ಲೆಕ್ಕಾಚಾರ ಮಾಡಿದ. ನಂತರ ಒಂದು ಪರಿಹಾರ ಹೇಳಿಯೇ ಬಿಟ್ಟ. ಅದು ಮಹಾರಾಜರಿಗೆ ಸರಿ ಕಾಣಿಸಿತು. ಅವರು ಸುಬ್ಬನನ್ನು ಪ್ರೀತಿ, ಅಭಿಮಾನ, ಮೆಚ್ಚುಗೆಯಿಂದ ನೋಡುತ್ತ, ಒಂದು ಚಿನ್ನದ ನಾಣ್ಯವನ್ನು ಅವನ ಮುಂದಿಟ್ಟು, ಇದನ್ನು ನೀನು ಸ್ವೀಕರಿಸಲೇಬೇಕು ಎಂದು ಹೇಳಿ ಅರಮನೆಗೆ ಬಂದರು. ಮರುದಿನ ಮಹಾರಾಜರಿಗೆ, ಆಡಳಿತದ ವಿಷಯಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಮಸ್ಯೆ ತಲೆದೋರಿತು. ಮಂತ್ರಿಮಂಡಲದ ಪ್ರಮುಖರ ಮುಂದೆ ಈ ಸಮಸ್ಯೆ ಇಟ್ಟರು. ಅವರು ಸೂಚಿಸಿದ ಪರಿಹಾರಗಳು ಮಹಾರಾಜರಿಗೆ ಇಷ್ಟವಾಗಲಿಲ್ಲ. ಇಂಥ ಸಂದರ್ಭದಲ್ಲಿ ಸಹಜವಾಗಿಯೇ ಮತ್ತೆ ರಾಂಪುರದ ಭಿಕ್ಷುಕ ಸುಬ್ಬನ ನೆನಪಾಯಿತು. ಅವತ್ತೇ ಸಂಜೆ ಸಮಸ್ಯೆಯೊಂದಿಗೆ ರಾಜ, ಸುಬ್ಬನ ಮುಂದೆ ನಿಂತಿದ್ದ.

ಸುಬ್ಬ ಈ ಬಾರಿಯೂ ಮಹಾರಾಜನಿಗೆ ತುಂಬ ಇಷ್ಟವಾಗುವ ರೀತಿಯಲ್ಲೇ ಸಮಸ್ಯೆಗೆ ಪರಿಹಾರ ಸೂಚಿಸಿದ. ಅದನ್ನು ಕೇಳಿದ ನಂತರವಂತೂ ಸುಬ್ಬನ ಪ್ರಚಂಡ ಬುದ್ಧಿಶಕ್ತಿಯ ಕುರಿತು ಮಹಾರಾಜರಿಗೆ ಅನುಮಾನವೇ ಉಳಿಯಲಿಲ್ಲ. ಅವರು ಎರಡೇ ಕ್ಷಣದಲ್ಲಿ ಒಂದು ನಿರ್ಧಾರಕ್ಕೆ ಬಂದು ಸುಬ್ಬನನ್ನು ಉದ್ದೇಶಿಸಿ ಹೀಗೆಂದರು. ಸುಬ್ಬು, ಅವರೇ, ನೀವು ಒಂದೊಂದು ಸಮಸ್ಯೆಗೂ ಪರಿಹಾರ ಸೂಚಿಸುವ ರೀತಿ ಸೊಗಸಾಗಿದೆ. ಒಬ್ಬ ಮಹಾಮಂತ್ರಿಗೆ ಇರಬೇಕಾದ ಬುದ್ಧಿ ಶಕ್ತಿ ನಿಮಗಿದೆ. ಅದು ಸದುಪಯೋಗ ಆಗಬೇಕು. ಹಾಗಾಗಿ ನೀವು ದಯವಿಟ್ಟು ಅರಮನೆಗೆ ಬನ್ನಿ. ನನ್ನ ವಿಶೇಷ ಸಲಹೆಗಾರರೆಂದು ನೇಮಿಸಿಕೊಳ್ಳುತ್ತೇನೆ. ನಿಮಗೆ ಅರಮನೆಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿರುತ್ತದೆ. ನಿಮಗೆ ಎಷ್ಟು ದಿನ ಸಾಧ್ಯವೋ ಅಷ್ಟು ದಿನ ನಮಗೆ ಆಡಳಿತದಲ್ಲಿ ಮಾರ್ಗದರ್ಶನ ಮಾಡಿ...' ಮಹಾರಾಜರು ಹೇಳಿದ ಮೇಲೆ ಕೇಳಬೇಕೆ? ಅವತ್ತೇ ಅಲ್ಲಲ್ಲಿ ಹರಿದುಹೋಗಿದ್ದ, ಗಬ್ಬುನಾತ ಹೊಡೆಯುತ್ತಿದ್ದ ಶರ್ಟು, ಅಲ್ಯುಮಿನಿಯಂ ತಟ್ಟೇ ಹಾಗೂ ಹಳೆಯ ಊರುಗೋಲಿನೊಂದಿಗೇ ಸುಬ್ಬ ಅರಮನೆಗೆ ಬಂದ. ಮರುದಿನದಿಂದಲೇ ಅವನ ಗೆಟಪ್ಪು ಬದಲಾಗಿ ಹೋಯಿತು. ಮೊದಲಿಗೆ, ಸುಬ್ಬನ ಹೆಸರು ಸುಬ್ರಾಯ ಶರ್ಮ ಎಂದಾಯಿತು. ಕೆಲವರು ಅವನನ್ನು ಜೋಯ್ಸರೇ ಎನ್ನಲೂ ಶುರುಮಾಡಿದರು. ಮಹಾರಾಜರಂತೂ ತುಂಬ ಪ್ರೀತಿಯಿಂದ ಮಂತ್ರಿಗಳೇ.. ." ಎಂದೇ ಕರೆಯುತ್ತಿದ್ದರು. ಮಹಾರಾಜರ ನಿವಾಸದ ಪಕ್ಕದಲ್ಲೇ ಇದ್ದ ಇನ್ನೊಂದು ಸೌಧದಲ್ಲಿ ಸುಬ್ಬುವಿನ ಸುಗಂದದ್ರವ್ಯ ಹಾಕಿದ್ದ ನೀರಲ್ಲೆ ಕೈ ತೊಳೆಯುವುದನ್ನು, ದಿನದಿನವೂ ಮಡಿ ವಸ್ತ್ರ ಧರಿಸುವುದನ್ನು, ಅರಮನೆಯ ಶಿಸ್ತು, ಶಿಷ್ಟಾಚಾರದೊಂದಿಗೆ ಬದುಕುವುದನ್ನು ರೂಢಿ ಮಾಡಿಕೊಂಡ. ಈ ಹಿಂದೆಲ್ಲಾ ರಾಂಪುರದ ಅರಳಿಕಟ್ಟೆಯಲ್ಲಿ ಕೂತು ಅವರಿವರ ಸಂಕಟಗಳಿಗೆ ಪರಿಹಾರ ಹೇಳುತ್ತಿದ್ದವನು, ಈಗ ರಾಜನ ಎಲ್ಲಾ ರಹಸ್ಯಗಳನ್ನೂ ಅವನೊಂದಿಗೆ ಹೇಳಿಕೊಂಡರು. ಮಹಾರಾಜರು ಮೊನ್ನೆ ಮೊನ್ನೆಯಷ್ಟೇ ಬಂದ ಸುಬ್ರಾಯ ಶರ್ಮನಿಗೆ ಇನ್ನಿಲ್ಲದ ಪ್ರಾಮುಖ್ಯತೆ ನೀಡಿದ್ದು ಅರಮನೆಯಲ್ಲಿದ್ದ ಉಳಿದ ಮಂತ್ರಿಗಳನ್ನು ಕೆರಳಿಸಿತು. ಹಾಗೆಯೇ ಸುಬ್ರಾಯನ ಅತಿಯಾದ ಬುದ್ಧಿವಂತಿಕೆ ಕಂಡು ಅವರಿಗೆ ಅನುಮಾನವೂ ಬಂತು. ಸಮಯ ನೋಡಿ ಮಹಾರಾಜರಿಂದ ಅವನನ್ನು ದೂರ ಮಾಡಲೇಬೇಕು ಎಂದು ಅವರೆಲ್ಲ ಲೆಕ್ಕ ಹಾಕಿಯೇ ಬಿಟ್ಟರು. ಸುಬ್ರಾಯನ ಒಂದೇ ಒಂದು ತಪ್ಪಿಗಾಗಿ ಹುಡುಕುತ್ತಿದ್ದವರಿಗೆ, ಕಡೆಗೂ ಅಂಥದೊಂದು ಸಂದರ್ಭ ಒದಗಿಬಂತು. ಈ ವೇಳೆಗೆ ಸುಬ್ರಾಯ ಅರಮನೆಗೆ ಬಂದು ವರ್ಷವೇ ಕಳೆದಿತ್ತು. ಅದೊಂದು ದಿನ ಮಂತ್ರಿಮಂಡಲದ ಎಲ್ಲರೂ ಸೇರಿ ಮಹಾರಾಜರ ಬಳಿ ಹೋದರು. ಪ್ರಭೂ, ನಾವೆಲ್ಲ ನಿಮ್ಮೊಂದಿಗೆ ಒಂದು ಮಹತ್ವದ ವಿಷಯ ಕುರಿತು ಚರ್ಚಿಸಬೇಕಾಗಿದೆ. ಒಂದು ರಹಸ್ಯ ಸಭೆಯ ಏರ್ಪಾಡು ಮಾಡಿ, ಆದರೆ, ಒಂದು ವಿನಂತಿ, ಈ ಸಭೆಗೆ ಸುಬ್ರಾಯ ಶರ್ಮರನ್ನು ಕರೆಯಬಾರದು' ಎಂದರು.

ಈ ಮಂತ್ರಿಗಳೆಲ್ಲ ಅರಮನೆಯಲ್ಲಿ ದಶಕಗಳಿಂದ ಇದ್ದವರು. ಹಾಗಾಗಿ ಅವರನ್ನು ಸಂದೇಹದಿಂದ ನೋಡಲು ರಾಜನಿಗೆ ಮನಸ್ಸಾಗಲಿಲ್ಲ. ವಿಷಯ ಮಹತ್ವದ್ದೇ ಇರಬೇಕು. ಹೇಗಿದ್ದರೂ ದಿನವೂ ಸಂಜೆ ಸುಬ್ರಾಯ ಶರ್ಮ ಅಂತಃಪುರದಲ್ಲಿ ನಡೆವ ಚರ್ಚೆಗೆ ಬರುತ್ತಾನೆ. ಆಗ ಇದನ್ನೆಲ್ಲ ಹೇಳಿದರಾಯಿತು ಎಂದೇ ರಾಜ ಯೋಚಿಸಿದ. ನಂತರ, ಗುಪ್ತ ಸಭೆಗೆ ದಿನವನ್ನೂ ನಿಗದಿಪಡಿಸಿದ. ಮಹಾರಾಜರೆ, ನಮ್ಮ ಮಾತನ್ನು ದಯಮಾಡಿ ನಂಬಿ, ನಾವು ಕಳೆದು ಐದು ತಿಂಗಳಿನಿಂದಲೂ ದಿನದಿನ ಕಣ್ಣಲ್ಲಿ ಕಣ್ಣಿಟ್ಟು ನೋಡಿದ ನಂತರವೇ ಈ ಮಾತು ಹೇಳುತ್ತಿದ್ದೇನೆ. ಏನೆಂದರೆ ಸುಬ್ರಾಯ ಶರ್ಮ ಬೇರೆ ಯಾರೂ ಅಲ್ಲ, ಆತ್ರ ಶತ್ರುದೇಶದ ಗೂಢಚಾರಿ. ಅವನಿಗೆ ಸಕಲೆಂಟು ವಿದ್ಯೆಗಳನ್ನು ಕಲಿಸಿದ ನಂತರವೇ ನಮ್ಮ ದೇಶಕ್ಕೆ ಕಳಿಸಲಾಗಿದೆ. ಇಲ್ಲವಾದರೆ, ಒಬ್ಬ ಯಃಕಶ್ಚಿತ್ ಭಿಕ್ಷುಕನಿಗೆ ಇಂಥ ಅಪರೂಪದ ಬುದ್ಧಿವಂತಿಕೆ ಬರಲು ಹೇಗೆ ಸಾಧ್ಯ? ನಾವು ಕಣ್ಣಾರೆ ಕಂಡಿರುವ ಮಾತು ಕೇಳಿ, ಸುಬ್ರಾಯ ಪ್ರತಿದಿನವೂ ಸಂಜೆ ತನ್ನ ಮಹಲಿನ ಸಮೀಪವಿರುವ ಪುಟ್ಟದೊಂದು ಕೋಣೆಗೆ ತಪ್ಪದೇ ಹೋಗುತ್ತಾನೆ. ಒಬ್ಬನೇ ಹೋಗುತ್ತಾನೆ. ಹಾಗೆ ಹೋಗುವ ಮುನ್ನ ಸುತ್ತಮುತ್ತ ಯಾರೂ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳುತ್ತಾನೆ. ಹಾಗೆ ಕೋಣೆಯ ಒಳಗೆ ಹೋದವನು, ಅರ್ಧ ಗಂಟೆಯ ನಂತರ ಹೊರಗೆ ಬರುತ್ತಾನೆ. ಹಾಗೆ ಹೊರಬಂದವನನ್ನು ಕೋಣೆಯಲ್ಲಿ ಇಷ್ಟು ಹೊತ್ತು ಏನು ಮಾಡುತ್ತಿದ್ದೆ ಎಂದು ಕೇಳಿದರೆ ಹಾರಿಕೆಯ ಉತ್ತರ ಕೊಡುತ್ತಾನೆ. ಬಹುಶಃ ಅವನು ತನ್ನವರಿಗೆ ಆ ಕೋಣೆಯಲ್ಲಿ ನಿಂತು ನಮ್ಮ ರಾಜ್ಯದ ರಹಸ್ಯವನ್ನೆಲ್ಲ ಹೇಳುತ್ತಾನೆ ಅನಿಸುತ್ತೆ. ಆ ಕೋಣೆಯಿಂದ ಹೊರಹೋಗಲು ಸುರಂಗ ಮಾರ್ಗವಿದ್ದರೂ ಇದ್ದೀತು. ಯಾವುದನ್ನೂ ನೀವೇ ಪರಿಶೀಲಿಸಿ ಬೇಕಂದರೆ. . .' ಎಂದರು.

ಒಂದು ಅನುಮಾನದ ಅಡ್ಡಗೆರೆ ಎಂಥ ಮಧುರ ಬಾಂಧವ್ಯವನ್ನೂ ಅಳಿಸಿಹಾಕಬಲ್ಲದು. ಮಹಾರಾಜನ ವಿಷಯದಲ್ಲೂ ಹೀಗೇ ಆಯಿತು. ಮಂತ್ರಿಮಂಡಲದ ಸದಸ್ಯರೆಲ್ಲರ ಮಾತುಗಳನ್ನೇ ಮತೆ ಮತ್ತೆ ಮೆಲುಕು ಹಾಕಿದ ರಾಜನಿಗೆ ಸುಬ್ರಾಯ ಶರ್ಮ ಒಬ್ಬ ಗೂಢಚಾರಿ ಎಂಬುದು ಗ್ಯಾರಂಟಿಯಾಗಿ ಹೋಯಿತು. ಅದುವರೆಗೆ ಅವನ ಬುದ್ಧಿವಂತಿಕೆಯ ವಿಷಯದಲ್ಲಿ ಇದ್ದ ಅಭಿಮಾನವೆಲ್ಲ ಕ್ಷಣ ಮಾತ್ರದಲ್ಲಿಯೇ ಅನುಮಾನಸ್ಪದವಾಗಿ ಬದಲಾಯಿತು.ಇರಲಿ, ಎಲ್ಲವನ್ನೂ ಪ್ರತ್ಯಕ್ಷವಾಗಿ ನೋಡೋಣ. ಅನಂತರವೇ ಸುಬ್ರಾಯನನ್ನು ಶಿಕ್ಷಿಸೋಣ ಎಂದು ನಿರ್ಧರಿಸಿದ ರಾಜ. ಅದೊಂದು ಸಂಜೆ ಸುಬ್ರಾಯ ಆ ಕೋಣೆಗೆ ಹೋದ ಹತ್ತು ನಿಮಿಷದ ನಂತ್ರ ತಾನೂ ಹೋಗಲು ನಿರ್ಧರಿಸಿದ ರಾಜ. ಅದೊಂದು ಸಂಜೆ ಸುಬ್ರಾಯ ಆ ಕೋಣೆಗೆ ಹೋದ ಹತ್ತು ನಿಮಿಷದ ನಂತರ ತಾನೂ ಹೋಗಲು ನಿರ್ಧರಿಸಿದ. ಕೋಣೆಯ ಸುತ್ತಲೂ ಮಾರುವೇಷದಲ್ಲಿ ಸೈನಿಕರು ಬಿಟ್ಟು ಒಳಗಿನಿಂದ ಯಾರೇ ಅಪರಿಚಿತರು ಬಂದರೂ ಹಿಂದೆ ಮುಂದೆ ನೋಡದೆ ಕತ್ತರಿಸಿ ಹಾಕಿ ಎಂದು ಸೈನಿಕರಿಗೆ ತನ್ನ ಅದೇಶ ನೀಡಿದ.

*(ಪುಟ 22ಕ್ಕೆ).*

# ಸಂಕ್ರಾಂತಿ ಮತ್ತು ಏಸು ಕ್ರಿಸ್‌ಮಸ್



ಮಾರ್ಗಶಿರ ಅಥವ ಮಾಘಮಾಸ ಭೂಮಿಯ ಚರಿತ್ರೆಯಲ್ಲಿ ಹೆಚ್ಚಿನದು. ಏಕೆಂದರೆ, ಈ ತಿಂಗಳಲ್ಲಿ ಉತ್ತರ ಧ್ರುವದಲ್ಲಿ, ಪೂರ್ತಿಯಾಗಿ ಮುಳುಗಿಯೇ ಹೋಗುತ್ತಾನೆ. ಚಳಿಗಾಲದ ನಡುವಿನಲ್ಲಿ, ನೇಸರುವಿನ ಬೆಳಕಿಲ್ಲದೆ, ಕಾವಿಲ್ಲದೆ, ಗಿಡಮರಗಳು, ಜೀವ ಜಂತುಗಳು ಮುದುಡಿ ಹೋಗುತ್ತವೆ. ಉತ್ತರಾರ್ಧದಲ್ಲಿ ಇರುವ ಮಂದಿ, ನೇಸರುವಿನ ಮರುಹುಟ್ಟನ್ನು ಎದುರು ನೋಡುತ್ತಿರುತ್ತಾರೆ.

ಹಿಂದೆ ಭಾರತದಲ್ಲಿ, ಸೂರ್ಯ ದಕ್ಷಿಣದಿಂದ ಉತ್ತರಕ್ಕೆ ಸರಿಯುವ ದಿನವನ್ನು "ಸಂಕ್ರಮಣ" ಅಥವಾ ಸಂಕ್ರಾಂತಿ ಎಂದು ನೆರವೇರಿಸುತ್ತಿದ್ದರು. ಕೇವಲ ಭಾರತದಲ್ಲಿಯೇ ಅಲ್ಲ, ಯುರೋಪಿನಲ್ಲಿಯೂ ಕೂಡ ಸೂರ್ಯ ಮರುಹುಟ್ಟುವ ದಿನವನ್ನು ಸಡಗರದಿಂದ ಆಚರಿಸುತ್ತಿದ್ದರು. ಇದಕ್ಕೆ Winter Festival ಎಂದು ಕರೆಯುತ್ತಿದ್ದರು.

ಸಂಕ್ರಾಂತಿ, ಜನವರಿ 14-15 ರಂದು ಭಾರತದಲ್ಲಿ ಬರುತ್ತದೆ. ಆದರೆ ವಿಂಟರ್ ಫೆಸ್ಟಿವಲ್ ಯುರೋಪಿನಲ್ಲಿ ಡಿಸೆಂಬರ್ 24 ಕ್ಕೆ ಬರುತ್ತದೆ. ಅದೇ ವಿಂಟರ್ ಸಾಲ್‌ಸ್ಟಿಸ್, ಜ್ಯೋತಿರ್ಶಾಸ್ತ್ರದ ಪ್ರಕಾರ, ಡಿಸೆಂಬರ್ 21ಕ್ಕೆ ಬರುತ್ತದೆ. ಇದು ಹೇಗೆ?

ಭೂಮಿಯ ಉತ್ತರ ದಕ್ಷಿಣದ ಅಕ್ಷ, ಪ್ರತಿ 20,000 ವರ್ಷಕ್ಕೊಮ್ಮೆ ಒಂದು ಚಕ್ರ ತಿರುಗುತ್ತದೆ. ಆದರೆ 20,000 ವರ್ಷಕ್ಕೊಮ್ಮೆ ಇಂದಿನ ಧ್ರುವ ನಕ್ಷತ್ರವಾಗುತದೆ. ಹೀಗೆ ಸಂಕ್ರಾಂತಿ ಕೂಡ ಹಿಂದೆ, ಹಿಂದೆ ಮತ್ತೆ ಮುಂದೆ ಮುಂದೆ ಸರಿದಾಡುತ್ತದೆ. ಈಜಿಪ್ಟ್ ಬಹು ಪ್ರಾಚೀನವಾದ ಸಂಸ್ಕೃತಿ. ಅದರಲ್ಲಿ 'ರಾ' ಅಂದರೆ ಸೂರ್ಯನೇ ದೊಡ್ಡ ದೇವರು. ಈ ಸಂಸ್ಕೃತಿಯಿಂದ ಪ್ರಭಾವವಾದ ನಂತರದ ರೋಮನ್ ಸಂಸ್ಕೃತಿಯಲ್ಲಿ ಇದೇ ದೇವರನ್ನು ಮಿತ್ರಾ ಅಂದರೆ ಮಿತ್-ರಾ ಪೂಜಿಸಲಾಗುತ್ತಿತ್ತು. ಅವನಿಗಾಗಿ ರೋಮ್‌ನಲ್ಲಿ ಬಹು ದೊಡ್ಡ ದೇವಾಲಯವನ್ನು ಕಟ್ಟಿದ್ದರು. ಈ ದೇವರಿಗೆ ಅರ್ಚನೆ ಮಾಡಲು ಕೇವಲ ಬ್ರಹ್ಮಚಾರಿಗಳನ್ನೇ ನೇಮಕ ಮಾಡಲಾಗುತ್ತಿತ್ತು. ಕ್ರಿ. ಶ. 324 ರಲ್ಲಿ, ರೋಮನ್ ಚಕ್ರವರ್ತಿ, ಕ್ರೈಸ್ತಮತವನ್ನು ಸೇರಿದ ಮೇಲೆ, "ಮಿತ್ರಾ" ದೇವರ ಗುಡಿಯನ್ನು ಒಡೆದು, ಅದರ ಪಾಯದ ಮೇಲೆಯೇ ಸೇಂಟ್ ಪೀಟರ್ ಡೋಮ್ ಅನ್ನು ಕಟ್ಟಲಾಯಿತು.

ಏಸುಕ್ರಿಸ್ತ ಮಾರ್ಚ್ 15 ರಂದು ಹುಟ್ಟಿದ್ದರೂ ಕೂಡ ರೋಮನ್ನರು ತಾವು, ಸೂರ್ಯದೇವತೆಯ ಹುಟ್ಟುಹಬ್ಬವನ್ನು ಡಿಸೆಂಬರ್ 24 ರಂದು ಆಚರಿಸುತ್ತಿದ್ದುದನ್ನು, ಬದಲು ಮಾಡಲು ಇಷ್ಟಪಡದೆ, ಏಸು ಕ್ರಿಸ್ತ ಹುಟ್ಟಿದ ದಿನ ಡಿಸೆಂಬರ್ 24 ಎಂದು ಘೋಷಿಸಿದ್ದರಿಂದ, ವಿಂಟರ್ ಉತ್ಸವ ಕ್ರಿಸ್‌ಮಸ್ ಎಂದಾಯಿತು. ವಿಂಟರ್ ಉತ್ಸವದಲ್ಲಿ ಜಾತ್ರೆ, ಸಂತೆ ಎಲ್ಲವೂ ನಡೆಯುತ್ತಿದ್ದು, ಒಂದು ಮಹಾ ಮಾರುಕಟ್ಟೆಯಾಗಿ ರೋಮನ್ನರ ಆರ್ಥಿಕ ವ್ಯವಸ್ಥೆಯಾಗಿದ್ದರ ಕಾರಣ ಅಂದೇ ಏಸು ಕ್ರಿಸ್ತನ ಹುಟ್ಟುಹಬ್ಬ ಆಚರಣೆಯಾಯಿತು. ●

---

## ನೀತಿ ಕತೆಗಳು

ಕಡೆಗೂ, ಎಲ್ಲರೂ ಅಂದುಕೊಂಡಿದ್ದ ಸಮಯ ಬಂತು. ಸುಬ್ರಾಯ ಶರ್ಮ ಅವಸರದಲ್ಲಿ ಎಂಬಂತೆ ತನ್ನ ಮನೆಗೆ ಸಮೀಪದ ಕೋಣೆ ಹೊಕ್ಕ. ಸ್ವಲ್ಪ ದೂರದಲ್ಲಿ ಮಾರು ವೇಷದಲ್ಲಿದ್ದ ರಾಜ ಇದನ್ನು ಗಮನಿಸಿದ. ಸುಬ್ರಾಯ ಕಳ್ಳನಂತೆ ಸುತ್ತಮುತ್ತ ನೋಡಿ ಕೋಣೆ ಪ್ರವೇಶಿಸಿದನಲ್ಲ? ಅದನ್ನು ಕಂಡು ರಾಜನ ರಕ್ತ ಕುದಿಯಿತು. ಅವನ ದೇಶದ್ರೋಹ ಏನಿರಬಹುದು ಎಂದು ನೆನಪು ಮಾಡಿಕೊಂಡು ನಿಂತಲ್ಲೇ ಕಟಕಟನೆ ಹಲ್ಲು ಕಡಿದ. ನಂತರ, ತನ್ನನ್ನು ತಾನೇ ನಿಗ್ರಹಿಸಿಕೊಂಡು, ಸಮಾಧಾನ ಮಾಡಿಕೊಂಡು ಸದ್ದಾಗದಂತೆ ಆ ಕೋಣೆಯ ಬಳಿ ಬಂದು, ದಬದಬನೆ ಬಾಗಿಲು ಬಡಿದ.

ಯಾರದು?' ಎಂದ ಸುಬ್ರಾಯನ ತಣ್ಣಗಿನ ದನಿಗೆ ನಾನು, ಬಾಗಿಲು ತೆಗೆ' ಎಂದ ರಾಜ. ಬಾಗಿಲು ತೆರೆಯಿತು. ರಾಜ ಕತ್ತಿ ಹಿಡಿದುಕೊಂಡೇ ಒಳಗೆ ಬಂದ. ಸುಬ್ರಾಯನನ್ನು ಬಿಟ್ಟು ಯಾವ ಕುನ್ನಿಯೇ ಕಂಡರೂ ಅದರ ತಲೆ ಹಾರಿಸಬೇಕು ಎಂಬುದು ರಾಜನ ಎಣಿಕೆಯಾಗಿತ್ತು. ಆದರೆ, ಅಲ್ಲಿ ಯಾರೆಂದರೆ ಯಾರೂ ಇರಲಿಲ್ಲ. ಬದಲಿಗೆ ಸುಬ್ರಾಯನ ಹಳೆಯ ಸಂಗಾತಿಗಳಾದ ಹರಕು ಬಟ್ಟೆ, ಅಲ್ಯುಮಿನಿಯಂ ತಟ್ಟೆ ಹಾಗೂ ಊರುಗೋಲಿತ್ತು. ಅವನನ್ನೇ ಬೆರಗಿನಿಂದ ನೋಡಿದ ರಾಜ – ನೀನು ದಿನಾಲೂ ಇಲ್ಲಿಗೆ ಬರ್‍ತೀಯಂತೆ. ಸ್ವಲ್ಪ ಹೊತ್ತು ಇಲ್ಲೇ ಇರ್‍ತೀಯಂತೆ. ಇಲ್ಲಿ ನೀನು ಏನು ಮಾಡ್ತಿರ್‍ತೀಯ? ಹೇಳು...' ಅಂದ.

ಮಹಾಪ್ರಭುಗಳೇ, ಒಂದು ಕಾಲದಲ್ಲಿ ಬೀದೀಲಿ ಭಿಕ್ಷೆ ಬೇಡುತ್ತಿದ್ದವ ನಾನು. ಅಂಥವನಿಗೆ ಈಗ ರಾಜ ಮರ್ಯಾದೆ ಸಿಗುತ್ತಿದೆ. ಅಧಿಕಾರದ ಅಮಲಿನಲ್ಲಿ ತೇಲಬೇಡ. ಈ ಹಿಂದೆ ನೀನು ಏನಾಗಿದ್ದೆ ಎಂಬುದನ್ನು ಮರೆಯಬೇಡ ಎಂದು ನನಗೆ ನಾನೇ ಹೇಳಿಕೊಳ್ಳುವ ಸಲುವಾಗಿ ದಿನವೂ ಕೋಣೆಗೆ ಬರುತ್ತಿದ್ದೆ. ಈ ಹಳೆಯ ಸಂಗಾತಿಗಳ ಮುಂದೆ ನಿಂತು ಆ ಮಾತುಗಳನ್ನು ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ. ನೀವು ಯಾರನ್ನೋ ಬೇಟೆಯಾಡಲು ಬಂದಂತಿದೆಯಲ್ಲ, ಯಾರ ನಿರೀಕ್ಷೆಯಲ್ಲಿ ಬಂದಿರಿ ಮಹಾಪ್ರಭು ಎಂದ ಸುಬ್ಬ ಉರುಫ್ ಸುಬ್ರಾಯ ಶರ್ಮ.

ಈ ಮಾತು ಕೇಳಿ ರಾಜನಿಗೆ ತನ್ನ ಕುರಿತು ನಾಚಿಕೆಯಾಯಿತು. ಸುಬ್ರಾಯನ ವಿಷಯವಾಗಿ ಏನೇನೋ ಕಲ್ಪಿಸಿಕೊಂಡಿದ್ದಕ್ಕೆ ಅಸಹ್ಯ ಅನ್ನಿಸಿತು. ಆತ ಏನೊಂದೂ ಮಾತಾಡದೆ, ಸುಬ್ರಾಯನನ್ನು ಬಾಚಿ ತಬ್ಬಿಕೊಂಡ. ಆ ಅಪ್ಪುಗೆ, ಅದರ ಬಿಸುಪು ಜತೆಗೇ ಇದ್ದ ಮೌನ ಅದೆಷ್ಟೊ ಪ್ರಶ್ನೆಗಳಿಗೆ ಉತ್ತರ ಹೇಳಿತು. . .




# ಮೈಸೂರು ಅಸೋಸಿಯೇಷನ್ ಮುಂಬಯಿ

## ಕನ್ನಡ ಸಾಹಿತ್ಯ ಪರಿಷತ್ತು ಮುಂಬಯಿ

ಶನಿವಾರ

**ಡಿಸೆಂಬರ್ 22, 2018, ಸಂಜೆ 5.00 ಕ್ಕೆ**

## “ಕನ್ನಡಕ್ಕೆ ಅನಕೃ ಅವರ ಕೊಡುಗೆ”

ಶ್ರೀ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರಿಂದ

**ಹೆಸರಾಂತ ಕನ್ನಡ ಬರಹಗಾರರು ಮತ್ತು ವಿಮರ್ಶಕರು**

ಮೈಸೂರು ಅಸೋಸಿಯೇಷನ್ ಕಿರುಸಭಾಗೃಹದಲ್ಲಿ

ಸಾಹಿತ್ಯಾಸಕ್ತರೆಲ್ಲರೂ ನಲುಬರುವು

**ಕನ್ನಡ ಸಾಹಿತ್ಯ ಪರಿಷತ್ತು, ಮುಂಬಯಿ**
ಡಾ. ಗಣಪತಿ ಶಂಕರಲಿಂಗ
ಅಧ್ಯಕ್ಷರು

**ಮೈಸೂರು ಅಸೋಸಿಯೇಷನ್**
ಕಮಲಾ ಕೆ.
ಅಧ್ಯಕ್ಷರು

Date of Publication : 5th of every month RNI No. 040015 / 83
Regd. No. MNE / 93 / 2018-20 Date of Posting:5/6th of every month
at Mumbai Patrika Channel Sorting Office G.P.O.

ಮುಂಬರುವ ಕಾರ್ಯಕ್ರಮಗಳು *Forthcoming Programmes*

## ಮೈಸೂರು ಅಸೋಸಿಯೇಷನ್ ಮುಂಬೈ ಮತ್ತು ನೃತ್ಯಾಂಜಲಿ, USA

ನೀಡುವ

## "ಭಕ್ತಿ ಮಂಜರಿ"

**ಗುರುವಾರ ಡಿಸೆಂಬರ್ 27, 2018 ರ ಸಂಜೆ 6.30ಕ್ಕೆ**

### ಅಮೇರಿಕಾದ ನೃತ್ಯಾಂಜಲಿ ತಂಡದವರಿಂದ

**ಅಪೂರ್ವ ನೃತ್ಯ - ಗುಂಜನ**

ಸಂಯೋಜನೆ : ಶ್ರೀಮತಿ ಮೀನಾ ತೆಲ್ಲಿಕಚರ್ಲ



ಭಕ್ತಿಪಂಥದ ವಿವಿಧ ರೂಪಗಳನ್ನು ಗುರುತಿಸುವ ಈ ನೃತ್ಯರೂಪಕವನ್ನು, ಅಪರೂಪವಾದ ರೀತಿಯಲ್ಲಿ ಸಂಯೋಜನೆ ಮಾಡಲಾಗಿದ್ದು, ಇದಕ್ಕೆ USA ಸರ್ಕಾರದ ಮಾನ್ಯತೆ ಸಿಕ್ಕಿದೆ.

**ತಪ್ಪದೆ ಬಂದು ನೋಡಿ**




**2019, ಹೊಸ ವರ್ಷವನ್ನು ಎದಿರುಗೊಳ್ಳುವುದು**
**ಮಂಗಳವಾರ ಡಿಸೆಂಬರ್ 31, 2018ರ**
**ರಾತ್ರಿ 1.00 ಕ್ಕೆ**
**ಅಸೋಸಿಯೇಷನ್ ಸದಸ್ಯರೆಲ್ಲವೂ**
**ಆಟಗಳನ್ನಾಡುತ್ತಾ, ಹಾಡುತ್ತ, ಕುಣಿಯುತ್ತಾ**
**ಸವಿಯೂಟವನ್ನು ಮೆಲ್ಲುತ್ತಾ**
**ಹೊಸ ವರ್ಷವನ್ನು ಎದಿರುಗೊಳ್ಳುತ್ತಾರೆ**
**ತಾವೂ ಬನ್ನಿ, ಸೇರಿಕೊಂಡು, ನಲಿದಾಡಿ.**

Edited, Printed & Published by Dr. Girija Shastri, On behalf of the Mysore Association, Mumbai. Tel.: 2402 4647, 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361